ಬೀದರ * ಕಲಬುರಗಿ * ಯಾದಗಿರಿ * ರಾಯಚೂರು * ಕೊಪ್ಪಳ * ಬಳ್ಳಾರಿ * ಬಾಗಲಕೋಟೆ * ವಿಜಯಪೂರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಸಾರ

Postal Registration No. BDR/054/2026-2027 EMAIL ID:mallammanudi@gmail.com E- Paper WWW.mallammanudi.in

# ಮಲ್ಲಮ್ಮ ನುಡಿ

ಸತ್ಯಮೇವ ಜಯತೆ

Mallammanudi Regional NewsPaper

ಸಂಪಾದಕರು: ರಮೇಶರೆಡ್ಡಿ

ಪ್ರಾದೇಶಿಕ ಕನ್ನಡ ದಿನಪತ್ರಿಕೆ ಮೊ.9448604450

VOLUME-ಸಂಪುಟ:12 | ISSUE- ಸಂಚಿಕೆ: 342 | PAGE- ಪುಟ 8 | ಭಾನುವಾರ 12.01.2025 ಬೀದರ | RNI NO:KARKAN/2011/48371 | RS.ಬೆಲೆ 2/-

# ಕುರ್ಚಿ ಭದ್ರತೆಗೆ ಕಾಂಗ್ರೆಸ್ ನಾಯಕರ ಆಟ: ಬೊಮ್ಮಾಯಿ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಜ.11:ರಾಜ್ಯ ಕಾಂಗ್ರೆಸ್ ನಾಯಕರು ಜನರ ಸಮಸ್ಯೆಗೆಸ್ಪಂದಿಸದೆ ತಮ್ಮ ಕುರ್ಚಿ ಭದ್ರತೆಗೆ ಆಟ ಆಡುತ್ತಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಆರೋಪಿಸಿದ್ದಾರೆ.


ಬಾಗಲಕೋಟೆಯಲ್ಲಿ ಶನಿವಾರ ಮಾಧ್ಯಮದವರು ಕಾಂಗ್ರೆಸ್‌ನಲ್ಲಿ ಡಿನ್ನರ್ ಪಾಲಿಟಿಕ್ಸ್ ಕುರಿತು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಡಿನ್ನರ್ ಆದರೂ ಮಾಡಲಿ, ಲಂಚ್ ಮಾಡಲಿ, ಅದು ಅವರ ಆಂತರಿಕ ವಿಚಾರ. ರಾಜ್ಯ ಇಷ್ಟು ಆರ್ಥಿಕವಾಗಿ ಸಂಕಷ್ಟದಲ್ಲಿ ಇದೆ. ಕಾನೂನು ಸುವ್ಯವಸ್ಥೆ ಹಾಳಾಗಿರುವ ಜೊತೆಗೆ ದಲಿತರ ಮೇಲೆ ದೌರ್ಜನ್ಯ ಆಗುತ್ತಿದೆ. ವಿದ್ಯಾರ್ಥಿಗಳಿಗೆ ಸರಿಯಾದ ಶಿಷ್ಯವೇತನ ಸಿಗುತ್ತಿಲ್ಲ. ರೈತರಿಗೆ ಪರಿಹಾರ ಸಿಗುತ್ತಿಲ್ಲ. ಬಾಣಂತಿಯರ ಸರಣಿ ಸಾವು ಆಗುತ್ತಿದೆ ಹೀಗಿರುವಾಗ ಅಧಿಕಾರದ ಆಸೆಗಾಗಿ ಏನೆಲ್ಲಾ ಮಾಡುತ್ತಿದ್ದಾರೆ ಎಂದರು.

ಡಿಸಿಎಂ ಡಿ.ಕೆ.ಶಿವಕುಮಾರ್ ದೇಗುಲಗಳಿಗೆ ಭೇಟಿ ನೀಡಿ ಹೋಮ,ಹವನ ಮಾಡಿಸುತ್ತಿರುವ ಕುರಿತು ಕೇಳಿದ ಪ್ರಶ್ನೆಗೆ, ಅದು ಅವರ ವೈಯಕ್ತಿಕ ವಿಚಾರ. ಯಾವ ಸಂದರ್ಭದಲ್ಲಿ ಜನರ ಸಂಕಷ್ಟಕ್ಕೆ ಧಾವಿಸಬೇಕಿತ್ತು ಅದನ್ನು ಮಾಡದೇ ಸರ್ಕಾರ, ಮಂತ್ರಿಗಳು ಇವತ್ತು ಅವರವರ ವೈಯಕ್ತಿಕ, ಕುರ್ಚಿಗಾಗಿ ರಣನೀತಿಗಳನ್ನು ಮಾಡುತ್ತಿದ್ದಾರೆ. ಜನರು ಸಂಕಷ್ಟದಲ್ಲಿ ಇರುವುದನ್ನು ನಿರ್ಲಕ್ಷ್ಯ ಮಾಡಿರುವುದು ರಾಜ್ಯದ ದುರ್ದೈವ ಎಂದು ಬೊಮ್ಮಾಯಿ ಬೇಸರ ವ್ಯಕ್ತಪಡಿಸಿದರು.

ರಾಜ್ಯದ ಆರ್ಥಿಕ ಪರಿಸ್ಥಿತಿ ಸಂಪೂರ್ಣ ಹದಗೆಟ್ಟಿದೆ. ಅವರ ಪಕ್ಷದ ಶಾಸಕರು ಅಭಿವೃದ್ಧಿಗೆ ಅವಕಾಶ ಸಿಗುತ್ತಿಲ್ಲ ಎನ್ನುತ್ತಿದ್ದಾರೆ. ಒಂದು ವರ್ಷದಲ್ಲಿ ಅಭಿವೃದ್ಧಿಗಾಗಿ ಇದ್ದ 54 ಸಾವಿರ ಕೋಟಿ ರೂ. ತಮ್ಮ ರಾಜಕೀಯ ಲಾಭಕ್ಕಾಗಿ ಗ್ಯಾರಂಟಿಗಾಗಿ ಕೊಟ್ಟಿದ್ದಾರೆ. ಅದರಿಂದ ಆರ್ಥಿಕ ಸಂಕಷ್ಟ ಇದೆ. ಅದೇ ಕಾರಣಕ್ಕೆ ಹಾಲು, ನೀರು, ಆಲ್ಕೊಹಾಲ್, ಸ್ಟ್ಯಾಂಪ್ ಪೇಪರ್, ಮೋಟರ್ ವೆಹಿಕಲ್, ಪೆಟ್ರೋಲ್, ಡಿಸೇಲ್ ಗೆ ಎಲ್ಲದ್ದಕ್ಕೂ ತೆರಿಗೆ ಹಾಕಿದ್ದಾರೆ. ಇನ್ನೂ ಹಾಕುತ್ತಾರೆ. ಇದನ್ನು ನೋಡಿದರೆ ರಾಜ್ಯದಲ್ಲಿ 40 ಸಾವಿರ ಕೋಟಿ ರೂ. ವರ್ಷದಲ್ಲಿ ಅಧಿಕ ತೆರಿಗೆಯನ್ನು ಜನರ ಮೇಲೆ ಭಾರ ಹಾಕಿದ್ದಾರೆ. ಇದರಿಂದಲೇ ಗೊತ್ತಾಗುತ್ತೆ ರಾಜ್ಯ ಆರ್ಥಿಕವಾಗಿ ದಿವಾಳಿಯಾಗಿದೆ ಎಂಬುದು ಎಂದರು.

ಗುತ್ತಿಗೆದಾರ ಸಚಿನ ಪಂಚಾಳ ಆತ್ಮಹತ್ಯೆ ಪ್ರಕರಣದಲ್ಲಿ ಸಚಿವ ಪ್ರಿಯಾಂಕ್ ಖರ್ಗೆ ಆಪ್ತ ರಾಜು ಕಪನೂರ ಬಂಧನದ ಕುರಿತು ಪ್ರತಿಕ್ರಿಯಿಸಿದ ಅವರು, ಹಿಂದೆ ನಮ್ಮ ಸರ್ಕಾರದಲ್ಲಿ ಈಶ್ವರಪ್ಪ ಅವರದ್ದು ಏನೂ ಪಾತ್ರ ಇರಲಿಲ್ಲ. ಆದರೆ ತನಿಖೆ ಮುಕ್ತವಾಗಿರಬೇಕು ಎಂದು ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಿದ್ದರು. ಇವತ್ತು ಅದೆಲ್ಲವನ್ನು ಗಾಳಿಗೆ ತೂರಿ ತನಿಖೆ ಮಾಡುತ್ತಿದ್ದಾರೆ. ತನಿಖೆಯಲ್ಲಿ ಹಲವಾರು ವಿಚಾರಗಳು ಸಾರ್ವಜನಿಕರಿಗೆ ಬರುತ್ತಿವೆ. ತನಿಖೆಯಲ್ಲಿ ಎಲ್ಲವೂ ಹೊರಬರುತ್ತವೆ ಎಂದು ಹೇಳಿದರು.

ಬಿಜೆಪಿಯಲ್ಲಿ ಬಣಗಳಾಗಿರುವ ಬಗೆಗಿನ ವಿಚಾರಕ್ಕೆ ಉತ್ತರಿಸಿದ ಬೊಮ್ಮಾಯಿ, ನಮ್ಮದೇನು ಬಹಳ ದೊಡ್ಡ ಸಮಸ್ಯೆ ಇಲ್ಲ. ಹೈಕಮಾಂಡ್ ಈಗಾಗಲೇ ಈ ಬಗ್ಗೆ ವಿಚಾರ ಮಾಡಿದೆ. ಕೆಲವೇ ದಿನಗಳಲ್ಲಿ ಆ ಸಮಸ್ಯೆ ಸಂಪೂರ್ಣವಾಗಿ ಬಗೆ ಹರಿಯುತ್ತದೆ ಎಂದರು.



## ಕಾರಂಜಾ ಸಂತ್ರಸ್ತರ ಬೇಡಿಕೆಗೆ ಸರಕಾರದ ಭರವಸೆ
# ಅಹೋರಾತ್ರಿ ಸತ್ಯಾಗ್ರಹ ಅಂತ್ಯ



ಮಲ್ಲಮ್ಮ ನುಡಿ ವಾರ್ತೆ

ಬೀದರ.ಜ.11:ಗೋದಾವರಿ ಜಲಾನಯನ ಪ್ರದೇಶದ ಕರ್ನಾಟಕದ ಅದರಲ್ಲೂ ಬೀದರ ಜಿಲ್ಲೆಯ ದೊಡ್ಡ ನೀರಾವರಿ ಯೋಜನೆಯಾದ ಕಾರಂಜಾ ನೀರಾವರಿ ಯೋಜನೆಗೆ ಕಳೆದ ಐದು ದಶಕಗಳ ಪೂರ್ವದಲ್ಲಿ ಯಾವುದೇ ಷರತ್ತು ಇಲ್ಲದೆ ತಾಯಿ ಸಮಾನವಾದ ಅನ್ನ ನೀಡುವ ಭೂಮಿಯನ್ನು ಕಾರಂಜಾ ನೀರಾವರಿ ಯೋಜನೆಯ ನಿರ್ಮಾಣಕ್ಕೆ ರೈತ ಸಂತ್ರಸ್ತರು ಜಮೀನು ನೀಡಿದರು. ಸರಕಾರ ಆ ಸಂದರ್ಭದಲ್ಲಿ ಸಾಂಕೇತಿಕವಾಗಿ ನೀಡಿದ ಹಣ ಪಡೆದ ಮುಗ್ದ ರೈತ ಸಂತ್ರಸ್ತರು ನಂತರ ದಿನಗಳಲ್ಲಿ ತಮ್ಮ ಕುಟುಂಬಕ್ಕೆ ಇದರಿಂದ ಭವಿಷ್ಯವಾಗಬಹುದೆಂಬ ಆಶಯ ಇಟ್ಟುಕೊಂಡಿದ್ದರು. ಆದರೆ, ಮುಂದೆ ರೈತ ಸಂತ್ರಸ್ತರ ಆಶೆ ನಿರಾಸೆಯಾಯಿತು. ಹಣ ಉಳ್ಳವರು ಕೋರ್ಟಿಗೆ ಹೋಗಿ ಸಮರ್ಪಕವಾದ ಪರಿಹಾರ ಧನ ಪಡೆದರು. ಹಣ ಇಲ್ಲದ ಬಡ ರೈತ ಸಂತ್ರಸ್ತರು ಕೋರ್ಟಿಗೆ ಹೋಗಲು ಆಗದ ಕಾರಣ ಆ ಸಂದರ್ಭದಲ್ಲಿ ಕೇವಲ 3,600/- ರಿಂದ 7,200/- ಪ್ರತಿ ಎಕರೆಗೆ ಹಣ ಪಡೆದು- ಕೊಂಡರು. ಕೋರ್ಟಿಗೆ ಹೋದ ಸಂತ್ರಸ್ತರು 88,000/- ದಿಂದ 15,00,000/- ಪ್ರತಿ ಎಕರಿಗೆ ಹಣ ಪದೆದಿರುವುದು

(2ನೇ ಪುಟ ನೋಡಿ)

# ಕೊರೆಯುವ ಚಳಿಗೆ ತತ್ತರಿಸುತ್ತಿರುವ ವಸತಿ ನಿಲಯದ ವಿದ್ಯಾರ್ಥಿಗಳು?

(ಮಲ್ಲಮ್ಮ ನುಡಿ ವಾರ್ತೆ)

ಹುಮನಾಬಾದ:-ತಾಲೂಕಿನ ಹಳ್ಳಿಖೇಡ(ಕೆ) ಗ್ರಾಮದ ಹೊರವಲದಲ್ಲಿರುವ ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಮುರಾರ್ಜಿ ದೇಸಾಯಿ (ಬಾಲಕಿಯರ) ವಸತಿ ನಿಲಯದಲ್ಲಿ ವಿದ್ಯಾರ್ಥಿನಿಯರಿಗೆ ಬಿಸಿ ನೀರು ಸಿಗದೇ ತತ್ತರಿಸುತ್ತಿದ್ದಾರೆ ಎಂದು ತಿಳಿದು ಬಂದಿದೆ. ಕೆಲ ವಿದ್ಯಾರ್ಥಿಗಳು ತಮ್ಮ ಹೆಸರು ಹೇಳಲು ಇಚ್ಚಿಸದೆ ಅಲ್ಲಿನ ಸಮಸ್ಯೆಗಳ ಕುರಿತು ಪತ್ರಿಕೆಗೆ ಅಲ್ಲಿನ ಮಾಹಿತಿ ನೀಡಿದ್ದಾರೆ. ಇಡೀ ಕರ್ನಾಟಕ ರಾಜ್ಯದಲ್ಲಿ ಚಳಿಗೆ ಜನರು ತತ್ತರಿಸುತ್ತಿದ್ದಾರೆ, ಇಲ್ಲಿನ ವಿದ್ಯಾರ್ಥಿನಿಗಳು ಕೂಡ ಸಮಯಕ್ಕೆ ಸರಿಯಾಗಿ ಬಿಸಿ ನೀರು ಇಲ್ಲದೆ ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ ಎನ್ನಲಾಗಿದೆ. ಸಂಭಂದಪಟ್ಟವರು ಈ ವಸತಿ ನಿಲಯಕ್ಕೆ ಭೇಟಿ ನೀಡಿ ಇಲ್ಲಿನ ಸಮಸ್ಯೆಗಳಿಗೆ ಪರಿಹಾರ ಒದಗಿಸಿ ವಿದ್ಯಾರ್ಥಿಗಳ ನೆರವಿಗೆ ಬರಬೇಕು ಎಂಬ ಮನವಿ ಸಾರ್ವಜನಿಕರದಾಗಿದೆ.

# ಮನೆಗಳ್ಳತನ
## ಇಬ್ಬರು ಕಳ್ಳರ ಬಂಧನ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಜ11:ತಾಲೂಕಿನ ದೇವನಾಳ ಆರ್.ಸಿ ಹಾಗೂ ಖಜ್ಜಿಡೋಣಿ ಗ್ರಾಮದಲ್ಲಿ ಮನೆಗಳ್ಳತನ ಹಾಗೂ ಗದ್ದನಕೇರಿ ಕ್ರಾಸ್‌ನಲ್ಲಿ ನಡೆದಿದ್ದ ಕಳ್ಳತನ ಪ್ರಕರಣ ಭೇದಿಸಿದ ಕಲಾದಗಿ ಪೊಲೀಸರು, ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ.

(2ನೇ ಪುಟ ನೋಡಿ)

## ಕುಡಿಯುವ ನೀರಿನ ಕಾಮಗಾರಿ ವಿಳಂಬಕ್ಕೆ
# ಶಾಸಕ ಪ್ರಭು ಚವಾಣ್ ಗರಂ



ಬೀದರ. ಜ. 12 : ಔರಾದ್ ಮತ್ತು ಕಮಲನಗರ ಪಟ್ಟಣಕ್ಕೆ ಮಂಜೂರಾಗಿರುವ ಕುಡಿಯುವ ನೀರಿನ ಕಾಮಗಾರಿ ಸ್ಥಳಕ್ಕೆ ಶಾಸಕ ಪ್ರಭು ಚವಾಣ್ ಅವರು ಶನಿವಾರ ಭೇಟಿ ಕೊಟ್ಟು ಪರಿಶೀಲಿಸಿದರು.

ಭಾಲ್ಕಿ ತಾಲ್ಲೂಕಿನ ತೇಗಂಪೂರ ಗ್ರಾಮದ ಹೊರವಲಯದಲ್ಲಿ ನಿರ್ಮಾಣವಾಗಲಿರುವ ಕುಡಿಯುವ ನೀರಿನ ಟ್ಯಾಂಕ್, ಪೈಪ್‌ಲೈನ್ ಕಾಮಗಾರಿ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದರು.

ಬಳಿಕ ಕಾರಂಜಾ ಜಲಾಶಯದ ಬಳಿ ನಿರ್ಮಾಣವಾಗುತ್ತಿರುವ ಜಾಕ್‌ವೆಲ್ ಕಾಮಗಾರಿಯನ್ನು ವೀಕ್ಷಿಸಿದರು. 'ಕಾಮಗಾರಿಯ ಮೂಲ ಸ್ವರೂಪವನ್ನು ಬದಲಿಸಿರುವುದೇಕೆ' ಎಂದು ಶಾಸಕ ಚವಾಣ್ ಅವರು ಎಂಜಿನಿಯರ್‌ಗಳನ್ನು ಪ್ರಶ್ನಿಸಿದರು. 'ಸರ್ಕಾರದ ಸೂಚನೆಯಂತೆ ಮಾಡಲಾಗಿದೆ' ಎಂದು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ರವೀಂದ್ರ ಅವರು ಹೇಳಿದಾಗ ಸಿಟ್ಟಾದರು. 'ಈ ಯೋಜನೆ ಮಂಜೂರು ಮಾಡಿಸಿದ್ದು ನಾನು. 2023ರಲ್ಲಿ ಬಿಜೆಪಿ ಸರ್ಕಾರದ ಅವಧಿಯಲ್ಲಿ ಸಂಪುಟದಲ್ಲಿ ಒಪ್ಪಿಗೆ ಪಡೆದು, ?84.81 ಕೋಟಿ ಮಂಜೂರು ಮಾಡಲಾಗಿತ್ತು. ಒಂದು ಸಲ ಸಂಪುಟದಲ್ಲಿ ಮಂಜೂರಾದ ನಂತರ ಯಾವುದೇ ಕಾರಣಕ್ಕೂ ಬದಲಿಸುವಂತಿಲ್ಲ. ಬದಲಿಸಿದರೂ ಈ ವಿಷಯ ನನ್ನ ಗಮನಕ್ಕೆ ತಂದಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

'ಎರಡು ವರ್ಷಗಳಲ್ಲಿ ಈ ಕಾಮಗಾರಿ ಪೂರ್ಣಗೊಳ್ಳಬೇಕಿತ್ತು. ಈಗಾಗಲೇ ಒಂದು ವರ್ಷ ಕಳೆದು ಹೋಗಿದೆ. ಇದುವರೆಗೆ ಕೆಲಸವೇ ಆರಂಭಗೊಂಡಿಲ್ಲ. ಇನ್ನೊಂದು ವರ್ಷದಲ್ಲಿ ಹೇಗೆ ಮುಗಿಸುವಿರಿ' ಎಂದು ಪ್ರಶ್ನಿಸಿದರು. 'ಪೈಪ್‌ಲೈನ್ ಅಳವಡಿಕೆಗೆ ಅರಣ್ಯ ಇಲಾಖೆಯ ಮಂಜೂರಾತಿ ಬೇಕಿತ್ತು. ಜಾಕ್‌ವೆಲ್ ನಿರ್ಮಾಣಕ್ಕೆ ಕಾರಂಜಾ ಜಲಾಶಯದವರ ಅನುಮತಿ ಅಗತ್ಯ. ಇದ-ರಿಂದಾಗಿ ಸ್ವಲ್ಪ ವಿಳಂಬವಾಗಿದೆ. ಗುತ್ತಿಗೆದಾರರು ಒಂದು ವರ್ಷದೊಳಗೆ ಮುಗಿಸುವುದಾಗಿ ತಿಳಿಸಿದ್ದಾರೆ' ಎಂದು ರವೀಂದ್ರ ಹೇಳಿದರು. ಆದರೆ, ಅದಕ್ಕೆ ಚವಾಣ್, 'ಎರಡು ವರ್ಷಗಳಲ್ಲಿ ಆಗಬೇಕಿರುವ ಕೆಲಸ ಒಂದು ವರ್ಷದಲ್ಲಿ ಹೇಗೆ ಆಗುತ್ತೆ. ಕಳಪೆ ಕಾಮಗಾರಿ ಮಾಡಿ ಕೈತೊಳೆದುಕೊಳ್ಳುತ್ತೀರಾ' ಎಂದು ಪ್ರಶ್ನಿಸಿದರು.

ಬಳಿಕ ಪತ್ರಕರ್ತರೊಂದಿಗೆ ಮಾತನಾಡಿದ ಪ್ರಭು ಚವಾಣ್, ಔರಾದ್ ಮತ್ತು ಕಮಲನಗರ ಪಟ್ಟಣ, ಇವುಗಳ ಮಾರ್ಗಮಧ್ಯದ 26 ಗ್ರಾಮಗಳಿಗೆ ಕಾರಂಜಾ

(2ನೇ ಪುಟ ನೋಡಿ)

# ಗಾಂಧಿ ಹಂತಕರ ಉದ್ದೇಶ
## ಸಫಲವಾಗಲು ಬಿಡಬೇಡಿ: ತುಷಾರ್ ಗಾಂಧಿ




ಮಲ್ಲಮ್ಮ ನುಡಿ ವಾರ್ತೆ

ಬೀದರ.ಜ.12: 'ಗಾಂಧೀಜಿ ಅವರನ್ನು ಹತ್ಯೆ ಮಾಡಿದವರಿಗೆ ಅವರ ಉದ್ದೇಶದಲ್ಲಿ ಸಫಲರಾಗಲು ಬಿಡಬಾರದು' ಎಂದು ಮಹಾತ್ಮ ಗಾಂಧೀಜಿ ಅವರ ಮರಿ ಮೊಮ್ಮಗ ತುಷಾರ್ ಗಾಂಧಿ ತಿಳಿಸಿದರು.

ಕಲ್ಯಾಣ ಕರ್ನಾಟಕ ಪ್ರತಿಷ್ಠಾನದಿಂದ ನಗರದ ಚನ್ನಬಸವ ಪಟ್ಟದ್ದೇವರು ರಂಗಮಂದಿರದಲ್ಲಿ ಶುಕ್ರವಾರ ಏರ್ಪಡಿಸಿದ್ದ ಅಕ್ಷರ ಜ್ಯೋತಿ ಯಾತ್ರೆಯ ಸಮಾರೋಪ ಸಮಾರಂಭದ ನೇತೃತ್ವ ವಹಿಸಿ ಮಾತನಾಡಿದರು.

'ನಮ್ಮ ಸಮಾಜದಲ್ಲಿ ಪರಸ್ಪರ ದ್ವೇಷ, ಅನುಮಾನ ಜಾಸ್ತಿಯಾಗಿ ವಿಘಟನೆ ಹೆಚ್ಚಾಗುತ್ತಿದೆ. ಪ್ರಧಾನಮಂತ್ರಿ ಸೇರಿದಂತೆ ಎಲ್ಲರೂ ಈ ತರಹದ ವಿಷಯಗಳ ಬಗ್ಗೆ ಮಾತನಾಡುತ್ತಿದ್ದಾರೆ. ಆದರೆ, ದ್ವೇಷವನ್ನು ದ್ವೇಷದಿಂದ ದೂರ ಮಾಡಲು ಸಾಧ್ಯವಿಲ್ಲ. ಅದನ್ನು ಪ್ರೀತಿಯಿಂದ ದೂರ ಮಾಡಬಹುದು' ಎಂದು

(2ನೇ ಪುಟ ನೋಡಿ)

## ಜಿಲ್ಲಾ ಕೃಷಿಕ ಸಮಾಜದ ನೂತನ ಅಧ್ಯಕ್ಷರಾಗಿ ಸಿದ್ರಾಮಯ್ಯ ಸ್ವಾಮಿ ಅವಿರೋಧ ಆಯ್ಕೆ



ಬೀದರ.ಜ.11:ಬೀದರ ಜಿಲ್ಲೆಯ ಕೃಷಿಕ ಸಮಾಜದ 2025-26 ರಿಂದ 2029-30ನೇ ಸಾಲಿಗೆ 5 ವರ್ಷಗಳ ಅವಧಿಗೆ ಜಿಲ್ಲಾ ಕೃಷಿಕ ಸಮಾಜ ಬೀದರ ಘಟಕದ ನೂತನ ಜಿಲ್ಲಾ ಅಧ್ಯಕ್ಷರಾಗಿ ಸಿದ್ರಾಮಯ್ಯ ಎಸ್ ಸ್ವಾಮಿ ಸೇರಿದಂತೆ ಎಲ್ಲಾ ಪದಾಧಿಕಾರಿಗಳು ಅವಿರೋಧವಾಗಿ ಆಯ್ಕೆ ಆಗಿದ್ದಾರೆ. ಸಿದ್ರಾಮಯ್ಯ ಸ್ವಾಮಿ ಅವರು ಕಳೆದ ಮೂರು ದಶಕಗಳಿಂದ ಬೀದರ ಜಿಲ್ಲೆಯ ರೈತರ ಪರವಾಗಿ ಹೋರಾಡುತ್ತ ಅವರ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದಾರೆ. ಸರ್ಕಾರದಿಂದ ಸಿಗುವ ಸೇವಾ ಸೌಲಭ್ಯಗಳನ್ನು ರೈತಾಪಿ ಜನರಿಗೆ ಕೊಡಿಸುತ್ತಿದ್ದಾರೆ. ವಿವಿಧ ಬೆಳೆಗಳ ಕುರಿತು ಮತ್ತು ಇತರೆ ದವಸ ಧಾನ್ಯಗಳ ಬಗ್ಗೆ ಮಾಹಿತಿ ನೀಡುವದಲ್ಲದೆ ಆಗಾಗ ಜರಗುವ ಕೃಷಿ ಮೇಳ ಜಾನುವಾರು ಮೇಳಗಳಲ್ಲಿ ಭಾಗವಹಿಸಿ ಅವುಗಳಿಂದ ದೇಶದ ಬೆನ್ನುಲುಬಾದ ರೈತರಿಗೆ ತಿಳಿಸಿ ಅವುಗಳ ಲಾಭ ಕೊಡಿಸಿರುವರು. ಪತ್ರಕರ್ತರಾಗಿಯೂ ದುಡಿಯುತ್ತಿರುವ ಸ್ವಾಮಿ

(2ನೇ ಪುಟ ನೋಡಿ)

# ಒಂದನೇ ಪುಟದಿಂದ

## ಸಫಲವಾಗಲು ಬಿಡಬೇಡಿ: ತುಷಾರ್ ಗಾಂಧಿ

ಹೇಳಿದರು. ಸಮಾಜದಲ್ಲಿ ಸಹೋದರತ್ವ, ಪ್ರೇಮದ ಅಗತ್ಯವಿದೆ. ಪರಸ್ಪರರಲ್ಲಿ ನಂಬಿಕೆ ಮೂಡಬೇಕು. ಗಾಂಧೀಜಿ ಅವರು ಈ ದೇಶವನ್ನು ಒಂದಾಗಿಸಲು ಇಡೀ ಜೀವನ ಸವೆಸಿದ್ದರು. ಧರ್ಮ, ಜಾತಿ, ಭಾಷೆ, ಆರ್ಥಿಕ ಸ್ಥಾನಮಾನ ಎಲ್ಲದರ ಮೂಲಕ ನಮ್ಮನ್ನು ವಿಘಟಿಸಲಾಗುತ್ತಿದೆ. ದೊಡ್ಡ ಅಂತರ ಸೃಷ್ಟಿಸಲಾಗುತ್ತಿದೆ. ಧರ್ಮದ ಹೆಸರಿನಲ್ಲಿ ಭೇದಭಾವ ಮಾಡಲಾಗುತ್ತಿದೆ. ಸಮಾಜವನ್ನು ಒಗ್ಗೂಡಿಸಲು ಶ್ರಮಿಸಿದವರನ್ನು ನೆನೆಯುವ ತುರ್ತು ಅಗತ್ಯ ಈಗಿದೆ ಎಂದರು.

ನಮ್ಮ ಭವಿಷ್ಯ ಸುಧಾರಿಸಬೇಕಾದರೆ ವರ್ತಮಾನದಲ್ಲಿ ಮಕ್ಕಳು, ಯುವಕರಿಗಾಗಿ ನಾವೆಲ್ಲರೂ ಕೆಲಸ ಮಾಡಬೇಕಿದೆ. ಬಸವಕುಮಾರ ಪಾಟೀಲ ಅವರು ಕೈಗೊಂಡಿರುವ ಅಕ್ಷರಜ್ಯೋತಿ ಯಾತ್ರೆ ಬಹಳ ಮಹತ್ವದ ಕಾರ್ಯಕ್ರಮವಾಗಿದೆ. ಬಹುತೇಕರು ನಗರಗಳನ್ನು ಕೇಂದ್ರೀಕರಿಸಿ ಕೆಲಸ ಮಾಡುತ್ತಾರೆ. ಆದರೆ, ಗ್ರಾಮೀಣ ಭಾಗಗಳ ಕಡೆಗೆ ನೋಡುವುದಿಲ್ಲ. ಆದರೆ, ಬಸವಕುಮಾರ ಅವರು ಗಡಿಭಾಗದ ಗ್ರಾಮೀಣ ಪ್ರದೇಶಗಳನ್ನು ಗಮನದಲ್ಲಿ ಇಟ್ಟುಕೊಂಡು ಕೆಲಸ ಮಾಡುತ್ತಿದ್ದಾರೆ. ಹಳ್ಳಿಗಳಲ್ಲಿ ಕೆಲಸ ಮಾಡಬೇಕಾದ ಅಗತ್ಯವಿದೆ. ಇಂದು ಸನ್ಮಾನಿತರಾದ ಸಾಧಕರಲ್ಲಿ ಬಹುತೇಕರು ಹಳ್ಳಿಗಳಲ್ಲಿ ಬದಲಾವಣೆಗಳನ್ನು ತಂದವರು ಎಂದು ತಿಳಿಸಿದರು.

ಶಾಹೀನ್ ಶಿಕ್ಷಣ ಸಂಸ್ಥೆ ಸಮೂಹದ ಅಧ್ಯಕ್ಷ ಅಬ್ದುಲ್ ಖದೀರ್ ಮಾತನಾಡಿ, ಕಳೆದ 20 ವರ್ಷಗಳಿಂದ ಬಸವಕುಮಾರ ಪಾಟೀಲ ಅವರು ಶಿಕ್ಷಣ ಕ್ಷೇತ್ರದಲ್ಲಿ ಬದಲಾವಣೆ ತರಲು ಶ್ರಮಿಸುತ್ತಿದ್ದಾರೆ. ಅಕ್ಷರ ಜ್ಯೋತಿ ಯಾತ್ರೆ ಮೂಲಕ ಗಡಿಭಾಗಗಳ ಶಾಲೆಗಳ ಫಲಿತಾಂಶ ಸುಧಾರಣೆಗೆ ಪ್ರಯತ್ನಿಸುತ್ತಿದ್ದಾರೆ. ಬಸವಣ್ಣ, ಮಹಮೂದ್ ಗಾವಾನ್ ನಂತರ ಶಿಕ್ಷಣಕ್ಕಾಗಿ ಹೆಚ್ಚು ಒತ್ತು ಕೊಡುವ ಕೆಲಸ ಮಾಡುತ್ತಿರುವವರು ಬಸವಕುಮಾರ ಪಾಟೀಲರು ಎಂದು ಬಣ್ಣಿಸಿದರು. ಮಕ್ಕಳು ಶಾಲೆಯಿಂದ ಹೊರಗುಳಿಯದಂತೆ ನೋಡಿಕೊಳ್ಳಬೇಕು. ಒಂದುವೇಳೆ ಶಾಲೆಯಿಂದ ಹೊರಗುಳಿದರೂ ಪುನಃ ಶಾಲೆಗೆ ಸೇರಿಸಿ ಅವರನ್ನು ಮುಖ್ಯವಾಹಿನಿಗೆ ತರುವ ಕೆಲಸ ಎಲ್ಲರೂ ಮಾಡಬೇಕಿದೆ. ಹಳ್ಳಿಗಳಲ್ಲಿ ಶಿಕ್ಷಣ ಸುಧಾರಣೆಯಾದರೆ ದೇಶ ಬೆಳವಣಿಗೆ ಹೊಂದುತ್ತದೆ ಎಂದರು. ಬಿಹಾರದ ಸುಧಾ ವರ್ಗೀಸ್, ಮಂಗಳೂರಿನ ಅಮ್ಮೆ ಮಹಾಲಿಂಗ ನಾಯ್ಕ, ಮಡಿಕೇರಿಯ ರಾಣಿ ಮಾಚಯ್ಯ, ಬೀದರ್‌ನ ಶಾ ರಶೀದ್ ಅಹಮ್ಮದ್ ಖಾದ್ರಿ, ಕೊಪ್ಪಳದ ಕುಣಕೇರಿಯ ಹುಚ್ಚಮ್ಮ ಬಸಪ್ಪ ಚೌದ್ರಿ, ಪಂಡಿತ ಕೆ. ಬಾಳೂರೆ, ಜಗನ್ನಾಥ ಹಲಮಡಗಿ, ಎಂಜಿನಿಯರ್ ಹಾವಶೆಟ್ಟಿ ಪಾಟೀಲ, ಪ್ರತಿಷ್ಠಾನದ ಕಾರ್ಯದರ್ಶಿ ಮನೋಜಕುಮಾರ ಬುಕ್ಕಾ, ಮೆರವಣಿಗೆ ಸಮಿತಿ ಅಧ್ಯಕ್ಷ ರಾಜೇಂದ್ರಕುಮಾರ ಮಣಿಗೇರೆ, ಪ್ರತಿಷ್ಠಾನದ ಔರಾದ್ ತಾಲ್ಲೂಕು ಘಟಕದ ಅಧ್ಯಕ್ಷ ರಾಮಶೆಟ್ಟಿ ಪನ್ನಾಳೆ, ಸಿದ್ದಯ್ಯಾ ಕಾವಡಿ, ಮಾಣಿಕಪ್ಪ ಗೋರನಾಳೆ, ಶಿವರಾಜ ಮದಕಟ್ಟಿ, ಜಗನ್ನಾಥ ಪತಂಗೆ, ಶಿವಾಜಿರಾವ್ ಮಾನೆ, ಗಿರೀಶ ಕಡ್ಲೆವಾಡ, ಪ್ರಭು ತಟಪಟ್ಟಿ ಮತ್ತಿತರರು ಹಾಜರಿದ್ದರು.ಬಸವಕುಮಾರ ಪಾಟೀಲ ಅಧ್ಯಕ್ಷ ಕಲ್ಯಾಣ ಕರ್ನಾಟಕ ಪ್ರತಿಷ್ಠಾನಮಕ್ಕಳಿಗೆ ವಿದ್ಯೆಯ ಮಹತ್ವ ಸಾರಿ ನೈತಿಕ ಮೌಲ್ಯಗಳನ್ನು ಬೆಳೆಸುವ ಉದ್ದೇಶದೊಂದಿಗೆ ಅಕ್ಷರ ಜ್ಯೋತಿ ಯಾತ್ರೆ ಹಮ್ಮಿಕೊಳ್ಳಲಾಗಿತ್ತು.ಹರೇಕಳ ಹಾಜಬ್ಬ ಮಂಗಳೂರುಕುವೆಂಪು ವಿಶ್ವವಿದ್ಯಾಲಯದಲ್ಲಿ ನನಗೆ ಓದಲು ಸಾಧ್ಯವಾಗಲಿಲ್ಲ. ಆದರೆ ಅದೇ ವಿ.ವಿ.ಯಲ್ಲಿ ನನ್ನ ಜೀವನ ಆಧರಿಸಿದ ಪಠ್ಯ ಸೇರಿಸಿದ್ದಾರೆ.ಸೋಮಣ್ಣ ಎಚ್.ಡಿ. ಕೋಟೆ ಮೈಸೂರಮಕ್ಕಳು ಎಷ್ಟು ಬೇಕೋ ಅಷ್ಟೇ ಮೊಬೈಲ್ ಬಳಸಬೇಕು. ಅದರ ದಾಸರಾಗಬಾರದು. ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡಬೇಕು.ಸತ್ಯನಾರಾಯಣ ಬೇಲೇರಿ ಕಾಸರಗೋಡುಸರ್ಕಾರ ಕೃಷಿಯನ್ನು ಪಠ್ಯದ ಭಾಗ ಮಾಡಬೇಕು. ಎಲ್ಲ ಮಕ್ಕಳಿಗೂ ಕೃಷಿಯ ಮಹತ್ವ ತಿಳಿಸಬೇಕು

**63 ದಿನಗಳ ಯಾತ್ರೆಗೆ ತೆರೆ**

ಕಲ್ಯಾಣ ಕರ್ನಾಟಕ ಪ್ರತಿಷ್ಠಾನದಿಂದ ಹಮ್ಮಿಕೊಂಡಿದ್ದ 63 ದಿನಗಳ ಅಕ್ಷರ ಜ್ಯೋತಿ ಯಾತ್ರೆಗೆ ಶುಕ್ರವಾರ ನಗರದಲ್ಲಿ ತೆರೆ ಬಿತ್ತು. ರಾಜ್ಯದ ಗಡಿ ಜಿಲ್ಲೆಗಳ ಶಾಲೆಗಳಲ್ಲಿ ಶಿಕ್ಷಣದ ಮಹತ್ವ ಸಾರಲಾಯಿತು. 1.47 ಲಕ್ಷ ಮಕ್ಕಳೊಂದಿಗೆ ನೇರ ಸಂವಾದ ನಡೆಸಿ ಕಲಿಕೆಯಲ್ಲಿ ವಂಚಿತರಾದ ಮಕ್ಕಳನ್ನು ದತ್ತು ಪಡೆಯಲಾಯಿತು. ಮಕ್ಕಳಿಗೆ ಪುಸ್ತಕ ನೋಟ್ ಬುಕ್ ವಿತರಿಸಲಾಯಿತು. ಫಲಿತಾಂಶ ಸುಧಾರಣೆ ಮಕ್ಕಳಲ್ಲಿ ಓದಿನ ಅಭಿರುಚಿ ಬೆಳೆಸಲು ವಿಷಯ ತಜ್ಞರಿಂದ ಕಾರ್ಯಾಗಾರ ನಡೆಸಲಾಯಿತು.

**24 ಗಂಟೆಯಲ್ಲಿ 4 ತಾಸು ಓದಿಗೆ ಮೀಸಲಿಡಿ'**

'ವಿದ್ಯಾರ್ಥಿ ಜೀವನದಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿ ಕೂಡ 24 ಗಂಟೆಗಳಲ್ಲಿ 4 ತಾಸು ಓದಿಗಾಗಿಯೇ ಮೀಸಲಿಡಬೇಕು. ಹೀಗೆ ಮಾಡಿದರೆ ವರ್ಷಕ್ಕೆ 1500 ಗಂಟೆ ಓದಿದಂತಾಗುತ್ತದೆ. ಇದು ವಿದ್ಯಾರ್ಥಿಗಳ ಸಂಪತ್ತು ಆಗಬೇಕು' ಎಂದು ಬೆಂಗಳೂರಿನ ಅಕ್ಕ ಐಎಎಸ್ ಅಕಾಡೆಮಿಯ ಮುಖ್ಯಸ್ಥ ಶಿವಕುಮಾರ ತಿಳಿಸಿದರು. ವ್ಯವಸ್ಥಿತವಾಗಿ ಮತ್ತು ಯೋಜನಾಬದ್ಧವಾಗಿ ಓದಿದರೆ ಉನ್ನತವಾದುದ್ದನ್ನು ಸಾಧಿಸಬಹುದು. 15ರಿಂದ 25 ವರ್ಷ ವಿದ್ಯಾರ್ಥಿ ಜೀವನದಲ್ಲಿ ಬಹಳ ಮುಖ್ಯವಾದುದು. 15ರಿಂದ 25 ವರ್ಷದೊಳಗೆ ಕಷ್ಟಪಟ್ಟು ಓದಿದರೆ ಇಡೀ ಜೀವನ ಸುಖ ನೆಮ್ಮದಿಯಿಂದ ಇರಬಹುದು ಎಂದು ಹೇಳಿದರು. 24 ಗಂಟೆಗಳಲ್ಲಿ ಏನೇನು ಮಾಡಬೇಕು ಎಂಬುದರ ಬಗ್ಗೆ ಟೈಂ ಟೇಬಲ್ ಹಾಕಿಕೊಳ್ಳಬೇಕು. ಶಾಲಾ–ಕಾಲೇಜಿಗೆ ಹೋಗುವುದು ಮಲಗುವುದು ಸೇರಿದಂತೆ ಇತರೆ ಕೆಲಸಗಳಿಗೆ ಸಮಯ ಕೊಟ್ಟ ನಂತರ 4ರಿಂದ 5 ಗಂಟೆ ಉಳಿಯುತ್ತದೆ. ಅದು ಓದುವುದಕ್ಕೆ ಮೀಸಲಿಡಬೇಕು. ಅದರಲ್ಲಿ 2 ಗಂಟೆ ಶಾಲಾ ಕಾಲೇಜಿನಲ್ಲಿ ಓದಿದ್ದನ್ನು ರಿವಿಷನ್ ಮಾಡಬೇಕು. ಮೂರು ಗಂಟೆ ಸ್ಪರ್ಧಾತ್ಮಕ ಪರೀಕ್ಷೆಗಳ ಪಠ್ಯ ಓದಬೇಕು. ಈಗಿನಿಂದಲೇ ಅದಕ್ಕೆ ತಯಾರಿ ನಡೆಸಬೇಕು ಎಂದು ಸಲಹೆ ನೀಡಿದರು.

**ಇಂದಿನ ರಾಜಕಾರಣಿಗಳ ಅನುಕರಣೆ ಬೇಡ'**

'ಇಂದಿನ ರಾಜಕಾರಣಿಗಳನ್ನು ನಮ್ಮ ಯುವ ತಲೆಮಾರು ಅನುಕರಣೆ ಮಾಡಿದರೆ ಯಾವುದೇ ಪ್ರಯೋಜನವಿಲ್ಲ. ರಾಜಕೀಯ ಮಾಡಬೇಕಾದರೆ ಸೇವೆಯ ರಾಜಕಾರಣ ಮಾಡಬೇಕು. ನಮ್ಮ ವೈಯಕ್ತಿಕ ಸೇವೆಗಾಗಿ ಬೆಳವಣಿಗೆಗೆ ರಾಜಕೀಯ ಮಾಡಬೇಕಿಲ್ಲ' ಎಂದು ಮಹಾತ್ಮ ಗಾಂಧೀಜಿ ಅವರ ಮರಿಮೊಮ್ಮಗ ತುಷಾರ್ ಗಾಂಧಿ ಹೇಳಿದರು. ಇಂದಿನ ರಾಜಕಾರಣಿಗಳು ಅಧಿಕಾರಕ್ಕಾಗಿ ದೇಶವನ್ನು ಹಾಳುಗೆಡವಲು ಹಿಂದು ಮುಂದು ಯೋಚಿಸುತ್ತಿಲ್ಲ. ಇಂತಹವರು ನಮಗೆ ಬೇಕಿಲ್ಲ. 50 ವರ್ಷಗಳ ಹಿಂದೆ ಈ ದೇಶದಲ್ಲಿ ಅತ್ಯುತ್ತಮ ನಾಯಕರಿದ್ದರು. ಅವರು ತಮ್ಮ ವೈಯಕ್ತಿಕ ಬದುಕು ಕುಟುಂಬದ ಕಡೆಗೆ ನೋಡಲಿಲ್ಲ. ರಾಷ್ಟ್ರಕ್ಕಾಗಿ ಅವರು ತಮ್ಮ ಜೀವನ ಸಮರ್ಪಿಸಿಕೊಂಡಿದ್ದರು. ಅವರ ತ್ಯಾಗದಿಂದ ಈ ದಿನಗಳನ್ನು ನೋಡುತ್ತಿದ್ದೇವೆ ಎಂದರು.

## ಇಬ್ಬರು ಕಳ್ಳರ ಬಂಧನ

ಜಮಖಂಡಿ ತಾಲೂಕಿನ ಹುಣಸಿಕಟ್ಟಿ ಗ್ರಾಮದ ಗಂಗಾಧರ ಶಂಕ್ರಪ್ಪ ಇಂಗಳಗಿ, ಕರಿಯಪ್ಪ ಕಲ್ಲಪ್ಪ ತಳವಾರ ಬಂಧಿತ ಆರೋಪಿಗಳು. ಬಂಧಿತರಿಂದ 114 ಗ್ರಾಂ ಬಂಗಾರದ ಆಭರಣಗಳು, ಬೈಕ್ ಸೇರಿದಂತೆ 9.49 ಲಕ್ಷ ರೂ. ಮೌಲ್ಯದ ವಸ್ತುಗಳನ್ನು ಪೊಲೀಸರು ವಶಕ್ಕೆ ಪಡೆದು–ಕೊಂಡಿದ್ದಾರೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆದೇಶದಂತೆ ಸಿಪಿಐ ಎಚ್.ಆರ್. ಪಾಟೀಲ ಮಾರ್ಗದರ್ಶನದಲ್ಲಿ ಪಿಎಸ್‌ಐಗಳಾದ ಚಂದ್ರಶೇಖರ ಹೆರಕಲ್, ನೂರಜಾನ ಸಾಬರ್, ಕಾನ್ಸ್ಟೇಬಲ್‌ಗಳಾದ ಸಿ.ವೈ.ಭಜಂತ್ರಿ, ವಿ.ಬಿ.ಮಠ, ಗದ್ಯಪ್ಪ ಎ.ಎಂ, ಎಸ್.ಕೆ.ಕುರಿ ಆರೋಪಿಗಳನ್ನು ಪತ್ತೆ ಹಚ್ಚಿ ಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ. ಪತ್ತೆ ತಂಡದ ಕಾರ್ಯಕ್ಷಮತೆ ಬಗ್ಗೆ ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳು ಮೆಚ್ಚುಗೆ ವ್ಯಕ್ತಪಡಿಸಿ ಬಹುಮಾನ ಘೋಷಿಸಿದ್ದಾರೆ. ಡಿಎಸ್‌ಪಿಗಳಾದ ಪ್ರಸನ್ನ ದೇಸಾಯಿ, ಜಿ.ಸಿ.ಲಿಂಗದ ಇದ್ದರು.

## ಸಿದ್ರಾಮಯ್ಯ ಸ್ವಾಮಿ ಅವಿರೋಧ ಆಯ್ಕೆ

ಅವರು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರಾಗಿ ದುಡಿದಿದ್ದಾರೆ. ಕಬ್ಬು ಬೆಳೆಗಾರರ ರೈತರ ಪರವಾಗಿ ಹೋರಾಟ ಮಾಡಿ ಕಬ್ಬಿನ ಬೆಲೆ ಕೊಡಿಸಿದ್ದಾರೆ ನಕಲಿ ಬೀಜಗಳು ಸರಬರಾಜು ಮಾಡಿರುವ ಅಧಿಕೃತ ವಿತರಕರುಗಳ ಜಾಡು ಹಿಡಿದು ಮೂಲ ಕಾರಣಿ ಕರ್ತರಾದ ನಕಲಿ ಬಿಜ ವಿತರಕರುಗಳಿಗೆ ಸರಬರಾಜು ಮಾಡಿದ ವಿವಿಧ ಬಿಜಗಳ ತಯಾರಿಕೆಗಳ ಕಂಪನಿಗಳ ವಿರುದ್ಧ ಕ್ರಿಮಿನಲ್ ಪ್ರಕರಣ ಗಳನ್ನು ಹಾಕಿಸಿ ರೈತರಿಗೆ ಆ ಕಂಪನಿಗಳಿಂದ ದಂಡ ರೂಪದಲ್ಲಿ ಪರಿಹಾರ ಧನ ಸ್ವಾಮಿ ಕೊಡಿಸಿರುವರು. ಹೀಗೆ ಜಿಲ್ಲೆಯ ಪ್ರಗತಿಗಾಗಿ ವಿವಿಧ ರೀತಿಯ ಸಾಮಾಜಿಕ ಸೇವೆ ಮಾಡುತ್ತಿದ್ದಾರೆ.ಕೃಷಿಕ ಸಮಾಜದ ಬೀದರ ಜಿಲ್ಲಾ ಉಪಾಧ್ಯಕ್ಷರು, ಜಿಲ್ಲಾ ಖಜಾಂಚಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹಾಗೂ ರಾಜ್ಯ ಪ್ರತಿನಿಧಿ ಪದಾಧಿಕಾರಿಗಳಿಗೆ ಚುನಾವಣೆಯ ಅಧಿಕಾರಿಗಳು ಹಾಗೂ ಬೀದರ ಜಂಟಿ ಕೃಷಿ ಕಚೇರಿಯ ಜಂಟಿ ನಿರ್ದೇಶಕರ ಅಧ್ಯಕ್ಷತೆಯಲ್ಲಿ ದಿ.10–01–2025 ರಂದು ಜರುಗಿತು.ಕೃಷಿಕ ಸಮಾಜದ ಬೀದರ ಜಿಲ್ಲಾ ಅಧ್ಯಕ್ಷರು ಸಿದ್ರಾಮಯ್ಯಾ ಎಸ್.ಸ್ವಾಮಿ , ಜಿಲ್ಲಾ ಉಪಾಧ್ಯಕ್ಷರು ಉಮಾಕಾಂತ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಂಗಮೇಶ ವಾಲೆ, ಜಿಲ್ಲಾ ಖಜಾಂಚಿ ಗೋಂವಿಂದ ರೆಡ್ಡಿ ಹಾಗೂ ರಾಜ್ಯ ಪ್ರತಿನಿಧಿಯಾಗಿ ವಿಶ್ವನಾಥ ಮಾಲಿ ಪಾಟೀಲ್ ಅವಿರೋಧವಾಗಿ ಆಯ್ಕೆಯಾಗಿರುವದಕ್ಕೆ. ಬೀದರ ಜಿಲ್ಲೆಯ ಬೇಡ ಜಂಗಮ ಸಮಾಜದ ಪ್ರಧಾನ ಕಾರ್ಯದರ್ಶಿ ಶಿವಯ್ಯಸ್ವಾಮಿ ಕಮಠಾಣ ಅಮರೇಶ ಹಿರೇಮಠ ಚಿದ್ರಿ ಕಾನೂನು ಸಲಹೆಗಾರ ಸಂಜಯ ಸ್ವಾಮಿ ಕೋಶಾಧ್ಯಕ್ಷ ಮತ್ತು ಡೆನ್ ನೆಟ್‌ವರ್ಕ್‌ನ ರವಿಸ್ವಾಮಿ ಅವರುಗಳು ಶುಭ ಕೋರಿದ್ದಾರೆ.

## ಆಹೋರಾತ್ರಿ ಸತ್ಯಾಗ್ರಹ ಅಂತ್ಯ

ದಾಖಲೆಗಳಿಂದ ಕಂಡು ಬರುತ್ತದೆ.

ಬಹು ಸಂಖ್ಯಾತ ಬಡ ರೈತ ಸಂತ್ರಸ್ತರಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸಲು ಕಾರಂಜಾ ಯೋಜನೆಗೆ ಭೂಮಿ ನೀಡಿದ ರೈತ ಸಂತ್ರಸ್ತರು ಸಮರ್ಪಕ ವೈಜ್ಞಾನಿಕ ಮಾನದಂಡದಂತೆ, ಮಾನವಿಯತೆಯ ಆಧಾರದ ಮೇಲೆ ಪರಿಹಾರ ಹಣ ನೀಡಬೇಕೆಂದು ಆಗ್ರಹಿಸಿ ಕಳೆದ ಅನೇಕ ದಶಕ ಗಳಿಂದ ಹೋರಾಟ ಮಾಡುತ್ತಾ ಬಂದಿದ್ದಾರೆ. ಅದಕ್ಕೆ ಪೂರಕವಾಗಿ ಸರಕಾರಗಳೂ ಕೂಡ ಭರವಸೆ ನೀಡಿದ್ದವು. ಆದರೆ ಭರವಸೆಗಳು ಭರವಸೆಗಳಾಗಿಯೇ ಉಳಿದವು. ಇದನ್ನು ಮನಗಂಡು ಯಾವುದೇ ಗತ್ಯಂತರವಿಲ್ಲದೇ, 2022 ರ ಜೂನ್ 1 ರಿಂದ ಸುಮಾರು ಎರಡುವರೆ ವರ್ಷಗಳಿಂದ ಇಲ್ಲಿಯವರೆಗೆ ಕಾರಂಜಾ ಮುಳುಗಡೆ ರೈತ ಸಂತ್ರಸ್ತರ ಹಿತರಕ್ಷಣಾ ಸಮಿತಿ ನಿರಂತರವಾಗಿ ಬೀದರ ಜಿಲ್ಲಾಧಿಕಾರಿ ಕಚೇರಿ ಎದುಎಉ ಆಹೋರಾತ್ರಿ ಧರಣಿ ಸತ್ಯಾಗ್ರಹ ಮಾಡುತ್ತಾ ಬರುತ್ತಿದೆ. ಇದಕ್ಕೆ ಸ್ಪಂದಿಸಿ ಜಿಲ್ಲೆಯ ಆಯಾ ಪಕ್ಷದ ಶಾಸಕರು, ಪಕ್ಷಭೇಧ ಮರೆತು ಸದನದಲ್ಲಿ ನ್ಯಾಯಕ್ಕೆ ಆಗ್ರಹಿಸಿ ಪ್ರಸ್ತಾಪ ಮಾಡಿರುವುದು ಮರೆಯುವಂತಿಲ್ಲ. ಸಿದ್ಧರಾಮಯ್ಯನವರ ನೇತೃತ್ವದ ಸರಕರ 2023 ರಲ್ಲಿ ಅಸ್ತಿತ್ವಕ್ಕೆ ಬಂದ ನಂತರ ಅರಣ್ಯ ಸಚಿವರು ಮತ್ತು ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಖಂಡ್ರೆರವರು ಅಧಿಕಾರ ವಹಿಸಿಕೊಂಡ ತಕ್ಷಣ ಕಾರಂಜಾ ಸಂತ್ರಸ್ತರ ಬೇಡಿಕೆಯ ಬಗ್ಗೆ ಸಕರಾತ್ಮಕವಾಗಿ ಸ್ಪಂದಿಸುತ್ತಾ ಬಂದಿದ್ದಾರೆ. ಅಷ್ಟೇ ಅಲ್ಲದೆ ವಿರೋಧ ಪಕ್ಷದಲ್ಲಿದ್ದಾಗಲೂ ಸಹ ಈಶ್ವರ ಖಂಡ್ರೆರವರು ಖಂಡಿಸಿರುವುದು ಮರೆಯುವಂತಿಲ್ಲ.

ಕಾರಂಜಾ ರೈತ ಸಂತ್ರಸ್ತರ ಬೇಡಿಕೆಗೆ ಸಂಬಂಧಿಸಿ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಖಂಡ್ರೆರವರು ಮುತುವರ್ಜಿಯಿಂದ ಮತ್ತು ಜಿಲ್ಲೆಯ ಶಾಸಕರುಗಳಾದ ಶೈಲೇಂದ್ರ ಬೆಲ್ದಾಳೆ, ಅರವಿಂದ ಅರಳಿರವರು 2023 ರಲ್ಲಿ ಕಾರಂಜಾ ಸಂತ್ರಸ್ತರ ಬೇಡಿಕೆಗೆ ಉಪಮುಖ್ಯಮಂತ್ರಿಗಳು ಮತ್ತು ನೀರಾವರಿ ಸಚಿವರಾದ ಡಿ.ಕೆ. ಶಿವಕುಮಾರವರಿಗೆ ಆಗ್ರಹಿಸಿರುವಂತೆ 2023ರ ಬೆಳಗಾವಿ ಅಧಿವೇಶನದಲ್ಲೂ ಸಹ ಕಾರಂಜಾ ಸಂಗ್ರಸ್ತರ ಬೇಡಿಕೆ ಈಡೇರಿಕೆಯ ಬಗ್ಗೆ ಉಪ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಖಂಡ್ರೆ ಸೇರಿದಂತೆ, ಜಿಲ್ಲೆಯ ಎಲ್ಲಾ ಶಾಸಕರು ಪಕ್ಷಭೇದ ಮರೆತು ಬೇಡಿಕೆ ಈಡೇರಿಸಲು ಆಗ್ರಹಿಸಿರುವುದು ಮರೆಯುವಂತಿಲ್ಲ. ನಂತರ ದಿನಗಳಲ್ಲಿ ಬೇಡಿಕೆಗೆ ಸಕರಾತ್ಮಕ ಸ್ಪಂದನೆ ಸಿಗದ ಕಾರಣ ಸತ್ಯಾಗ್ರಹ ಮುಂದುವರೆದಿತ್ತು. ಗಾಂಧಿ ಮತ್ತು ಅಂಬೇಡ್ಕರ ಮಾರ್ಗದಲ್ಲಿ ಅಹಿಂಸಾ ಮಾರ್ಗದಲ್ಲಿ ನಡೆದ ಈ ಹೋರಾಟಕ್ಕೆ ಸ್ಪಂದಿಸಿ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಖಂಡ್ರೆಯವರ ಮುತುವರ್ಜಿಯಿಂದ ಜಿಲ್ಲೆಯ ಸಚಿವರಾದ ರಹಿಂ ಖಾನ್, ಶಾಸಕರುಗಳಾದ, ಶೈಲೇಂದ್ರ ಬೆಲ್ದಾಳೆ, ಪ್ರಭು ಚವ್ಹಾಣ, ಶರಣು ಸಲಗರ್, ಸಿದ್ದು ಪಾಟೀಲ, ಚಂದ್ರಶೇಖರ ಪಾಟೀಲ, ಭೀಮರಾವ ಪಾಟೀಲ, ಎಂ.ಜಿ.ಮುಳೆ ಸೇರಿದಂತೆ ಜಿಲ್ಲೆಯ ಆಯಾ ಪಕ್ಷದ ನಾಯಕರು ಸಂಘಟಿತ ರಾಜಕಿಯ ಇಚ್ಛಾಶಕ್ತಿಯಿಂದ 2024ರ ಬೆಳಗಾವಿ ಅಧಿವೇಶನ ಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ಧರಾಮಯ್ಯನವರ ಅಧ್ಯಕ್ಷತೆಯಲ್ಲಿ ಬೆಳಗಾವಿ ಸುವರ್ಣ ಸೌಧದ ಸಭಾಂಗಣದಲ್ಲಿ ಅಧಿಕೃತ ಸಭೆ ಜರುಗಿ–ತು. ಈ ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಖಂಡ್ರೆಯವರು ಸಂತ್ರಸ್ತರ ಪರವಾಗಿ ವಿಶೇಷ ಕಾಳಜಿ ವಹಿಸಿ ಸಂತ್ರಸ್ತರ ಬೇಡಿಕೆ ಈಡೇರಿಸುವ ಬಗ್ಗೆ ಸಮರ್ಥವಾಗಿ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಂಡರು. ಅದರಂತೆ ಸಂತ್ರಸ್ತರ ಬೇಡಿಕೆ ಈಡೇರಿಕೆಯ ಬಗ್ಗೆ ಕಲ್ಯಾಣ ಕರ್ನಾಟಕ ಹೋರಾತ ಸಮಿತಿಯ ಸಂಸ್ಥಾಪಕ ಅಧ್ಯಕ್ಷರಾದ, ಡಾ. ಲಕ್ಷ್ಮಣ ದಸ್ತಿಯವರು ವಿಷಯ ಮಂಡಿಸಿದರು. ರೈತ ಸಂತ್ರಸ್ತರ ಹಿತರಕ್ಷಣಾ ಸಮಿತಿಯ ಅಧ್ಯಕ್ಷರಾದ, ಚಂದ್ರಶೇಖರ ಪಾಟೀಲರವರು ಸಹ ಮುಖ್ಯಮಂತ್ರಿಗಳಲಿ ಬೇಡಿಕೆಯ ಈಡೇರಿಕೆಯ ಬಗ್ಗೆ ವಿನಂತಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆಯವರ ಮುತುವರ್ಜಿಯಿಂದ ಮತ್ತು ಸಮರ್ಥವಾದ ಮನವರಿಕೆಯ ಮೇರೆಗೆ ಮುಖ್ಯಮಂತ್ರಿ ಸಿದ್ಧರಾಮಯ್ಯನವರು ಬೆಳಗಾವಿ ಅಧಿಕೃತ ಸಭೆಯಲ್ಲಿ ಕಾರಂಜಾ ಸಂತ್ರಸ್ತರ ದೀರ್ಘಕಾಲದ ಹೋರಾಟದ ನ್ಯಾಯಯುತವಾದ ಬೇಡಿಕೆ ಈಡೇರಿಸಲು ಒಪ್ಪಿಕೊಂಡರಲ್ಲದೆ ವೈಜ್ಞಾನಿಕ ಮಾನದಂಡದಂತೆ ಪರಿಹಾರ ನೀಡಲು ತಾಂತ್ರಿಕ ಸಮಿತಿ ಅವಶ್ಯವಾಗಿರುವುದರಿಂದ ತಾಂತ್ರಿಕ ಸಮಿತಿಯ ವರದಿಯ ಆಧಾರದ ಮೇಲೆ ಬೇಡಿಕೆ ಈಡೇರಿಸುವ ಬಗ್ಗೆ ಅಧಿಕೃತ ಭರವಸೆ ನೀಡಿದರು. ಇದಕ್ಕೆ ರೈತ ಸಂತ್ರಸ್ತರ ಹಿತರಕ್ಷಣಾ ಸಮಿತಿ ಸಂತೃಪ್ತಿ ವ್ಯಕ್ತಪಡಿಸಿದಂತೆ, ಮಾನ್ಯ ಮುಖ್ಯಮಂತ್ರಿಗಳು ಸತ್ಯಾಗ್ರಹ ಹಿಂಪಡೆಯಲು ಮನವರಿಕೆ ಮಾಡಿದರು. ಅದರಂತೆ ತಮ್ಮ ಪ್ರತಿನಿಧಿಯಗಿ ಬೀದರ ಜಿಲ್ಲೆಯ ಸಚಿವರಾದ, ಈಶ್ವರ ಖಂಡ್ರೆಯವರಿಗೆ ಸತ್ಯಾಗ್ರಹ ಸ್ಥಳಕ್ಕೆ ಕಳಿಸುವುದಾಗಿ ತಿಳಿಸಿದರು. ಮುಖ್ಯಮಂತ್ರಿಗಳ ಮನವಿಗೆ ಸಮರ್ಥಿಸಿದಂತೆ ಅಧಿಕೃತವಾಗಿ ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಖಂಡ್ರೆಯವರು ದಿನಾಂಕ : 11.01.2025 ರಂದು ಶನಿವಾರ ಕಾರಂಜಾ ಮುಳುಗಡೆ ಸಂತ್ರಸ್ತರ ಸತ್ಯಾಗ್ರಹ ಸ್ಥಳಕ್ಕೆ ಭೇಟಿ ನೀಡಿ ಬೆಳಗಾವಿಯಲ್ಲಿ ಜರುಗಿದ ಮುಖ್ಯಮಂತ್ರಿಗಳ ನೇತೃತ್ವದ ಸಭೆಯ ಭರವಸೆಯಂತೆ ಆದಷ್ಟು ಶೀಘ್ರ ತಾಂತ್ರಿಕ ಸಮಿತಿಯ ವರದಿಯನ್ನು ಆಧರಿಸಿ ಕಾರಂಜಾ ರೈತ ಸಂತ್ರಸ್ತರ ಬೇಡಿಕೆ ಈದೇರಿಸುವ ನಿಟ್ಟಿನಲ್ಲಿ ತಾವು ವಿಸೇಷ ಕಾಳಜಿ ವಹಿಸಿ ಸ್ಪಂದಿಸುವುದಾಗಿ ಭರವಸೆ ನೀಡಿದರು. ಅಷ್ಟೇ ಅಲ್ಲದೆ ಕಾರಂಜಾ ಸಂತ್ರಸ್ತರ ಬೇಡಿಕೆ ಈಡೇರಿಕೆಗೆ ತಾವು ಸವಾಲಾಗಿ ಸ್ವೀಕರಿಸಿದ ಕಾರಣ ಮಾನ್ಯ ಮುಖ್ಯಮಂತ್ರಿಗಳು ಬೇಡಿಕೆ ಈಡೇರಿಕೆಯನ್ನು ಒಪ್ಪಿಕೊಂಡು ತಾಂತ್ರಿಕ ಸಮಿತಿ ರಚನೆ ಮಾಡಿದ್ದಾರೆ. ಅದಕ್ಕೆ ಪೂರಕವಾಗಿ ಬೇಡಿಕೆ ಈಡೇರಿ–ಕೆಯ ಬಗ್ಗೆ ಭರವಸೆ ನೀಡಿದರು. ಇಂದಿನಿಂದ ಸತ್ಯಾಗ್ರಹ ಹಿಂಪಡೆಯಲು ಮನವರಿಕೆ ಮಾಡಿದರು. ಸಚಿವರ ಭರವಸೆಯ ಮೇರೆಗೆ ಸತ್ಯಾಗ್ರಹ ಹಿಂಪಡೆಯುವ ಬಗ್ಗೆ ಈ ಹೋರಾಟಕ್ಕೆ ನಿರಂತರವಾಗಿ ಬೆಂಬಲಿಸಿದ ಕಲ್ಯಾಣ ಕರ್ನಾಟಕದ ಹಿರಿಯ ಹೋರಾಟಗಾರರಾದ ಡಾ. ಲಕ್ಷ್ಮಣ ದಸ್ತಿಯವರು ರೈತ ಹಿತರಕ್ಷಣಾ ಸಮಿತಿಗೆ ಮನವರಿಕೆ ಮಾಡಿದರು. ಇದಕ್ಕೆ ರೈತ ಸಂತ್ರಸ್ತರ ಪರವಾಗಿ ಸಮಿತಿಯ ಅಧ್ಯಕ್ಷರಾದ ಚಂದ್ರಶೇಖರ ಪಾಟೀಲ ಹುಚಕನಳ್ಳಿಯವರು ಸರ್ವ ಸಮಿತಿಯಿಂದ ಒಪ್ಪಿಗೆ ನೀಡಿ ಸತ್ಯಾಗ್ರಹ ಹಿಂಪಡೆಯುವ ಬಗ್ಗೆ ಪ್ರಕಟಿಸಿದರು.

ಈ ಸಂದರ್ಭದಲ್ಲಿ ಶಾಸಕರಾದ, ಶೈಲೇಂದ್ರ ಬೆಲ್ದಾಳೆ,ಮಾಜಿ ವಿಧಾನ ಪರಿಷತ್ ಸದಸ್ಯರಾದ ಅರವಿಂದ ಕುಮಾರ ಅರಳಿ ಮುಖಂಡರಾದ ಬಸವರಾಜ ಜಾಬಶೆಟ್ಟಿ, ಬಸವರಾಜ ದೇಶಮುಖ, ಪ್ರೊ.ಆರ್ ಕೆ ಹುಡುಗಿ, ಪ್ರೊ ಬಸವರಾಜ ಕುಮ್ನೂರ,ಮನ್ನನ ಶೇಟ್,ಎಮ್ ಡಿ ಗೌಸ್ ಸೇರಿದಂತೆ ಆಯಾ ಕ್ಷೇತ್ರದ ಗಣ್ಯರು ಹೋರಾಟಗಾರರಾದ, ವಿನಯ ಮಾಳಗೆ, ರೋಹನಕುಮಾರ, ಕೇದಾರನಾಥ ಪಾಟೀಲ್, ಮಹೇಶ ಮೂಲಗೆ, ಭೀಮರೆಡ್ಡಿ ಬೆಳ್ಳೂರ್ ಸೇರಿದಂತೆ ನೂರಾರು ಜನ ರೈತ ಸಂತ್ರಸ್ತರು ಉಪಸ್ಥಿತರಿದ್ದರು.

## ವ್ಯಕ್ತಿ ಕಾಣೆ

ಮಲ್ಲಮ ನುಡಿ ವಾರ್ತೆ

ಚಿಟಗುಪ್ಪ:–ವಿಮರ್ಶ್ ತಂದೆ ಅಣ್ಣೆಪ್ಪ ಇಸ್ಲಾಂಪುರ ವಯಸ್ಸು 20 ಈತ ಡಿಗ್ರಿ ಕಾಲೇಜಿಗೆ ಹೋಗಿ ಬರುತ್ತೇನೆ ಎಂದು ಜನವರಿ 3 ಶುಕ್ರವಾರ ದಂದು ಹೋದವನ್ನು ಇಲ್ಲಿಯ ವರೆಗೆ ಮರಳಿ ಬಂದಿರುವುದ್ದಿಲ್ಲ, ಅವರ ತಂದೆ ಅಣ್ಣೇಪ್ಪ ತಂದೆ ಶಂಕ್ರೇಪ್ಪ ಇಸ್ಲಾಂಪುರೇ ನೀಡಿರುವ ದೂರಿನ ಮೇರೆಗೆ ಚಿಟಗುಪ್ಪ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ತನಿಖೆ ಜಾರಿಯಲ್ಲಿದೆ.

## ಕಲಾವಿದರ ಮಾಸಾಶನ 5 ಸಾವಿರಕ್ಕೆ ಏರಿಕೆಗೆ ಪ್ರಯತ್ನ: ಸಚಿವ ಖಂಡ್ರೆ ಭರವಸೆ




ಮಲ್ಲಮ ನುಡಿ ವಾರ್ತೆ

ಬೀದರ. ಜ. 12 : ಎರಡು ದಿನಗಳ ಕಲ್ಯಾಣ ಕರ್ನಾಟಕ ವಿಭಾಗಮಟ್ಟದ ತತ್ವಪದಕಾರರ ಸಮಾವೇಶಕ್ಕೆ ನಗರದ ಚನ್ನಬಸವ ಪಟ್ಟದ್ದೇವರು ರಂಗಮಂದಿರದಲ್ಲಿ ಶನಿವಾರ ಚಾಲನೆ ನೀಡಲಾಯಿತು.

ಕಲ್ಯಾಣ ಕರ್ನಾಟಕ ಕಲಾವಿದರ ಒಕ್ಕೂಟ, ಕರ್ನಾಟಕ ಜಾನಪದ ಅಕಾಡೆಮಿ ಸಹಯೋಗದಲ್ಲಿ ಹಮ್ಮಿಕೊಂಡಿರುವ ಸಮಾವೇಶ, ಭಜನೆ ಸ್ಪರ್ಧೆ, ಕಲ್ಯಾಣ ಕರ್ನಾಟಕ ರತ್ನ ಪ್ರಶಸ್ತಿ ಪ್ರದಾನ ಸಮಾರಂಭ ಹಾಗೂ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಸಾಧಕರಿಗೆ ಸನ್ಮಾನ ಸಮಾರಂಭವೂ ಸಂಭ್ರಮದಿಂದ ಜರುಗಿತು.

ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಬಿ. ಖಂಡ್ರೆ ಉದ್ಘಾಟಿಸಿ, ಮುಖ್ಯಮಂತ್ರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರೊಂದಿಗೆ ಚರ್ಚಿಸಿ ಕಲಾವಿದರ ಮಾಶಾಸನ ಮೂರು ಸಾವಿರದಿಂದ ಐದು ಸಾವಿರಕ್ಕೆ ಏರಿಸಲು ಪ್ರಾಮಾಣಿಕವಾಗಿ ಪ್ರಯತ್ನ ನಡೆಸುತ್ತೇನೆ ಎಂದು ಆಶ್ವಾಸನೆ ನೀಡಿದಾಗ ಕರತಾಡನ ಮುಗಿಲು ಮುಟ್ಟಿತು.

ತತ್ವಪದಕಾರರ ಸಮಾವೇಶದ ಅಂಗವಾಗಿ ಏರ್ಪಡಿಸಲಾಗುವ ಜನಪದ ಸ್ಪರ್ಧೆಗಳಲ್ಲಿ ಪ್ರಥಮ ಸ್ಥಾನ ಪಡೆಯುವ ತಂಡಕ್ಕೆ ?51 ಸಾವಿರ ಬಹುಮಾನ ವೈಯಕ್ತಿಕವಾಗಿ ನೀಡುತ್ತೇನೆ ಎಂದು ಘೋಷಿಸಿದರು.

ಕಲಾವಿದರ ಸಂಭಾವನೆ ಹೆಚ್ಚಿಸಬೇಕೆನ್ನುವುದು ದೀರ್ಘಕಾಲೀನ ಬೇಡಿಕೆ. ಅದರ ಬಗ್ಗೆಯೂ ಚರ್ಚಿಸಿ ತೀರ್ಮಾನಕ್ಕೆ ಬರಲಾಗುವುದು. ಬೀದರ್ ನಗರದಲ್ಲಿ ಕಲಾವಿದರಿಗಾಗಿ ಸಮುದಾಯ ಭವನ ನಿರ್ಮಾಣಕ್ಕೆ 18 ಗುಂಟೆ ಜಮೀನು ಮಂಜೂರು ಮಾಡಿಸುವ ಪ್ರಯತ್ನಿಸುವೆ ಎಂದು ಭರವಸೆ ನೀಡಿದರು.

ಆಧುನಿಕತೆ, ಜಾಗತೀಕರಣದ ಇಂದಿನ ಸಂದರ್ಭದಲ್ಲಿ ಜನಪದ, ತತ್ವಪದ, ಶರಣರು, ದಾಸರ ಹಾಡುಗಳನ್ನು ಕೇಳುತ್ತಿದ್ದರೆ ಮನಸ್ಸಿಗೆ ನೆಮ್ಮದಿ ಸಿಗುತ್ತದೆ. ದುರಾಸೆ ದುರ್ಗುಣಗಳಿಂದ ಸಂಬಂಧ ಕಲುಷಿತಗೊಳ್ಳುತ್ತಿವೆ. ಇಂತಹ ಸನ್ನಿವೇಶದಲ್ಲಿ ಭಜನೆ, ತತ್ವಪದಗಳು ವ್ಯಕ್ತಿಯ ಮನಸ್ಸು, ಹೃದಯ ಶಾಂತಗೊಳಿಸುತ್ತವೆ ಎಂದರು.

ಕಲ್ಯಾಣ ಕರ್ನಾಟಕ ಕಲಾವಿದರ ಒಕ್ಕೂಟದ ಅಧ್ಯಕ್ಷ ವಿಜಯಕುಮಾರ ಸೋನಾರೆ ಮಾತನಾಡಿ, ಪಾಶ್ಚಿಮಾತ್ಯ ಹಾಡುಗಾರರಿಗೆ, ನೃತ್ಯ ಮಾಡುವವರಿಗೆ ?25 ಲಕ್ಷದ ವರೆಗೆ ಸಂಭಾವನೆ ನೀಡಲಾಗುತ್ತದೆ. ಆದರೆ, ದೇಶಿ ಸಂಸ್ಕೃತಿ ಉಳಿಸಿ ಬೆಳೆಸುವ ಜನಪದ ಕಲಾವಿದರ ಬದುಕು ದಯನೀಯವಾಗಿದೆ. ದೇಶಿ ಕಲಾವಿದರ ಸಂಭಾವನೆ ಕೂಡ ಹೆಚ್ಚಿಸಬೇಕು ಎಂದು ಮನವಿ ಮಾಡಿದರು.

ಬಸವಕಲ್ಯಾಣ ಅನುಭವ ಮಂಟಪ ಟ್ರಸ್ಟ್ ಅಧ್ಯಕ್ಷ ಬಸವಲಿಂಗ ಪಟ್ಟದ್ದೇವರು ಸಾನ್ನಿಧ್ಯ ವಹಿಸಿದ್ದರು. ಸಿದ್ಧರಾಮ ಬೆಲ್ದಾಳ ಶರಣರು ನೇತೃತ್ವ ವಹಿಸಿದ್ದರು. ಶಾಸಕ ಡಾ.ಶೈಲೇಂದ್ರ ಕೆ. ಬೆಲ್ದಾಳೆ, ರಂಗ ಸಂಘಟಕ ಶ್ರೀನಿವಾಸ ಜಿ.ಕಪ್ಪಣ್ಣ, ಸ್ವಾಗತ ಸಮಿತಿ ಅಧ್ಯಕ್ಷ ಬಸವರಾಜ ಧನ್ನೂರ, ಡಾ.ಸಿದ್ದಾರೆಡ್ಡಿ ಫೌಂಡೇಶನ್ ಗೌರವ ಅಧ್ಯಕ್ಷೆ ಡಾ. ಗುರಮ್ಮ ಸಿದ್ಧಾರೆಡ್ಡಿ, ನಫೇಡ್ ಸಂಸ್ಥೆ ನವದೆಹಲಿಯ ಉಪಾಧ್ಯಕ್ಷ ಸಿದ್ದಪ್ಪ ಹೊಟ್ಟಿ ಯಾದಗಿರಿ, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಅಮೃತರಾವ್ ಚಿಮಕೋಡೆ, ಎಂಜಿನಿಯರ್ ಹಾವಶೆಟ್ಟಿ ಪಾಟೀಲ, ಪತ್ರಕರ್ತ ಮಾಳಪ್ಪ ಅಡಸಾರೆ, ನವಲಿಂಗ ಪಾಟೀಲ, ಒಕ್ಕೂಟದ ಕಾರ್ಯದರ್ಶಿ ಪ್ರಕಾಶ ಅಂಗಡಿ ಕನ್ನಳ್ಳಿ, ಸುನೀಲ ಭಾವಿಕಟ್ಟಿ ಹಾಜರಿದ್ದರು. ಶಿವಕುಮಾರ ಪಾಂಚಾಳ ಹಾಗೂ ತಂಡದವರು ನಾಡಗೀತೆ ಹಾಡಿದರು. ಬಸವರಾಜ ಬಳ್ಳಾರಿ ಕುಚಿಪುಡಿ ನೃತ್ಯ ಪ್ರದರ್ಶಿಸಿದರು. ಬೆಳಿಗ್ಗೆ 11ಕ್ಕೆ ಆರಂಭಗೊಳ್ಳಬೇಕಿದ್ದ ಕಾರ್ಯಕ್ರಮ ಮಧ್ಯಾಹ್ನ 2.30ಕ್ಕೆ ಉದ್ಘಾಟನೆಯೊಂದಿಗೆ ಪ್ರಾರಂಭಗೊಂಡಿತು. ಸಚಿವರು ಮೂರೂವರೆ ಗಂಟೆ ವಿಳಂಬವಾಗಿ ಬಂದು ಉದ್ಘಾಟಿಸಿದರು.

## ಕುಡಿಯುವ ನೀರಿನ ಕಾಮಗಾರಿ ವಿಳಂಬಕ್ಕೆ ಶಾಸಕ ಪ್ರಭು ಚವಾಣ್ ಗರಂ

ಜಲಾಶಯದಿಂದ 0.174 ಟಿಎಂಸಿ ಅಡಿ ನೀರು ಪೂರೈಸಿ, ಕುಡಿಯುವ ನೀರಿನ ಸಮಸ್ಯೆ ನೀಗಿಸುವುದು ಇದರ ಮುಖ್ಯ ಉದ್ದೇಶ. ಆರಂಭದಲ್ಲಿ ಮಾಂಜ್ರಾ ನದಿಯಿಂದ ಪೈಪ್‌ಲೈನ್ ಮೂಲಕ ನೀರು ತರಲು ಯೋಜಿಸಲಾಗಿತ್ತು. ?30 ಕೋಟಿ ಮಂಜೂರಾಗಿತ್ತು. ಆದರೆ, ಜನವರಿ ನಂತರ ಮಾಂಜ್ರಾ ನದಿ ಬತ್ತು ಹೋಗುತ್ತದೆ. ಇದರಿಂದಾಗಿ 2023ರಲ್ಲಿ ಕಾರಂಜಾ ಜಲಾಶಯದಿಂದ ನೀರು ತೆಗೆದುಕೊಂಡು ಹೋಗಲು ನಿರ್ಧರಿಸಿ, ಸಂಪುಟದಲ್ಲಿ ಒಪ್ಪಿಗೆ ಪಡೆಯಲಾಗಿತ್ತು. ಅನುದಾನವೂ ಮಂಜೂರಾಗಿತ್ತು. ಮೂಲ ಯೋಜನೆಯ ಪ್ರಕಾರ, ಎರಡು ವರ್ಷಗಳಲ್ಲಿ ಕಾಮಗಾರಿ ಕೊನೆಗೊಳ್ಳಬೇಕು. ಈಗಾಗಲೇ ಒಂದು ವರ್ಷ ಕಳೆದು ಹೋಗಿದೆ. ಆದರೆ, ಕೆಲಸವೇ ಆರಂಭಿಸಿಲ್ಲ. ಸರ್ಕಾರ ಔರಾದ್ ಕ್ಷೇತ್ರದ ಜನರಿಗೆ ಮಾಡುತ್ತಿರುವ ಮೋಸ ಎಂದು ಟೀಕಿಸಿದರು.

ಅಧಿಕಾರಿಗಳ ಮೇಲೆ ಯಾವ ತರಹದ ಒತ್ತಡವಿದೆಯೋ ನನಗೆ ಗೊತ್ತಿಲ್ಲ. ಆದರೆ, ಇದರಿಂದ ಜನರಿಗೆ ಅನ್ಯಾಯವಾಗುತ್ತಿದೆ. ನಾನು ಬಿಜೆಪಿಯ ಶಾಸಕ ಎನ್ನುವ ಕಾರಣಕ್ಕಾಗಿ ಉದ್ದೇಶಪೂರ್ವಕವಾಗಿ ಈ ರೀತಿ ಮಾಡುತ್ತಿದ್ದಾರೋ ಏನೋ ಗೊತ್ತಾಗುತ್ತಿಲ್ಲ. ವಿರೋಧ ಪಕ್ಷದವರ ಕೆಲಸಗಳೇ ಮಾಡುತ್ತಿಲ್ಲ ಎಂದು ಆರೋಪಿಸಿದರು.

ಈ ಸರ್ಕಾರ ಬಂದ ನಂತರ ಔರಾದ್ ಕ್ಷೇತ್ರವನ್ನು ಎಲ್ಲದರಲ್ಲೂ ಕಡೆಗಣಿಸುತ್ತಿದೆ. ಈ ಯೋಜನೆ ಮುಗಿದರೆ ಔರಾದ್ ಹಾಗೂ ಕಮಲನಗರದಲ್ಲಿ ಶಾಶ್ವತವಾಗಿ ಕುಡಿಯುವ ನೀರಿನ ಸಮಸ್ಯೆ ನೀಗಲಿದೆ. ದೂರದೃಷ್ಟಿ ಇಟ್ಟುಕೊಂಡು ಹಟಕ್ಕೆ ಬಿದ್ದು ಈ ಯೋಜನೆ ತಂದಿದ್ದೇನೆ. ಆದರೆ, ಇದರ ಬಗ್ಗೆ ತಾತ್ಸಾರ ಮಾಡಲಾಗುತ್ತಿದೆ. ಇದರಿಂದ ನನಗೆ ನೋವಾಗುತ್ತಿದೆ. ಔರಾದ್‌ನಲ್ಲಿ ಈಗಾಗಲೇ ನೀರಿಗೆ ಸಮಸ್ಯೆ ಎದುರಾಗಿದೆ. ಆದರೆ, ಯೋಜನೆ ಪೂರ್ಣಗೊಳ್ಳುವವರೆಗೆ ನಾನು ವಿರಮಿಸುವುದಿಲ್ಲ. ಪ್ರತಿ 15 ದಿನಗಳಿಗೊಮ್ಮೆ ಬಂದು ಪರಿಶೀಲಿಸುತ್ತೇನೆ ಎಂದು ಎಚ್ಚರಿಕೆ ನೀಡಿದರು.

ಬಿಜೆಪಿ ಮುಖಂಡ ಗುರುನಾಥ ರಾಜಗೀರಾ, ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಸ್ವಾಮಿದಾಸ, ಬಿಜೆಪಿ ಮುಖಂಡರಾದ ರಾಮಶೆಟ್ಟಿ ಪನ್ನಾಳೆ, ಶಿವರಾಜ ಅಲ್ಲಾಜೆ, ಶ್ರೀಮಂತ ಪಾಟೀಲ, ದಯಾನಂದ ಘೂಳೆ, ಸಂಜು ವಡೆಯರ್, ಕೆರಬಾ ಪವಾರ್, ಸುಜಿತ ರಾಠೋಡ್, ಧನಾಜಿ ರಾಠೋಡ, ಮೃತ್ಯುಂಜಯ ಬಿರಾದಾರ ಹಾಜರಿದ್ದರು.

## ಅವಶ್ಯಕ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಿ ಜಿಲ್ಲಾಧಿಕಾರಿ ಡಾ.ಸುಶೀಲಾ.ಬಿ



ಯಾದಗಿರಿ : ಜನವರಿ 11– ಬರುವ ಫೆಬ್ರುವರಿ 8 ರಿಂದ 13 ರವರೆಗೆ ನಡೆಯಲಿರುವ ತಿಂಥನಿ ಶ್ರೀ ಮೌನೇಶ್ವರ ದೇವಸ್ಥಾನ ಇದರ ಜಾತ್ರಾ ಮಹೋತ್ಸವ ಸಂದರ್ಭದಲ್ಲಿ ಅವಶ್ಯಕಮುನ್ನೆಚ್ಚರಿಕೆಕ್ರಮಗಳನ್ನು ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಡಾ.ಸುಶೀಲಾ.ಬಿ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ತಿಂಥಣಿಮೌನೇಶ್ವರದೇವಸ್ಥಾನದ ಜಾತ್ರಾಮಹೋತ್ಸವದ ಸಿದ್ಧತೆಗಳ ಕುರಿತಂತೆ ಪರಿಶೀಲನಾ ಸಭೆ ನಡೆಸಿದ ಅವರು, ಜಾತ್ರೆಯ ಸಂದರ್ಭದಲ್ಲಿ ಸ್ವಚ್ಛತೆ,ಕುಡಿಯುವ ನೀರು, ಸುರಕ್ಷತಾ ಕ್ರಮಗಳಿಗೆ ಪ್ರಥಮ ಆದ್ಯತೆ ನೀಡುವಂತೆ ಸೂಚನೆ ನೀಡಿದರು.

ನದಿದಂಡೆಯಲ್ಲಿನರಸ್ತೆದುರಸ್ತಿಗೆ ಸಂಬಂಧಿಸಿದಂತೆ ಅಂದಾಜು ಪಟ್ಟಿ ತಕ್ಷಣ ಸಲ್ಲಿಸಬೇಕು. ನದಿ ವ್ಯಾಪ್ತಿಯಿಂದ 100 ಮೀಟ–ರ್ ದೂರದವರೆಗೆ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕು. ನದಿಯಲ್ಲಿ ಕಸ, ಬಟ್ಟೆ ಚೆಲ್ಲದಂತೆ ನಿಗಾವಹಿಸಬೇಕು. ಜಾತ್ರೆಯ ಸಂದರ್ಭದಲ್ಲಿ ಮದ್ಯ,ಮಾಂಸ ಮಾರಾಟ ನಿಷೇಧ ಕುರಿತಂತೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು.

ಜಾತ್ರೆಯ ಸಂದರ್ಭದಲ್ಲಿ ನಿರಂತರ ಸ್ವಚ್ಛತಾ ಕಾರ್ಯ ನಡೆಯಬೇಕು. ವಾರಕ್ಕೆರಡು ಬಾರಿ ಕಸ ವಿಲೇವಾರಿ ಆಗುವ ಜೊತೆಗೆ ಸ್ವಚ್ಛತೆಯ ಮತ್ತು ಸುರಕ್ಷತೆ ಬಗ್ಗೆ ಜಾಗೃತಿ ಮೂಡಿಸಲು ಸೂಚಿಸಿದರು.

ದೇವಸ್ಥಾನದ ವ್ಯಾಪ್ತಿಯಲ್ಲಿ ಶುದ್ಧ ಕುಡಿಯುವ ನೀರು ಪೂರೈಕೆ ಆಗಬೇಕು. ಕಮುನಿಟಿ ಸಾನಿಟರಿ ಸಂಕೀರ್ಣ ದುರಸ್ತಿ, ಯಾತ್ರಿನಿವಾಸ ದುರಸ್ತಿ, ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹರಿಸಲು ಸೂಕ್ತ ಕ್ರಮ ಕೈಗೊಳ್ಳಬೇಕು. ಆರ್.ಓ ಪ್ಲಾಂಟ್ ದುರಸ್ತಿಗೆ, ದೇವಸ್ಥಾನ ಮತ್ತು ಸುತ್ತಮುತ್ತಲಿನ ಜಲ ಸಂಪನ್ಮೂಲವನ್ನು ಕುಡಿಯಲು ಯೋಗ್ಯವಾಗಿದೆಯೇ ಎಂಬುದರ ಬಗ್ಗೆ ನೀರನ್ನು ಪರೀಕ್ಷೆಗೆ ಒಳಪಡಿಸಬೇಕು. ವಿಶೇಷವಾಗಿ ತಿಂಥನಿ ಗ್ರಾಮದ ವ್ಯಾಪ್ತಿಯಲ್ಲಿಯೂ ಕೊಳವೆ ಬಾವಿಗಳ ನೀರಿನ ಪರೀಕ್ಷೆ, ನದಿ ನೀರಿನ ಪರೀಕ್ಷೆ ಮಾಡುವಂತೆ ಸೂಚನೆ ನೀಡಿದರು.

ತಹಶೀಲ್ದಾರರು ತಾ.ಪಂ ಕಾರ್ಯನಿರ್ವಹಣಾಧಿಕಾರಿಗಳು, ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆ ಅಧಿಕಾರಿಗಳು, ಸೂಕ್ತ ಮೇಲ್ವಿಚಾರಣೆ ನಡೆಸಬೇಕು. ಪಿಡಿಓ ಗಳ ಮೇಲೆ ಅವಲಂಬನೆ ಆಗದೆ ಖುದ್ದಾಗಿ ಎಚ್ಚರಿಕೆ ವಹಿಸಬೇಕು. ನೀರು ಯೋಗ್ಯ ಇಲ್ಲದಿದ್ದಲ್ಲಿ ಜನರಿಗೆ ಅರಿವು ಮೂಡಿಸಬೇಕು ಎಂದು ಹೇಳಿದರು.

ಅವಶ್ಯಕ ಸಂದರ್ಭದಲ್ಲಿ ಟ್ಯಾಂಕರ್ ಮೂಲಕ ನೀರು ಪೂರೈಸಲು ಸೂಚನೆ ನೀಡಿದ ಅವರು ಜಾತ್ರೆಯ ಸಂದರ್ಭದಲ್ಲಿ ಆರೋಗ್ಯ ಇಲಾಖೆಯಿಂದ ಸಮರ್ಪಕವಾಗಿ ಔಷಧಿ ಇಟ್ಟುಕೊಳ್ಳಬೇಕು. ಅಂಬ್ಯುಲೆನ್ಸ್ ಸೌಲಭ್ಯ ಇರಬೇಕು. ಸಾರ್ವಜನಿಕರಿಗೆ ಸಮರ್ಪಕ ಬಸ್ ಗಳ ವ್ಯವಸ್ಥೆ, ಅಗ್ನಿಶಾಮಕ ಇಲಾಖೆ ವಾಹನ ವ್ಯವಸ್ಥೆ, ಸಿ.ಸಿ.ಟಿ.ವಿ ಗಳ ವ್ಯವಸ್ಥೆ, ಸೂಕ್ತ ಪಾರ್ಕಿಂಗ್ ವ್ಯವಸ್ಥೆ ಇರಬೇಕು ಎಂದು ಸೂಚಿಸಿ ದೇವಸ್ಥಾನ ಸಮಿತಿ ಹಾಗೂ ಅಧಿಕಾರಿಗಳು ಸಮನ್ವಯತೆಯಿಂದ ಕಾರ್ಯ ನಿರ್ವಹಿಸಿ ಭಕ್ತಾದಿಗಳಿಗೆ ನೆರವಾಗುವಂತೆ ತಿಳಿಸಿ, ಹಿಂದೂ–ಮುಸ್ಲಿಂ ಭಾವೈಕ್ಯತೆಯ ದೇವಸ್ಥಾನ ಇದಾಗಿರುವುದರಿಂದ ಸಕಲ ಕ್ರಮಗಳನ್ನು ಕೈಗೊಳ್ಳಲು ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಶರಣಬಸಪ್ಪ ಕೋಟೆಪ್ಪಗೋಳ, ಹೆಚ್ಚುವರಿ ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಧರಣೇಶ್, ಸುರಪುರ ಡಿವೈಎಸ್ಪಿ ಜಾವೇದ್, ಧರ್ಮದತ್ತಿ ಇಲಾಖೆ ತಹಶೀಲ್ದಾರ ಪಿ.ಶಾಂತಮ್ಮ, ಜಿ.ಪಂ. ಯೋಜನಾ ನಿರ್ದೇಶಕರು ದೇವರಮನಿ ಉಪಸ್ಥಿತರಿದ್ದರು.

## ಮೈಲಾಪೂರ ಗ್ರಾಮದ ಶ್ರೀ ಮೈಲಾರಲಿಂಗೇಶ್ವರ ಜಾತ್ರೆಯಲ್ಲಿ ಕುರಿಗಳನ್ನು ಹಾರಿಸುವುದನ್ನು ನಿಷೇಧಾಜ್ಞೆ ಜಾರಿಗೆ ಸೂಚನೆ

ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ : ಜನವರಿ 11–ಯಾದಗಿರಿ ತಾಲೂಕಿನ ಮೈಲಾಪೂರ ಗ್ರಾಮದ ಶ್ರೀ ಮೈಲಾರಲಿಂಗೇಶ್ವರ ಜಾತ್ರೆಯಲ್ಲಿ ಕುರಿಗಳನ್ನು ಹಾರಿಸುವುದನ್ನು ನಿಷೇಧಾಜ್ಞೆ ಜಾರಿಗೊಳಿಸಿ ಯಾದಗಿರಿ ಜಿಲ್ಲಾಧಿಕಾರಿ ಡಾ.ಸುಶೀಲಾ.ಬಿ ಅವರು ಆದೇಶ ಹೊರಡಿಸಿದ್ದಾರೆ.

ಯಾದಗಿರಿ ತಾಲೂಕಿನ ಮೈಲಾಪೂರ ಗ್ರಾಮದಲ್ಲಿ ಶ್ರೀ ಮೈಲಾರಲಿಂಗೇಶ್ವರ ಜಾತ್ರೆಯ 2025ರ ಜನವರಿ 12 ರಿಂದ 18ರ ವರೆಗೆ ನಡೆಯುವುದರಿಂದ ಜಾತ್ರೆಯ ಹಿನ್ನೆಲೆ 2025ರ ಜನವರಿ 14ರ ಮಂಗಳವಾರ ರಂದು ಜಾತ್ರೆಯಲ್ಲಿ ದೇವರ ಪಲಕ್ಕಿಗಾಗಿ ಭಕ್ತರು ಕುರಿಗಳನ್ನು ಹಾರಿಸುವ ವಾಡಿಕೆ ಇರುತ್ತದೆ. ಪ್ರಾಣಿ ಹಕ್ಕು ಕಾಯ್ದೆ 1960ನ್ನು ಉಲ್ಲಂಘನೆಯಾಗದಂತೆ ಅವಶ್ಯಕ ಕ್ರಮ ವಹಿಸಬೇಕು.

ಯಾದಗಿರಿ ಜಿಲ್ಲೆಯ ಯಾದಗಿರಿ ತಾಲೂಕಿನ ಮೈಲಾಪೂರ ಗ್ರಾಮದ ಶ್ರೀ ಮೈಲಾರಲಿಂಗೇಶ್ವರ ಜಾತ್ರೆಯಲ್ಲಿ ದೇವರ ಪಲ್ಲಕ್ಕಿಗೆ ಕುರಿ ಹಾಗೂ ಪ್ರಾಣಿಗಳನ್ನು ಹಾರಿಸುವುದು ಮತ್ತು ಜಾತ್ರೆಯಲ್ಲಿ ಕುರಿ ಮಾರಾಟ, ಖರೀದಿ ಹರಾಜು ಮಾಡುವುದನ್ನು ನಡೆಸದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವದು ಸೂಕ್ತವೆಂದು ಕಂಡುಬಂದಿರುವ ಹಿನ್ನೆಲೆ ಯಾದಗಿರಿ ತಾಲೂಕಿನ ಮೈಲಾಪೂರ ಗ್ರಾಮದಲ್ಲಿ ಶ್ರೀ ಮೈಲಾರಲಿಂಗೇಶ್ವರ ಜಾತ್ರೆಯು 2025ರ ಜನವರಿ 12 ರಿಂದ 18ರ ವರೆಗೆ ಜರುಗಲಿರುವ ಜಾತ್ರೆಯಲ್ಲಿ ಈ ದಿನಗಳಂದು ದೇವರ ಪಲ್ಲಕ್ಕಿಗೆ ಕುರಿಗಳನ್ನು ಹಾರಿಸುವದನ್ನು ಕಟ್ಟುನಿಟ್ಟಾಗಿ ನಿಷೇಧಿಸಿ ಆದೇಶಿಸಲಾಗಿದೆ.

ಜಾತ್ರೆಯಲ್ಲಿ ಯಾವುದೇ ಕಾರಣಕ್ಕೂ ಪ್ರಾಣಿ ಹಕ್ಕು ಕಾಯ್ದೆ 1960ನ್ನು ಉಲ್ಲಂಘನೆಯಾಗದಂತೆ ನೋಡಿಕೊಳ್ಳುವದು. ಜಾತ್ರೆಯಲ್ಲಿ ಯಾವುದೇ ಕಾರಣಕ್ಕೂ ಪ್ರಾಣಿ ಹಿಂಸೆ ಪ್ರತಿಭಂದಕ ಕಾಯ್ದೆ 1960ನ್ನು ಉಲ್ಲಂಘನೆಯಾಗದಂತೆ ನೋಡಿಕೊಳ್ಳುವುದು. ಜಾತ್ರೆಯಲ್ಲಿ ಯಾವುದೇ ಕಾರಣಕ್ಕೂ 2025ರ ಜನವರಿ 12ರ ಮಧ್ಯರಾತ್ರಿಯಿಂದ ಜನವರಿ 18ರ ಮಧ್ಯರಾತ್ರಿಯ ವರೆಗೆ ಗ್ರಾಮಕ್ಕೆ ಹೊಂದಿಕೊಂಡಿರುವ ಹತ್ತಿರ ರಸ್ತೆಗಳಲ್ಲಿ ಚೆಕ್ ಪೋಸ್ಟಗಳನ್ನು ನಿರ್ಮಿಸಿ ಕುರಿಗಳು ಜಾತ್ರೆಯಲ್ಲಿ ಪ್ರವೇಶವಾಗದಂತೆ ತಡೆಗಟ್ಟುವದು. ಮೈಲಾರಲಿಂಗೇಶ್ವರ ಜಾತ್ರೆಯಲ್ಲಿ ದೇವರ ಪಲ್ಲಕ್ಕಿಗೆ ಕುರಿ ಹಾಗೂ ಪ್ರಾಣಿಗಳನ್ನು ಹಾರಿಸುವುದು ಅಥವಾ ಕುರಿಗಳನ್ನು ಮಾರಾಟ ಮಾಡುವುದು ಕಂಡು ಬಂದಲ್ಲಿ ಅಂತಹ ಸ್ಥಳದ ಜಮೀನನ್ನು, ನಿವೇಶನವನ್ನು ಸರಕಾರದ ವಶಕ್ಕೆ ಪಡೆಯಲಾಗುವುದು. ಕುರಿಗಳನ್ನು ವಾಹನದಲ್ಲಿಯೇ ಮಾರಾಟ ಮಾಡುವುದು ತಿಳಿದುಬಂದರೆ, ಆ ವಾಹನವನ್ನು ಸಹ ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸಂಗೀತ ಪರೀಕ್ಷೆ ಬರೆದು ರಾಜ್ಯಕ್ಕೆ ದ್ವಿತೀಯ ರ್‍ಯಾಂಕ್ ಪಡೆದ ಬಾಲಾಜಿ ಹೊನ್ನಾಳೆ


ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ: ಜಾನಪದ, ಪೌರಾಣಿಕ, ದಾಸ ಸಾಹಿತ್ಯ, ಭಕ್ತ ಸಾಹಿತ್ಯ, ವನಚ ಸಾಹಿತ್ಯ, ಯಾವುದೇ ತರಹದ ಸಂಗೀತವಿರಲಿ ಬಾಲಾಜಿ ಹೊನ್ನಾಳೆ ಅವರ ಕಂಠದಿಂದ ಹಕ್ಕಿಯ ಹಾಡಿನಂತೆ ಹೊರಬರುತ್ತವೆ. ಎಸ್ಎಸ್ಎಲ್ಸಿ ಪಾಸಾಗುತ್ತಲೇ ಸಂಗೀತ ಕ್ಷೇತ್ರದಲ್ಲಿ ಸಾಧಿಸುವ ಗುರಿಯೊಂದಿಗೆ ಬಸವರಾಜ ಚಿಂಚೋಳೆ ಹೆಡಗಪುರ ಅವರ ಮಾರ್ಗದರ್ಶನದಲ್ಲಿ ಡಾ. ಗಂಗೂಬಾಯಿ ಹಾನಗಲ್ ಮೈಸೂರು ವಿಶ್ವವಿದ್ಯಾಲಯದಲ್ಲಿ ನಡೆದ ಸಂಗೀತ ಪರೀಕ್ಷೆಯಲ್ಲಿ ರಾಜ್ಯಕೆ ದ್ವಿತೀಯ ರ್‍ಯಾಂಕ್



ಪಡೆದಿದ್ದಾರೆ. ಘಾಟಬೋರಳ ಗ್ರಾಮದ ದಂಪತಿಗಳಾದ ಶಿಲ್ಪ ದಿಗಂಬರ ಹೊನ್ನಾಳೆ ಅವರ ಸುಪುತ್ರ ಬಾಲಾಜಿ ಹೊನ್ನಾಳೆ ಈಗ ಕರ್ನಾಟಕ ಶಾಸ್ತ್ರೀಯ ಸಂಗೀತ ದಾಸಸಾಹಿತ್ಯ ವಚನ ಸಾಹಿತ್ಯ ಭಕ್ತಿಗೀತೆ ಮಂಕುತಿಮ್ಮನ ಕಗ್ಗ ಸುಗಮ ಸಂಗೀತ ರಂಗಗೀತೆ ತತ್ವಪದ ಜಾನಪದ ಪರಿಸರ ಗೀತೆ ಚಿತ್ರಗೀತೆ ಕನ್ನಡದ ಸಮಗ್ರ ಸಾಹಿತ್ಯವನ್ನೂ ಸಂಗೀತಕ್ಕೆ ಬೆರೆಸಿ ಹಾಡುವ ಕಲೆ ಬಾಲಜಿ ಹೊನ್ನಾಳೆ ಅವರಿಗೆ ಕರಗತವಾಗಿದೆ. ನನ್ನ ಸೊಹೋದರ ಬಾಲಾಜಿ ಹೊನ್ನಾಳೆ ಸಂಗೀತ ಪರೀಕ್ಷೆಯಲ್ಲಿ ರಾಜ್ಯಕ್ಕೆ ದ್ವಿತೀಯ ರ್‍ಯಾಂಕ್ ಪಡೆದಿರುವುದು ನಮ್ಮ ಕುಟುಂಬಕ್ಕೆ ಖುಷಿ ತಂದಿದೆ ಇನ್ನು ರಾಜ್ಯ, ರಾಷ್ಟ್ರಮಟ್ಟದಲ್ಲಿ ಸಂಗೀತ ಸೇವೆ ಸಲ್ಲಿಸಿ ಸಾಧನೆ ಮಾಡಲಿ ಎಂದು ಸೊಹೋದರ ಮಂಜುನಾಥ್ ಹೋನಗೊಂಡ ಅಭಿನಂದಿಸಿ, ಶುಭ ಹಾರೈಸಿದರು.

## ಖಡಕೇಶ್ವರ ಪ್ರೌಢ ಶಾಲೆಯಲ್ಲಿ ಪಾಲಕರ ಸಭೆ




ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ: ಮಕ್ಕಳ ಶೈಕ್ಷಣಿಕ ಬೆಳವಣಿಗೆಯಲ್ಲಿ ಪಾಲಕರ ಹೊಣೆಗಾರಿಕೆ ಕೂಡ ದೊಡ್ಡದಿದೆ ಎಂದು ಸಂಸ್ಥೆಯ ಕೋಶಾಧ್ಯಕ್ಷ ಪ್ರಭುರಾವ ಧೂಪೆ ಹೇಳಿದರು. ಪಟ್ಟಣದ ಖಡಕೇಶ್ವರ ಪ್ರೌಢ ಶಾಲೆಯಲ್ಲಿ ಶನಿವಾರ ಆಯೋಜಿಸಿದ್ದ ಪಾಲಕರ ಮಿಲನ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮಕ್ಕಳಿಗೆ ಮನೆಯ ಪಾಠಶಾಲೆ ತಂದೆ ತಾಯಿಯೇ ಮೊದಲು ಗುರು ಆಗಿರುತ್ತಾರೆ. ಮಕ್ಕಳು ಪಾಲಕರ ನಡೆಯನ್ನು ಅನುಸರಿಸುತ್ತಾರೆ. ಹಾಗಾಗಿ ಮಕ್ಕಳ ಶೈಕ್ಷಣಿಕ ಪ್ರಗತಿ ಬಗ್ಗೆ ಪಾಲಕರು ಕಾಳಜಿ ವಹಿಸುವುದು ಅವಶ್ಯಕ. ಮಕ್ಕಳಲ್ಲಿ ಕಲಿಕೆಯ ವಾತಾವರಣ ಸೃಷ್ಟಿಸಿದರೇ ಮುಂದೆ ಉತ್ತಮವಾಗಿ ಶೈಕ್ಷಣಿಕ ಬೆಳವಣಿಗೆ ಸಾಧಿಸುತ್ತಾರೆ ಎಂದು ತಿಳಿಸಿದರು.

ಪಾಲಕರ ಪ್ರತಿನಿಧಿ ಸಂಗೀತಾ ಕಾಕನಾಳೆ ಮಾತನಾಡಿ, ಗ್ರಾಮೀಣ ಭಾಗದ ಮಕ್ಕಳಿಗೆ ಈ ಸಂಸ್ಥೆಯಲ್ಲಿ ಕಡಿಮೆ ಖರ್ಚಿನಲ್ಲಿ ಗುಣಾತ್ಮಕ ಶಿಕ್ಷಣದ ಜತೆಗೆ ಉತ್ತಮ ಸಂಸ್ಕಾರ, ದೇಶಭಕ್ತಿಯನ್ನು ಕಲಿಸಿಕೊಡುವ ಕೆಲಸ ಆಗುತ್ತಿದೆ. ಪಾಲಕರು ತಮ್ಮ ಮಕ್ಕಳನ್ನು ಈ ಶಾಲೆಯಲ್ಲಿ ಪ್ರವೇಶ ಕೊಡಿಸಿ ಸದುಪಯೋಗ ಪಡೆದುಕೊಳ್ಳಬೇಕು ಎಂದು ಸಲಹೆ ನೀಡಿದರು.

ಮುಖ್ಯಗುರು ಆನಂದ ಕಲ್ಯಾಣೆ ಪ್ರಾಸ್ತಾವಿಕವಾಗಿ ಮಾತನಾಡಿದರು.

ಈ ಸಂದರ್ಭದಲ್ಲಿ ಸಂಸ್ಥೆಯ ನಿರ್ದೇಶಕ ಅಶೋಕ ಲೋಖಂಡೆ, ಪ್ರಕಾಶ ರುದನೂರೆ, ಶುಭಂ ರಾಯವಾಡೆ ಸೇರಿದಂತೆ ಹಲವರು ಇದ್ದರು. ಅಂಜಲಿ ಜೋಶಿ ಸ್ವಾಗತ ಗೀತೆ ಹಾಡಿದರು. ಜಯಪ್ರಕಾಶ ಸಹಾನೆ ಸ್ವಾಗತಿಸಿದರು. ಉದಯ ಜೋಶಿ ನಿರೂಪಿಸಿದರು. ದಿಲೀಪ ಘಂಟೆ ವಂದಿಸಿದರು.

### ಸಹಕಾರಿ ಬ್ಯಾಂಕ್ ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆ

## ಓಲ್ಡ್ ಈಸ್ ಗೋಲ್ಡ್ ಪೆನಲ್ ದಿಂದ ನಾಮಪತ್ರ



ಮಲ್ಲಮ್ಮ ನುಡಿ ವಾರ್ತೆ

ತಾಳಿಕೋಟಿ: ಪಟ್ಟಣದ ಪ್ರತಿಷ್ಠಿತ ಸಹಕಾರಿ ಕೋ– ಆಪರೇಟಿವ್ ಬ್ಯಾಂಕ್ ಇದರ ಆಡಳಿತ ಮಂಡಳಿ ನಿರ್ದೇಶಕರ 13 ಸ್ಥಾನಗಳಿಗೆ ಜನವರಿ 19ರಂದು ಜರಗುವ ಚುನಾವಣೆಗೆ ಓಲ್ಡ್ ಈಸ್ ಗೋಲ್ಡ್ ( ಹಳೆಯ)ಪೆನಲ್ ನ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದರು. ನಾಮಪತ್ರ ಸಲ್ಲಿಸಲು ಕೊನೆಯ ದಿನವಾದ ಶನಿವಾರ(ಜ.11)ರಂದು ಪಟ್ಟಣದ ಶ್ರೀ ಖಾಸ್ಗತೇಶ್ವರ ಮಠಕ್ಕೆ ತಮ್ಮ ಅಪಾರ ಬೆಂಬಲಿಗರೊಂದಿಗೆ ಭೇಟಿ ನೀಡಿದ 13 ಅಭ್ಯರ್ಥಿಗಳು ಲಿಂಗೈಕ್ಯ ಉಭಯ ಶ್ರೀಗಳ ಗದ್ದುಗೆಗೆ ವಿಶೇಷ ಪೂಜೆ ಸಲ್ಲಿಸಿದರು. ಶ್ರೀಮಠದಲ್ಲಿಯೇ ನಡೆದ ಬೆಂಬಲಿಗರ ಸಭೆಯಲ್ಲಿ ಎಲ್ಲ ಅಭ್ಯರ್ಥಿಗಳೂ ಯಾವ ಕಾರಣಕ್ಕೂ ಚುನಾವಣೆಯಲ್ಲಿ ವ್ಯಕ್ತಿಗತವಾಗಿ ಮತಯಾಚನೆ ಮಾಡದೆ ಪೆನೆಲ್ ದಿಂದ ಮತಯಾಚನೆ ಮಾಡುತ್ತೇವೆ ಎಂದು ಪ್ರಮಾಣ ಮಾಡಿ ತಮ್ಮ ಒಗ್ಗಟ್ಟು ಪ್ರದರ್ಶಿಸಿದರು. ನಂತರ ಅಲ್ಲಿಂದ ತಮ್ಮ ನೂರಾರು ಬೆಂಬಲಿಗರೊಂದಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಬೃಹತ್ ಮೆರವಣಿಗೆಯನ್ನು ನಡೆಸಿ ಪಟಾಕಿ ಸಿಡಿಸಿ ತಮ್ಮ ಪೆನಲ್ ಗೆ ಗೆಲ್ಲಿಸಲು ಮತಯಾಚನೆ ಮಾಡುತ್ತಾ ಬ್ಯಾಂಕಿನ ಕಛೇರಿಗೆ ತಲುಪಿ ಅಲ್ಲಿ ಚುನಾವಣಾಧಿಕಾರಿ ಚೇತನ ಭಾವಿಕಟ್ಟಿ ಇವರಿಗೆ ತಮ್ಮ ನಾಮಪತ್ರ ಸಲ್ಲಿಸಿದರು. ನಂತರ ಮಾತನಾಡಿದ ಹಳೆಯ ಪೆನಲ್ ನ ಅಭ್ಯರ್ಥಿ ಕಾಶಿನಾಥ ಸಜ್ಜನ ಅವರು ನಾವು ಕಳೆದ ಕೆಲವು ಅವಧಿಗಳಿಂದ ಬ್ಯಾಂಕಿನ ನಿರ್ದೇಶಕರಾಗಿ ಅದರ ಏಳಿಗೆಗಾಗಿ ನಮ್ಮ ಹಿರಿಯರಾದ ದಿವಂಗತ ಸಂಗನಬಸವ ಸ್ವಾಮಿಗಳು, ಎಂ.ಕೆ.ಮುತ್ಯಾ, ಸುಬ್ಬಣ್ಣಶೆಟ್ರು, ವಿಠಲಸಿಂಗ್ ದಾದಾ ಹಾಗೂ ಕೆ.ಡಿ.ಪಾಟೀಲ ಅವರು ಹಾಕಿ ಕೊಟ್ಟು ಹೋದ ಮಾರ್ಗದಲ್ಲಿಯೇ ನಡೆದು ಪ್ರಾಮಾಣಿಕವಾಗಿ ಕೆಲಸ ಮಾಡಿದ್ದೇವೆ. ಇವತ್ತು ಈ ಬ್ಯಾಂಕು 25, ಸಾವಿರ ಬಂಡವಾಳದಿಂದ 225 ಕೋಟಿ ಬಂಡವಾಳ ಹೊಂದಿ ನಾಲ್ಕು ಶಾಖೆಗಳೊಂದಿಗೆ ಕಾರ್ಯನಿರ್ವಹಿಸುತ್ತಿದೆ. ಶೇರುದಾರ ಬಾಂಧವರು ಈ ಬಾರಿ ಮತ್ತೇ ನಮಗೆ ಆಶೀರ್ವಾದ ಮಾಡಿದಲ್ಲಿ ಹಲವಾರು ಹೊಸ ಯೋಜನೆಗಳೊಂದಿಗೆ ಇನ್ನೂ ಹೆಚ್ಚಿನ ಕೆಲಸ ಮಾಡುತ್ತೇವೆ ಎಂದರು. ಈ ಸಮಯದಲ್ಲಿ ಪೆನಲ್ ನ ಅಭ್ಯರ್ಥಿಗಳಾದ ಡಿ.ಎಸ್.ಹೆಬಸೂರ, ಕೆ.ಸಿ.ಸಜ್ಜನ, ಐ.ಬಿ.ಬಿಳೇಭಾವಿ, ಎಂ.ಎಸ್.ಸರಶೆಟ್ಟಿ, ಸಿ.ಎಸ್.ಯಾಳಗಿ ಎನ್.ಆಯ್.ಚಿನಗುಡಿ, ಡಿ.ಕೆ.ಪಾಟೀಲ, ಅಮರಸಿಂಗ್(ಬಾಬು) ವಿ.ಹಜೇರಿ, ಎಸ್.ಸಿ.ಪಾಟೀಲ, ಗಿರಿಜಾ ಬಿ.ಕೊಡಗಾನೂರ, ಶೈಲಜಾ ವಿ.ಬಡದಾಳಿ, ಆರ್.ಬಿ.ಕಟ್ಟಿಮನಿ, ಎಸ್.ವಾಯ್.ಬರದೇನಾಳ ಶ್ರೀಖಾಸ್ಗತೇಶ್ವರ ಮಠ ಆಡಳಿತಾಧಿಕಾರಿ ವೇ.ಮೂ.ಮುರಗೇಶ ವಿರಕ್ತಮಠ, ವಿ.ವಿ.ಸಂಘ ಅಧ್ಯಕ್ಷ ವಿ.ಸಿ.ಹಿರೇಮಠ, ಕಾರ್ಯದರ್ಶಿ ಕಾಶಿನಾಥ ಮುರಾಳ, ಮಾಸೂಮ ಕೆಂಭಾವಿ, ಚಿನ್ನಪ್ಪ ಮಾಳಿ, ಪ್ರಕಾಶ ಹಜೇರಿ, ವಾಸುದೇವ ಹೆಬಸೂರ, ಸಂಗಯ್ಯ ಕೊಡಗಾನೂರ, ಗವಿಸಂಗಯ್ಯ ಪಂಚಗಲ್ಲ, ಸಂಭಾಜಿವಾಡ್ಕರ, ಮಾನಸಿಂಗ್ ಕೊಕಟನೂರ, ಮಹಾಂತೇಶ ಮುರಾಳ, ಪ್ರಭು ಬಿಳೇಭಾವಿ, ಈಶ್ವರ ಹೂಗಾರ, ಜಗದೀಶ ಬೆಳೆಭಾವಿ, ರಮೇಶಸಾಲಂಕಿ, ರಾಮನಗೌಡ ಮಿಣಜಗಿ, ಗೀತಾ ಬಡದಾಳಿ, ಭಾರತಿ ಸುಣದಲ್ಲಿ, ಭಾಗ್ಯಶ್ರೀ ಬಡದಾಳಿ, ಶಿಲ್ಪಾ ಹಿರೇಮಠ ಈಶ್ವರ್ ಹೂಗಾರ, ಮೆಹಬೂಬ್ ಕೆಂಭಾವಿ, ಶ್ರೀಶೈಲ್ ಸಜ್ಜನ, ಚನ್ನಮಲ್ಲು ಕತ್ತಿ, ಸಹಾಯಕ ಚುನಾವಣಾಧಿಕಾರಿ ಆರ್.ಬಿ.ಧಮ್ಮೂರಮಠ, ವ್ಯವಸ್ಥಾಪಕಿ ಮಣೂರ ಹಾಗೂ ಬ್ಯಾಂಕಿನ ಸಿಬ್ಬಂದಿಗಳು ಇದ್ದರು.

## ಶಾಲೆ ಬಿಟ್ಟು ಹೋಟೇಲ್‌ದಲ್ಲಿ ಕೆಲಸ ಮಾಡುತ್ತಿದ್ದ ಇಬ್ಬರು ಮಕ್ಕಳನ್ನು ರಕ್ಷಿಸಿ ಬಾಲಮಂದಿರಕ್ಕೆ ದಾಖಲು




ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಜ.11–ಸಂಸ್ಕಾರ ಪ್ರತಿಷ್ಠಾನ ಸಂಸ್ಥೆಯಿಂದ ದೂರು ಬಂದ ಹಿನ್ನೆಲೆಯಲ್ಲಿ ಶುಕ್ರವಾರದಂದು ಬಾಲಕಾರ್ಮಿಕ ಯೋಜನಾ ಸೊಸೈಟಿ, ಮಾರ್ಗದರ್ಶಿ ಸಂಸ್ಥೆ, ಸಂಸ್ಕಾರ ಪ್ರತಿಷ್ಠಾನ ಸಂಸ್ಥೆ, ಮಕ್ಕಳ ಸಹಾಯವಾಣಿ 1098/112, ಸಹಯೋಗದೊಂದಿಗೆ ಶಾಲೆ ಬಿಟ್ಟು ಅಫಜಲಪೂರ ತಾಲೂಕಿನ ಗೋಬ್ಬೂರ (ಬಿ) ಗ್ರಾಮದ ಹೊಟೇಲ್‌ನಲ್ಲಿ ಕೆಲಸ ಮಾಡುತ್ತಿದ್ದ ಹೊಟೇಲ್‌ಗೆ ಭೇಟಿ ನೀಡಿ ಇಬ್ಬರು ಮಕ್ಕಳನ್ನು ಕೆಲಸದಿಂದ ಬಿಡಿಸಿ, ಅವರನ್ನು ರಕ್ಷಿಸಿ ಸರ್ಕಾರಿ ಬಾಲಕರ ಬಾಲಮಂದಿರದಲ್ಲಿ ದಾಖಲಿಸಲಾಗಿದೆ ಎಂದು ಕಲಬುರಗಿ ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿಯ ಯೋಜನಾ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಾಲಕಾರ್ಮಿಕ ಮತ್ತು ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ 1986 ತಿದ್ದುಪಡಿ 2016ರ ಅನ್ವಯ ಮಾಲೀಕರಿಗೆ 6 ತಿಂಗಳಿಂದ 2 ವರ್ಷಗಳ ವರೆಗೆ ಜೈಲು ಶಿಕ್ಷೆ ಅಥವಾ 20,000 ರೂ. ರಿಂದ 50,000 ರೂ.ಗಳ ವರೆಗೆ ದಂಡ ಅಥವಾ ಎರಡನ್ನೂ ವಿಧಿಸಲು ಅವಕಾಶವಿರುತ್ತದೆ.

ಗೌರವಾನ್ವಿತ ಭಾರತದ ಸರ್ವೋಚ್ಚ ನ್ಯಾಯಾಲಯವು ರೀಟ್ ಅರ್ಜಿ (ಸಿವಿಲ್) ಸಂಖ್ಯೆ 465/1986 ರಲ್ಲಿ ನೀಡಿರುವ ನಿರ್ದೇಶನದನ್ವಯ ತಪ್ಪಿತಸ್ಥ ಮಾಲೀಕರು ತಾವು ನಿಯೋಜನೆಗೊಂಡ ಪ್ರತಿ ಮಗುವಿಗೆ 20,000 ರೂ. ಪರಿಹಾರವನ್ನು ಮಕ್ಕಳ ಪುನರ್ವಸತಿಗೆ ರಚಿಸಲಾದ ಕಲ್ಯಾಣ ನಿಧಿಗೆ ಪಾವತಿಸಬೇಕಾಗಿರುತ್ತದೆ. ಸದರಿ ಮಕ್ಕಳ ದಾಖಲಾತಿಗಳನ್ನು ಸಂಗ್ರಹಿಸಿ ಕಾನೂನು ಕ್ರಮ ಕೈಗೋಳ್ಳಲಾಗುವುದೆಂದು ಕಲಬುರಗಿ ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೂಸೈಟಿ ಯೋಜನಾ ನಿರ್ದೇಶಕರಾದ ಸಂತೋಷ ಕುಲಕರ್ಣಿ ತಿಳಿಸಿದರು.

ಈ ಕಾರ್ಯಾಚರಣೆ ಸಂದರ್ಭದಲ್ಲಿ ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೂಸೈಟಿ ಯೋಜನಾ ನಿರ್ದೇಶಕರಾದ ಸಂತೋಷ ಕುಲಕರ್ಣಿ, ಮಕ್ಕಳ ಸಹಾಯವಾಣಿ–1098/112 ಕಾರ್ಯಕ್ರಮ ಸಂಯೋಜಕ ಬಸವರಾಜ ತೆಂಗಳಿ ಹಾಗೂ ಆಪ್ತಸಮಾಲೋಚಕ ಮಲ್ಲಯ್ಯ ಗುತ್ತೇದಾರ್, ಮಾರ್ಗದರ್ಶಿ ಸಂಸ್ಥೆಯ ನಿರ್ದೇಶಕ ಆನಂದರಾಜ, ಸಂಸ್ಕಾರ ಪ್ರತಿಷ್ಠಾನ ಸಂಸ್ಥೆಯ ನಿರ್ದೇಶಕ ವಿಠ್ಠಲ್ ಚಿಕಣಿ ಹಾಗೂ ಮೈಲಾರಿ ಉಪಸ್ಥಿತರಿದ್ದರು.

## ಜನವರಿ 15ರಂದು ದೇವದುರ್ಗ ತಾಲೂಕಿನಲ್ಲಿ ಕ್ರೀಡಾ ವಸತಿ ಶಾಲೆಗೆ ಆಯ್ಕೆ ಪ್ರಕ್ರಿಯೆ

ಮಲ್ಲಮ್ಮ ನುಡಿ ವಾರ್ತೆ

ರಾಯಚೂರು ಜನವರಿ 12–ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ನಡೆಸಲ್ಪಡುತ್ತಿರುವ ಕ್ರೀಡಾಶಾಲೆಗೆ 2025–26ನೇ ಸಾಲಿನ ಪ್ರವೇಶಕ್ಕೆ ದೇವದುರ್ಗ ತಾಲೂಕಿನಲ್ಲಿ ಅರಕೇರಾದ ಪದವಿ ಪೂರ್ವ ಕಾಲೇಜು ಆಟದ ಮೈದಾನದಲ್ಲಿ ಜನವರಿ 15ರಂದು ಆಯ್ಕೆ ಪ್ರಕ್ರಿಯೆ ನಡೆಯಲಿದ್ದು, ಆಸಕ್ತ ಕ್ರೀಡಾಪಟುಗಳು ಬೆಳಿಗ್ಗೆ 10 ಗಂಟೆಗೆ ಸಾಬಣ್ಣ ಮೊ.ಸಂ.9731493679, ಚನ್ನಪ್ಪ ಮೊ.ನಂ:7338647270 ಇವರಲ್ಲಿ ವರದಿ ಮಾಡಿಕೊಳ್ಳಲು ಸೂಚಿಸಲಾಗಿದೆ.

ಕಿರಿಯರ ವಿಭಾಗದ ಕ್ರೀಡಾ ವಸತಿ ಶಾಲೆಗಳ ಆಯ್ಕೆಯನ್ನು ಪ್ರಸ್ತುತ 7ನೇ ತರಗತಿ ಅಭ್ಯಾಸ ಮಾಡುತ್ತಿರುವ ಬಾಲಕ ಬಾಲಕಿಯರಿಗಾಗಿ ಅಥ್ಲೆಟಿಕ್ಸ್, ಬಾಸ್ಕೆಟ್‌ಬಾಲ್, ಫುಟ್‌ಬಾಲ್, ಜಿಮ್ನಾಸ್ಟಿಕ್, ಹಾಕಿ, ಜುಡೋ, ವಾಲಿಬಾಲ್ ಮತ್ತು ಕುಸ್ತಿ ವಿಭಾಗಗಳಲ್ಲಿ ಆಯ್ಕೆಯನ್ನು ನಡೆಸಲಾಗುವುದು. ಆಯ್ಕೆಯಲ್ಲಿ ಭಾಗವಹಿಸುವವರು 01–06–2025 ರಂದು 14 ವರ್ಷದೊಳಗಿರಬೇಕು ಮತ್ತು 8ನೇ ತರಗತಿಗೆ ಪ್ರವೇಶ ಪಡೆಯಲು ಅರ್ಹರಾಗಿರಬೇಕು. ಮತ್ತು ತಾವು ವ್ಯಾಸಾಂಗ ಮಾಡುತ್ತಿರುವ ಶಾಲಾ ಮುಖ್ಯಸ್ಥರಿಂದ ಜನ್ಮ ದಿನಾಂಕ ಪ್ರಮಾಣಪತ್ರ ಹಾಗೂ ವ್ಯಾಸಂಗ ಮಾಡುತ್ತಿರುವ ತರಗತಿಯ ವಿವರಗಳನ್ನೊಳಗೊಂಡ ದೃಢೀಕರಣ ಪತ್ರವನ್ನು ಆಯ್ಕೆ ದಿನದಂದು ಕಡ್ಡಾಯವಾಗಿ ತರಬೇಕು.

ಹಿರಿಯರ ವಿಭಾಗದ ಕ್ರೀಡಾ ವಸತಿ ಶಾಲೆಗಳ ಆಯ್ಕೆಯಲ್ಲಿ ಭಾಗವಹಿಸುವ ಕ್ರೀಡಾಪಟುಗಳು 01–06–2025 ರಂದು 18 ವರ್ಷದೊಳಗಿದ್ದು, ಪ್ರಥಮ ಪಿ.ಯು.ಸಿ ಪ್ರವೇಶ ಪಡೆಯಲು ಅರ್ಹರಿರಬೇಕು. ಆಯ್ಕೆಯನ್ನು ಪ್ರಸ್ತುತ 10ನೇ ತರಗತಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಬಾಲಕ ಬಾಲಕಿಯರಿಗಾಗಿ ಅಥ್ಲೆಟಿಕ್ಸ್, ಬಾಸ್ಕೆಟ್‌ಬಾಲ್, ಫುಟ್‌ಬಾಲ್, ಜಿಮ್ನಾಸ್ಟಿಕ್, ಹಾಕಿ, ಜುಡೋ, ವಾಲಿಬಾಲ್ ಮತ್ತು ಕುಸ್ತಿ ಸ್ಪರ್ಧೆಗಳ ಆಯ್ಕೆ ನಡೆಸಲಾಗುವುದು.

ಅರ್ಹ ಕ್ರೀಡಾಪಟುಗಳು ನಿಗದಿತ ನಮೂನೆಯ ಅರ್ಜಿಗಳನ್ನು ಈ ಕಚೇರಿಯಿಂದ ಪಡೆದು ಭರ್ತಿ ಮಾಡಿ ಸಲ್ಲಿಸಬಹುದಾಗಿದೆ. ತಾಲ್ಲೂಕು ಮಟ್ಟದ ಆಯ್ಕೆಯಲ್ಲಿ ಪಾಲ್ಗೊಳ್ಳುವ ಆಸಕ್ತ ಕ್ರೀಡಾಪಟುಗಳು ಆಯಾ ದಿನಾಂಕಗಳಂದು ಬೆಳಿಗ್ಗೆ 10 ಗಂಟೆಗೆ ಆಯ್ಕೆ ನಡೆಯುವ ಸ್ಥಳಗಳಲ್ಲಿ ವರದಿ ಮಾಡಿಕೊಳ್ಳಲು ಸೂಚಿಸಲಾಗಿದೆ. ಆಯ್ಕೆಯಾದ ಕ್ರೀಡಾಪಟುಗಳಿಗೆ 5ನೇ ತರಗತಿಯಿಂದ 10ನೇ ತರಗತಿಯವರೆಗೆ (ಕ್ರೀಡಾ ಕೌಶಲ್ಯ ನೀಡಿದಲ್ಲಿ) ಸರ್ಕಾರದ ವತಿಯಿಂದ ಉಚಿತ ವಸತಿ, ಪೌಷ್ಠಿಕ ಆಹಾರ, ತಜ್ಞ ತರಬೇತುದಾರರಿಂದ ಕ್ರೀಡಾ ತರಬೇತಿ, ಸಮವಸ್ತ್ರ ಮುಂತಾದವುಗಳನ್ನು ಒದಗಿಸಲಾಗುವುದು. ಆಯ್ಕೆಯಲ್ಲಿ ಭಾಗವಹಿಸುವ ಕ್ರೀಡಾಪಟುಗಳಿಗೆ ಯಾವುದೇ ವಿಧವಾದ ಭತ್ಯೆಯನ್ನು ನೀಡಲಾಗುವುದಿಲ್ಲ.

ಆಯ್ಕೆಯಲ್ಲಿ ಪಾಲ್ಗೊಳ್ಳುವ ಕ್ರೀಡಾಪಟುಗಳಿಗೆ ಯಾವುದೇ ವಿಧದ ಭತ್ಯೆಯನ್ನು ನೀಡಲಾಗುವುದಿಲ್ಲ. ಹೆಚ್ಚಿನ ವಿವರಗಳಿಗೆ ಸಹಾಯಕ ನಿರ್ದೇಶಕರ ಕಚೇರಿ ಮಹಾತ್ಮಗಾಂಧಿ ಜಿಲ್ಲಾ ಕ್ರೀಡಾಂಗಣ ರಾಯಚೂರು ಇಲ್ಲಿ ಕಚೇರಿ ಅವಧಿಯಲ್ಲಿ ಸಂಪರ್ಕಿಸಬಹುದಾಗಿದೆ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅಸ್ಪೃಶ್ಯತೆ ಸಾಮಾಜೀಕ ಪಿಡುಗು : ಬಸಂತಿ ಮಠ




ಮಲ್ಲಮ್ಮ ನುಡಿ ವಾರ್ತೆ


ನಾಲತವಾಡ: ಅಸ್ಪೃಶ್ಯತೆ ಕಂಡು ಬಂದಲ್ಲಿ ತಕ್ಷಣವೇ ಇಲಾಖೆಗೆ ಮಾಹಿತಿ ನೀಡಬೇಕು ಮಾಹಿತಿ ಗಂಭೀರವಾಗಿ ಪರಿಗಣಿಸುವ ಮೂಲಕ ಅಂತಹವರ ವಿರುದ್ಧ ಪರಿಣಾಮಕಾರಿ ಕ್ರಮ ಹಾಗೂ ಪ್ರಕರಣ ದಾಖಲಿಸುವ ಎಲ್ಲಾ ಅವಕಾಶಗಳಿವೆ ತಾಲ್ಲೂಕಾ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿ ಬಸಂತಿ ಮಠ ಹೇಳಿದರು.

ಇಲ್ಲಿಯ ಬಸವೇಶ್ವರ ವೃತ್ತದ ಬಳಿ ಜಿ.ಪಂ, ಸಮಾಜ ಕಲ್ಯಾಣ ಇಲಾಖೆ ವಿಜಯಪುರ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆ(ಐಆರ್‌ಡಿ) ವಿಜಯಪುರ ಇವರ ಸಂಯುಕ್ತಾಶ್ರಯದಡಿ ಹಮ್ಮಿಕೊಂಡಿದ್ದ 2024–25ನೇ ಸಾಲಿನ 'ಅಸ್ಪೃಶ್ಯತೆ ನಿರ್ಮೂಲನೆ' ಕುರಿತು ಹಮ್ಮಿಕೊಂಡಿದ್ದ ಜಾಗೃತಿ ಬೀದಿ ನಾಟಕವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪ.ಪಂ ಅಧ್ಯ–ಕ್ಷೆ ವಿಜಯಲಕ್ಷ್ಮಿ ಇಲಕಲ್ ಮಾತನಾಡಿ 'ಅಸ್ಪೃಶ್ಯತೆ ಎಂಬುವುದು ಒಂದು ಸಾಮಾಜೀಕ ಪಿಡುಗು ಅದನ್ನು ಗ್ರಾಮೀಣ ಭಾಗದ ಮೂಲೆ ಮೂಲೆಯಲ್ಲೂ ಪತ್ತೆ ಹಚ್ಚುವ ಮೂಲಕ ಬೇರು ಸಮೇತ ಕಿತ್ತೊಗೆಯಬೇಕು ಇಂತಹ ಅನಿಷ್ಟ ಪದ್ಧತಿಗೆ ಸಮುದಾಯದ ಸಹಭಾಗಿತ್ವ ಅವಶ್ಯ' ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಪ.ಪಂ ಉಪಾಧ್ಯಕ್ಷರಾದ ಬಸವರಾಜ ಗಂಗನಗೌಡರ, ಜಿಲ್ಲಾ ದೌರ್ಜನ್ಯ ಸಮೀತಿಯ ಬಿಜ್ಜೂರ ಗ್ರಾಮದ ಮಲ್ಲು ತಳವಾರ, ಪ.ಪಂ ಸಿಓ ಈರಣ್ಣ ಕೊಣ್ಣೂರ, ಪ.ಪಂ ಸದಸ್ಯರಾದ ಶಿವಪುತ್ರಪ್ಪ ಗುರಿಕಾರ, ಐ ಆರ್ ಡಿ ಇಸಿಓ ಬಾಬು ಸಜ್ಜನ, ಎಸ್.ಎಂ.ಕಲಬುರ್ಗಿ, ಎನ್.ಸಿ.ಗುಡಗುಂಟಿ, ಬಸಯ್ಯ ಹಿರೇಮಠ ಇದ್ದರು. ಮಹಾಂತೇಶ ತಾಳಿಕೋಟಿ ನಿರೂಪಿಸಿದರು, ಎಚ್ ಕೋರಿ ವಂದಿಸಿದರು.

# ಬೆನಕಟ್ಟಿಯಲ್ಲಿ ಜ.14 ರಿಂದ ವೇಮನರ ಜಾತ್ರಾ ಮಹೋತ್ಸವ




ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಜ.11:ತತ್ವಜ್ಞಾನಿ, ಮಹಾಯೋಗಿ ವೇಮನರ 613 ನೇ ಜಯಂತಿ ಅಂಗವಾಗಿ ತಾಲೂಕಿನ ಬೆನಕಟ್ಟಿ ಗ್ರಾಮದಲ್ಲಿ ಜ.14 ರಿಂದ 23ರವರೆಗೆ ವೇಮನರ ಜಾತ್ರಾ ಮಹೋತ್ಸವ ಜರುಗಲಿದೆ.ಜ.14 ಮಕರ ಸಂಕ್ರಾಂತಿ ದಿನದಿಂದ ಜ.18 ರವರೆಗೆ ಎರೆಹೊಸಳ್ಳಿಯ ರಡ್ಡಿ ಗುರುಪೀಠದ ಪೂಜ್ಯ ವೇಮನಾನಂದ ಮಹಾಸ್ವಾಮಿಗಳವರ ದಿವ್ಯ ಸಾನಿಧ್ಯದಲ್ಲಿ ಪ್ರತಿದಿನ ಸಂಜೆ 7 ಗಂಟೆಯಿಂದ ವೇಮನರ ಪದ್ಯಗಳ ಆಧಾರಿತ ಪ್ರವಚನ ಕಾರ್ಯಕ್ರಮ ನಡೆಯಲಿದೆ.

ಜಮಖಂಡಿ ತಾಲ್ಲೂಕಿನ ಹುಲ್ಯಾಳದ ಸಿದ್ಧ ಓಂಕಾರ ಆಶ್ರಮದ ಶರಣೆ ಜಯಶ್ರೀದೇವಿ ಅವರು ಪ್ರವಚನ ನಡೆಸಿಕೊಡಲಿದ್ದು, ಸ್ಥಳೀಯ ಹೇಮರಡ್ಡಿ ಮಲ್ಲಮ್ಮ ಭಜನಾ ತಂಡದವರಿಂದ ಸಂಜೆ 6 ಗಂಟೆಯಿಂದ ಭಜನೆ ಜರುಗಲಿದೆ.

ಪ್ರವಚನದ ನಂತರ ನಿತ್ಯ ದಾನಿಗಳಿಂದ ಅನ್ನಪ್ರಸಾದದ ವ್ಯವಸ್ಥೆ ನಡೆಯಲಿದ್ದು, ಜ.19 ವೇಮನರ ರಥೋತ್ಸವ ಜರುಗುವುದು. ಅಂದೇ ರಾತ್ರಿ ಮಲ್ಲಮಾಂಬೆ ನಾಟ್ಯ ಸಂಘದವರಿಂದ 'ಮಗ ಹೋದರೂ ಮಾಂಗಲ್ಯಬೇಕು' ಅರ್ಥಾತ 'ಹೆತ್ತವಳ ಹಾಲು ವಿಷವಾಯ್ತು' ಸಾಮಾಜಿಕ ನಾಟಕ ಪ್ರದರ್ಶನಗೊಳ್ಳಲಿದೆ.

ಜ.14ರಿಂದ 23ರವರೆಗೆ ಜಾತ್ರೆಯ ಅಂಗವಾಗಿ ಮಹಿಳಾ ಸಂಘಗಳು ಸೇರಿ ವಿವಿಧ ಸಂಘಟನೆಗಳು ಚಕ್ಕಡಿ ಓಟ, ಸಂಗ್ರಾಣಿ ಕಲ್ಲು ಎತ್ತುವುದು, ಹಗ್ಗ ಜಗ್ಗಾಟ, ಲೋಡೋ ಕಿಂಗ್, ರಸಪ್ರಶ್ನೆ, ಟಗರಿನ ಕಾಳಗ, ವೇಮನರ ವಚನ ಪಠಣ, ಗಾಯನ, ಮಹಿಳೆಯರಿಗೆ ರಂಗೋಲಿ, ರೊಟ್ಟಿ ಮಾಡುವುದು, ಸಿಹಿ ಪದಾರ್ಥ ತಯಾರಿಸುವುದು, ಟ್ರ್ಯಾಕ್ಟರ್ ರಿವರ್ಸ್, ನಾಯಿ ಓಟ ಮುಂತಾದ ಸ್ಪರ್ಧೆಗಳು ಹಾಗೂ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಿವೆ. ಜ.23 ರಥದ ಕಳಸ ಇಳಿಸುವ ಕಾರ್ಯಕ್ರಮ ಜರುಗಲಿದೆ.

# ಮಾಜಿ ಸಚಿವ ಎಚ್.ಆಂಜನೇಯ ಅವರನ್ನು ಎಂಎಲ್‌ಸಿ ಮಾಡಿ: ಕಮಲಾಕರ ಹೆಗಡೆ

ಮಲ್ಲಮ್ಮ ನುಡಿ ವಾರ್ತೆ

ಬೀದರ. ಜ. 12 : ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಗುತ್ತಿಗೆದಾರರ ಮೀಸಲಾತಿ ಜಾರಿಗೆ ತಂದು ಗುತ್ತೆಗೆದಾರರ ಪಾಲಿನ ಅನ್ನದಾತರಾಗಿರುವ ಮಾಜಿ ಸಚಿವ ಎಚ್.ಆಂಜನೇಯ ಅವರನ್ನು ವಿಧಾನ ಪರಿಷತ್ ಸದಸ್ಯರನ್ನಾಗಿ ನೇಮಕ ಮಾಡಬೇಕೆಂದು ಮಾದಿಗ ದಂಡೋರ ಮಾದಿಗ ಮೀಸಲಾತಿ ಹೋರಾಟ ಸಮಿತಿಯ ಜಿಲ್ಲಾ ಉಪಾಧ್ಯಕ್ಷ ಕಮಲಾಕರ ಹೆಗಡೆ ತಿಳಿಸಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಶನಿವಾರ ಹೆಚ್ ಆಂಜನೆಯ ಅವರ ಅಭಿಮಾನಿ ಬಳಗದ ರಾಜ್ಯಾಧ್ಯಕ್ಷರಾದ ದೇವಿದಾಸ ಅವರ ಆದೇಶದ ಮೆರೆಗೆ ಕರೆದ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು ಆಂಜನೇಯ ಅವರು ರಾಜ್ಯದಾದ್ಯಂತ ಅಪಾರ ಅಭಿಮಾನಿ ಬಳಗವನ್ನು ಹೊಂದಿದ್ದಾರೆ. ಅವರು ಸುಮಾರು ನಾಲ್ಕು ದಶಕಗಳಿಂದ ಕಾಂಗ್ರೆಸ್ ಪಕ್ಷದಲ್ಲಿ ದುಡಿಯುತ್ತಿದ್ದಾರೆ. ನಗರಸಭೆ ಸದಸ್ಯ ಸ್ಥಾನದಿಂದ ಹಿಡಿದು ಸಮಾಜ ಕಲ್ಯಾಣ ಇಲಾಖೆ ಸಚಿವರಾಗುವವರೆಗೆ ನಿರಂತರವಾಗಿ ಪಕ್ಷನಿಷ್ಠೆಯಿಂದ ಸೇವೆ ಸಲ್ಲಿಸುತ್ತಿದ್ದಾರೆ. ಕಳೆದ ಬಾರಿ ಕೆಲವರ ಕುತಂತ್ರದಿಂದ ಅವರು ಕೆಲವೇ ಮತಗಳಿಂದ ಸೋಲು ಅನುಭವಿಸಬೇಕಾಯಿತು. ಇಂತಹ ಪಕ್ಷನಿಷ್ಠೆ ಹಾಗೂ ಸರ್ವ ಸಮುದಾಯವನ್ನು ಸಮಾನವಾಗಿ ತೆಗೆದುಕೊಂಡು ಹೋಗುವ ಎಚ್.ಆಂಜನೇಯ ಅವರನ್ನು ಎಂಎಲ್‌ಸಿ ಮಾಡುವಂತೆ ಹೆಗಡೆ ಕೋರಿದರು.

ರಾಜ್ಯದಾದ್ಯಂತ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗಾಗಿ ವಸತಿ ನಿಲಯಗಳು, ಅಂಬೇಡ್ಕರ್ ಭವನ, ವಾಲ್ಮೀಕಿ ಭವನ ನಿರ್ಮಿಸಿದ್ದಲ್ಲದೆ, ಒಳಮೀಸಲಾತಿ ಜಾರಿಗೆ ನಿರಂತರವಾಗಿ ಶ್ರಮಿಸುತ್ತಿದ್ದಾರೆ. ಆಂಜನೇಯ ಅವರು ನಮ್ಮ ಸಮುದಾಯದ ಶಕ್ತಿ ಮತ್ತು ಉಸಿರಾಗಿದ್ದಾರೆ. ಆದ್ದರಿಂದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸಿಎಂ ಸಿದ್ಧರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ ಅವರು ಆಂಜನೇಯ ಅವರಿಗೆ ಎಂಎಲ್‌ಸಿ ಮಾಡಬೇಕೆಂದು ಕೋರಿದರು.

ಇದೇ ವೇಳೆ ಅಖಿಲ ಕರ್ನಾಟಕ ಹೆಚ್.ಆಂಜನೇಯ ಅಭಿಮಾನಿಗಳ ಬಳಗದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸ್ಟಿವನರಾಜ ನೀಲನೊರ, ತಾಲೂಕಾ ಅಧ್ಯಕ್ಷರಾದ ವಿನೋದ ನಾಗನಕೇರಾ, ಕಾಂಗ್ರೆಸ ಮುಖಂಡರಾದ ಹರೀಶ ಗಾಯಕವಾಡ, ಸಮಾಜದ ಮುಖಂಡರಾದ ಅಶೋಕ ಕಾರಪೆಂಟರ್, ರಾಜಕುಮಾರ ಶಾಪುರಕರ, ಸಾಲೋಮನ ಭಂಗೆ, ಅಶೋಕ ಕಾ ಸಾಗರ ಅಲೀಪುರ ಸೇರಿದಂತೆ ಸಮಾಜದ ಇತರರು ಉಪಸ್ಥಿತರಿದ್ದರು.



# ಕಲಾದಗಿ ಪಿಕೆಪಿಎಸ್‌ಗೆ ಮಂಜುನಾಥ ಅಧ್ಯಕ್ಷ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಜ.11:ತಾಲೂಕಿನ ಕಲಾದಗಿ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ನೂತನ ಅಧ್ಯಕ್ಷರಾಗಿ ಮಂಜುನಾಥ ಬಿಲಕೇರಿ, ಉಪಾಧ್ಯಕ್ಷರಾಗಿ ರಾಜೇಶ ಕಾಮಣ್ಣವರ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಸಹಾಯಕ ಚುನಾವಣಾಧಿಕಾರಿ ಚಂದ್ರಶೇಖರ ಬೀಳಗಿ ತಿಳಿಸಿದ್ದಾರೆ.

ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ತಲಾ ಒಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಅವಿರೋಧ ಆಯ್ಕೆ ನಡೆಯಿತು.

ನಿರ್ದೇಶಕರಾದ ಮಲ್ಲಪ್ಪ ಪರಚನ್ನಗೌಡ, ಮಂಜುನಾಥ ಗಾಣಿಗೇರ, ಬಸವರಾಜ ಪುಂಡಿಕಟಗಿ, ಬಸಪ್ಪ ಶಿವನಿಚ್ಚಿ, ಆನಂದ ಅರಕೇರಿ, ಮಹಾದೇವಿ ಶೆಟ್ಟೆಪ್ಪನ್ನವರ, ಬಸವ್ವ ಶಿವನಿಚ್ಚಿ, ಸದಾಶಿವ ಸಣ್ಣಕ್ಕಿ, ಮಳಿಯಪ್ಪ ಆಡಗಲ್, ಮುಖ್ಯಕಾರ್ಯನಿರ್ವಾಹಕ ಬಸವಂತಪ್ಪ ಶೆಟ್ಟೆಪ್ಪನವರ, ಮುಖಂಡರಾದ ಕೆ.ಎಲ್. ಬಿಲಕೇರಿ, ಲಕ್ಷ್ಮಣಗೌಡ ಗೌಡರ, ಕೆ.ಆರ್. ಶಿಲ್ಪಿ, ಬಶೆಟ್ಟೆಪ್ಪ ಅಂಗಡಿ, ಶ್ರೀಧರ ವಾಘ, ಪ್ರವೀಣ ಅರಕೇರಿ, ಲಕ್ಷ್ಮಣ ಶಿರಬೂರ, ಯಲ್ಲಪ್ಪ ಪೂಜಾರಿ, ಸಂಗಪ್ಪ ಭಬ್ಬಿ, ಯಲ್ಲಪ್ಪ ಹೊಸಕೋಟೆ ಇದ್ದರು.

# ಸಂವಿಧಾನ ವಿರೋಧಿ ಕಾಂಗ್ರೆಸನ್ನು ತಿರಸ್ಕರಿಸಬೇಕು:ಬಸವರಾಜ ಬೊಮ್ಮಾಯಿ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,11:ಪ್ರಧಾನಿ ನರೇಂದ್ರ ಮೋದಿಯವರ ಕಲ್ಯಾಣ ರಾಜ್ಯದ ಕನಸಿಗೆ ಎಲ್ಲರೂ ಬೆಂಬಲ ಕೊಟ್ಟಾಗ ಮಾತ್ರ ವಿಕಸಿತ ಭಾರತ ಆಗುತ್ತದೆ. ಅದಕ್ಕೆ ಎಲ್ಲ ವರ್ಗದ ಜನರು ಬೆಂಬಲ ಕೊಡಬೇಕು. ಸಂವಿಧಾನ ವಿರೋಧಿ ಕಾಂಗ್ರೆಸನ್ನು ಎಲ್ಲರೂ ತಿರಸ್ಕರಿಸಬೇಕು. ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ಬಾಗಲಕೋಟೆಯಲ್ಲಿ ಶನಿವಾರ ಸಿಟಿಜನ್ ಫಾರ್ ಸೋಸಿಯಲ್ ಜಸ್ಟಿಸ್ ಸಂಸ್ಥೆ ಏರ್ಪಡಿಸಿದ್ದ ಸಂವಿಧಾನ ಸನ್ಮಾನ ಮತ್ತು ಪುಸ್ತಕ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದ ಅವರು, ಭಾರತದ ಸಂಸ್ಕೃತಿಯಲ್ಲಿ ಪ್ರಾಯಶ್ಚಿತ ಎನ್ನುವ ಪದ ಇದೆ. ಯಾರು ಪಾಪ ಮಾಡುತ್ತಾರೋ ಅವರು ಪಾಯಶ್ಚಿತ ಮಾಡಿಕೊಳ್ಳುತ್ತಾರೆ ಎಂದರು.

ಬಾಬಾಸಾಹೇಬ್ ಅಂಬೇಡ್ಕರ್ ಅವರಿಗೆ ಅನ್ಯಾಯ ಮಾಡಿದವರು ಕಾಂಗ್ರೆಸ್ಸಿಗರು. ಅಂಬೇಡ್ಕರ್ ಅವರನ್ನು ಸಂವಿಧಾನ ರಚನಾ ಸಮಿತಿಯಲ್ಲಿಯೇ ಬರದಂತೆ ನೋಡಿದ್ದಲ್ಲದೇ ಅಂಬೇಡ್ಕರ್ ಅವರನ್ನು ಸೋಲಿಸಿದರು. ಅಂಬೇಡ್ಕರ್ ದಲಿತ ಸಮುದಾಯದ ಸರ್ವ ಸಮ್ಮತ ನಾಯಕರಾಗಿದ್ದರು. ಅದೇ ಕಾರಣಕ್ಕೆ ಅವರನ್ನು ಸಂವಿಧಾನ ರಚನಾ ಸಮಿತಿಯಿಂದ ಹೊರಗಿಡುವ ಪ್ರಯತ್ನ ಮಾಡಿದ್ದರು ಎಂದು ಬೊಮ್ಮಾಯಿ ಹೇಳಿದರು.

ಅಂಬೇಡ್ಕರ್‌ಗೆ ಅನ್ಯಾಯವಾದರೆ ಸಂವಿಧಾನಕ್ಕೆ ಅನ್ಯಾಯವಾದಂತೆ, ಅದಕ್ಕೆ ಈಗ ಕಾಂಗ್ರೆಸ್ಸಿನವರು ಸಂವಿಧಾನವನ್ನು ಕೈಯಲ್ಲಿ ಹಿಡಿದುಕೊಂಡು ತಿರುಗಾಡುತ್ತಿದ್ದಾರೆ. 2024 ರ ಲೋಕಸಭೆ ಚುನಾವಣೆ ನಂತರ ಸಂವಿಧಾನ ಹಿಡಿದು–ಕೊಂಡು ಓಡಾಡುತ್ತಿದ್ದಾರೆ. ಅವರ ಓಟ ಬ್ಯಾಂಕ್ ಆಗಿ ಎಸ್ಸಿ ಎಸ್ಟಿ ಸಮುದಾಯ ಉಳಿದಿಲ್ಲ ಅನ್ನುವ ಆತಂಕ ಶುರುವಾಗಿದೆ. ಅದಕ್ಕೆ ಅವರು ಈಗ ಸಂವಿಧಾನ ಹಿಡಿದು–ಕೊಂಡು ಓಡಾಡುತ್ತಿದ್ದಾರೆ ಇದುವೇ ಪಶ್ಚಾತಾಪ ಎಂದರು.

ಅಂಬೇಡ್ಕರ್ ಮುಸ್ಲಿಂರಿಗೆ ಹೇಗೆ ಪತ್ಯೇಕ ಕಾನೂನಿದೆಯೋ ಅದೇ ರೀತಿ ಹಿಂದುಗಳಿಗೂ ಪ್ರತ್ಯೇಕ ಕಾನೂನು ಇರಬೇಕು ಎಂದು ಹೇಳಿದರು. ಅದಕ್ಕಾಗಿ ರಾಜೀನಾಮೆ ನೀಡಿದರು. ರಾಹುಲ್ ಗಾಂಧಿಯವರು ಈಗ ಜಾತಿ ಗಣತಿ ಮಾಡಬೇಕು ಎಂದು ಹೇಳುತ್ತಿದ್ದಾರೆ. ಎಂ.ಎನ್ ರಾಯ್ ಅವರು ನಮ್ಮ ತಂದೆಯ ಗುರುಗಳು, ಅವರು 1934 ಸಂವಿಧಾನ ರಚನಾ ಸಮಿತಿ ಆಗಬೇಕು ಅಂತ ಹೇಳಿದ್ದರು. ಸ್ವಾತಂತ್ರ್ಯ ಹೋರಾಟದಲ್ಲಿ ಹೇಗೆ ಅನಾಮಧೇಯ ಹೋರಾಟಗಾರಿದ್ದರೋ, ಸಂವಿಧಾನ ರಚನೆಯಲ್ಲಿಯೂ ಅನಾಮಧೆಯ ಚಿಂತಕರಿದ್ದರು ಎಂದು ಬಸವರಾಜ ಬೊಮ್ಮಾಯಿ ಹೇಳಿದರು. ಕಾರ್ಯಕ್ರಮದಲ್ಲಿ ಗುಳೇದಗುಡ್ಡ ಮರಡಿಮಠದ ಶ್ರೀ ಅಭಿನವ ಕಾಡಸಿದ್ಧೇಶ್ವರ ಸ್ವಾಮೀಜಿ, ಮಾಜಿ ಡಿಸಿಎಂ ಹಾಗೂ ಸಂಸದ ಗೋವಿಂದ ಕಾರಜೋಳ, ಸಂಸದ ಪಿ.ಸಿ. ಗದ್ದಿಗೌಡರ, ಮಾಜಿ ಶಾಸಕ ಎನ್.ಮಹೇಶ್, ಪುಸ್ತಕ ಲೇಖಕ ವಿಕಾಸ್ ಕುಮಾರ್ ಪಿ. ಶಾಸಕ ಸಿದ್ದು ಸವದಿ, ಪರಿಷತ್ ಸದಸ್ಯ ಹನುಮಂತ ನಿರಾಣಿ, ಮಾಜಿ ಶಾಸಕ ವೀರಣ್ಣ ಚರಂತಿಮಠ ಸೇರಿದಂತೆ ಅನೇಕ ಮುಖಂಡರು ಹಾಜರಿದ್ದರು.



# ತಾವರಗೇರಾ ಮಠದಲ್ಲಿ ಜ. 14ರಂದು ಮಕರಜ್ಯೋತಿ ಪಡಿಪೂಜೆ, ದೀಪೋತ್ಸವ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ: ಜ.11: ಮಕರ ಜ್ಯೋತಿನಿಮಿತ್ಯ ಜಿಲ್ಲೆಯ ತಾವರಗೇರಾ ಶಿವಯೋಗಿ ಸಿದ್ಧಾರೂಢರ ಮಠದಲ್ಲಿ ಜನವರಿ 14ರಂದು ಸಂಜೆ 6–30ಕ್ಕೆ 216ನೇ ಪಡಿಪೂಜೆ, ಸಹಸ್ರ ದೀಪೋತ್ಸವ ಮತ್ತು ಧರ್ಮಸಭೆ ಹಮ್ಮಿಕೊಳ್ಳಲಾಗಿದೆ ಎಂದು ಮಠದ ಸದ್ಭಕ್ತ ಶಂಭುಲಿಂಗ್ ಮಠಪತಿ ಅವರು ತಿಳಿಸಿದರು.

ನಗರದ ಪತ್ರಿಕಾ ಭವನದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮದಲ್ಲಿ ಹಲವಾರು ಮಠಾಧೀಶರು, ರಾಜಕೀಯ ಗಣ್ಯರು, ಸಮಾಜಗಳ ಮುಖಂಡರು ಪಾಲ್ಗೊಳ್ಳುವರು ಎಂದರು.

ನೇತೃತ್ವವನ್ನು ಫಿರೋಜಾಬಾದ್‌ನ ಗುರುಬಸವ ಮಹಾಸ್ವಾಮೀಜಿ, ಅಧ್ಯಕ್ಷತೆಯನ್ನು ರಟಕಲ್‌ನ ರೇವಣಸಿದ್ಧ ಶಿವಾಚಾರ್ಯರು, ಸಮ್ಮುಖವನ್ನು ಜೇರಟಗಿಯ ಮಹಾಂತ ಸ್ವಾಮೀಜಿ, ರೋಜಾ ಹಿರೇಮಠದ ಕೆಂಚಬಸವ ಶಿವಾಚಾರ್ಯರು, ಅವರಾದ್(ಬಿ)ಯ ಮರುಳಸಿದ್ಧ ಶಿವಾಚಾರ್ಯರು, ಕಲಮೂಡದ ಬಾಲಯೋಗಿ ಶರಣ ಶಂಕರಲಿಂಗ ಮಹಾರಾಜರು ಮುಲ್ಲಾಮಾರಿ ಸೊಂತ್, ಅಧ್ಯಕ್ಷತೆಯನ್ನು ಶಾಸಕ ಬಸವರಾಜ್ ಬಿ. ಮತ್ತಿಮೂಡ್ ಅವರು ವಹಿಸುವರು. ಬೀದರ್ ದಕ್ಷಿಣ ಮತಕ್ಷೇತ್ರದ ಶಾಸಕ ಡಾ. ಶೈಲೇಂದ್ರ ಬೆಲ್ದಾಳೆ ಅವರು ಜ್ಯೋತಿ ಬೆಳಗಿಸುವರು ಎಂದು ಅವರು ಹೇಳಿದರು.

ಮುಖ್ಯ ಅತಿಥಿಗಳಾಗಿ ರಾಜ್ಯ ವಿಧಾನ ಪರಿಷತ್ ಸದಸ್ಯರಾದ ಬಿ.ಜಿ. ಪಾಟೀಲ್, ಜಗದೇವ್ ಗುತ್ತೇದಾರ್ ಕಾಳಗಿ, ತಿಪ್ಪಣ್ಣಪ್ಪ ಕಮಕನೂರ್, ಮಾಜಿ ಸಚಿವ ರೇವು ನಾಯಕ್ ಬೆಳಮಗಿ, ನಗರ ಪೋಲಿಸ್ ಆಯುಕ್ತ ಡಾ. ಶರಣಪ್ಪ ಎಸ್.ಡಿ. ಹಾಗೂ ಅತಿಥಿಗಳಾಗಿ ಹಲವಾರು ಗಣ್ಯರು ಅವರು ಆಗಮಿಸುವರು ಎಂದು ಅವರು ತಿಳಿಸಿದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಬಾಬುರಾವ್ ಯಡ್ರಾಮಿ, ಆಕಾಶವಾಣಿ ಮತ್ತು ದೂರದರ್ಶನ ಕಲಾವಿದ ಗುರುಶಾಂತಯ್ಯ ಸ್ಥಾವರಮಠ್ ಭೂಸನೂರು, ಚಿತ್ರಕಲಾವಿದೆ ಶ್ರೀಮತಿ ಮೀನಾಕ್ಷಿ ಅಂಬಯ್ಯ ಗುತ್ತೇದಾರ್, ನ್ಯಾಯವಾದಿ ನಾಗೇಶ್ ಶಂಕರ್ ಭಜಂತ್ರಿ, ವೈದ್ಯ ಡಾ. ಜಿಜೋ ಜೋಸ್ ಅವರಿಗೆ ಸಿದ್ಧಾರೂಢ ಶ್ರೀ ರತ್ನ ಪ್ರಶಸ್ತಿ ಪ್ರದಾನ ಮಾಡಿ ವಿಶೇಷವಾಗಿ ಸನ್ಮಾನಿಸಲಾಗುವುದು ಎಂದು ಅವರು ಹೇಳಿದರು.

ಬೆಳಿಗ್ಗೆ 9–30ರಿಂದ ಸಂಜೆ 4ರವರೆಗೆ ಉಚಿತ ಆರೋಗ್ಯ ತಪಾಸಣೆ ಶಿಬಿರವು ಶ್ರೀ ಹಿಂಗುಲಾಂಬಿಕಾ ಆಯುರ್ವೇದಿಕ್ ವೈದ್ಯಕೀಯ ಕಾಲೇಜು ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದಿಂದ ಜರುಗಲಿದೆ. ಉಚಿತ ನೇತ್ರ ತಪಾಸಣೆ ಶಿಬಿರವೂ ಸಹ ಅನುಗ್ರಹ ಕಣ್ಣಿನ ಆಸ್ಪತ್ರೆಯ ಡಾ. ಪ್ರಭುಗೌಡ ಬ. ಲಿಂಗದಳ್ಳಿ ಅವರಿಂದ ಆಯೋಜಿಸಲಾಗಿದೆ ಎಂದು ಅವರು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಸಂತೋಷಕುಮಾರ್ ರಾಂಪೂರೆ, ರಾಮಯ್ಯ ಬೆಜ್ಜಂಕೆ, ಅಂಬಯ್ಯ ಗುತ್ತೇದಾರ್, ಸುನೀಲ್ ಸಡಕಿನ್ ಮುಂತಾದವರು ಉಪಸ್ಥಿತರಿದ್ದರು.



## ಕ್ರೀಡೆಯಿಂದ ಮನಸ್ಸು ಉಲ್ಲಾಸವಾಗುತ್ತದೆ: ಸಿದ್ದನಗೌಡ ಪಾಟೀಲ್

ಮಲ್ಲಮ್ಮ ನುಡಿ ವಾರ್ತೆ

ಶಹಾಪುರ:ಜ.11:ಕೆಂಭಾವಿ ಪಟ್ಟಣದ ಹಿಲ್ಟಾಪ್ ಕಾಲೋನಿಯಲ್ಲಿ ಇಂದು ನಡೆದ ಕ್ರಿಕೆಟ್ ಪಂದ್ಯಾವಳಿಗೆ, ಮಾಜಿ ಜಿಪಂ ಅಧ್ಯಕ್ಷ ಸಿದ್ದನಗೌಡ ಪಾಟೀಲ ಭಾಗವಹಿಸಿ ಕ್ರಿಕೆಟ್ ಕ್ರೀಡಾಕೂಟವನ್ನು ಉದ್ಘಾಟನೆ ನೆರವೇರಿಸಿ ಮಾತನಾಡುತ್ತಾ ಇವತ್ತಿನ ದಿನಮಾನಗಳಲ್ಲಿ ಯುವಕರು ಹೆಚ್ಚು ಹೆಚ್ಚು ಕ್ರೀಡೆಯಲ್ಲಿ ಆಸಕ್ತಿಯಿಂದ ಭಾಗವಹಿಸಲು ಮುಂದಾಗಬೇಕು ಆಟದ ಜೊತೆಗೆ ಪಾಠದ ಕ್ರೀಡೆ, ಕಲೆ, ಸಾಹಿತ್ಯ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಯುವಕರಿಗೆ ಕರೆ ನೀಡಿದರು.



ಕ್ರಿಕೆಟ್ ಪಂದ್ಯಕ್ಕೆ ಮಹಿಪಾಲರೆಡ್ಡಿ ಡಿಗ್ಗಾವಿ ಅವರು ಚಾಲನೆ ನೀಡಿ ನಂತರ ಮಾತನಾಡಿ, ಕ್ರೀಡಾಕೂಟದಲ್ಲಿ ಪಾಲ್ಗೊಳ್ಳುವುದರಿಂದ ಆರೋಗ್ಯ ವೃದ್ಧಿಯಾಗಲಿದೆ. ಇಂತಹ ಕ್ರೀಡಾಕೂಟ ಹಮ್ಮಿಕೊಳ್ಳುವುದು ಒಳ್ಳೆಯ ಬೆಳವಣಿಗೆ. ಸೋಲು ಗೆಲುವು ಎನ್ನದೇ ಕ್ರೀಡಾ ಮನೋಭಾವನೆಯಿಂದ ಆಟವಾಡಬೇಕು ಸರ್ವಧರ್ಮ ಸಹಬಾಳ್ವೆಯಗೆ ಪೂರಕವಾಗಿದೆ. ನಾವೆಲ್ಲರೂ ಒಗ್ಗಟ್ಟಾಗಿ ಕ್ರೀಡಾಕೂಟವನ್ನು ಯಶಸ್ವಿಗೆ ಶ್ರಮಿಸೋಣ ಎಂದ ಹೇಳಿದರು

ಈ ಸಂದರ್ಭದಲ್ಲಿ ಪುರಸಭೆ ಸದಸ್ಯರಾದ ರಹೀಮಾನ ಪಟೇಲ್ ಯಲಗೋಡ, ರಾಘವೇಂದ್ರ ಕವಲ್ದಾರ, ಪತ್ರಕರ್ತ ಬಸನಗೌಡ ಪಾಟೀಲ ಪತ್ತೇಪೂರ, ರಂಗಪ್ಪ ವಡ್ಡರ, ಸಚಿನ್ ದೊರೆ, ಹನೀಫ್ ಸಾಸನೂರ, ಶಶಿಕುಮಾರ್ ಮ್ಯಾಗೇರಿ, ಶಿವು ಮಲ್ಲಿಬಾವಿ, ಸೋಹೆಲ್ ಸಾಸನೂರ ಕ್ರೀಡಾಪಟುಗಳು ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಭಾಲ್ಕಿ ಕೋಟೆ ಗೋಡೆ ಬಿರುಕು ದುರಸ್ತಿಗೆ ಮನವಿ



ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ:ಜ.11: ಹಳೇ ಪಟ್ಟಣ ಪ್ರವೇಶಿಸುವ ಮಾರ್ಗದ ಪುರಾತನ ಕಲ್ಲಿನ ಕೋಟೆ ಬಿರುಕು ಬಿಟ್ಟಿದ್ದು ಸಾರ್ವಜನಿಕರು ಆತಂಕದಲ್ಲಿ ಜೀವನ ಸಾಗಿಸುತ್ತಿದ್ದಾರೆ. ಕೂಡಲೇ ಕಲ್ಲಿನ ಕೋಟೆ ದುರುಸ್ತಿ ಸೇರಿ ವಿವಿಧ ಸಮಸ್ಯೆಗಳನ್ನು ಬಗೆ ಹರಿಸುವಂತೆ ಪುರಸಭೆ ಮಾಜಿ ಅಧ್ಯಕ್ಷ ಚಂದ್ರಕಾಂತ ಪಾಟೀಲ ಮನವಿ ಮಾಡಿದ್ದಾರೆ.

ಬೆಂಗಳೂರಿನ ಅರಣ್ಯ ಸಚಿವರ ನಿವಾಸದಲ್ಲಿ ಸಚಿವ ಈಶ್ವರ ಖಂಡ್ರೆ ಅವರನ್ನು ಭೇಟಿಯಾಗಿ ಮನವಿ ಸಲ್ಲಿಸಿದ ಅವರು, ಪುರಾತನ ಕಲ್ಲಿನ ಕೋಟೆ ಬಿರುಕು ಬಿಟ್ಟಿದ್ದು ಕುಸಿಯುವ ಹಂತಕ್ಕೆ ತಲುಪಿದೆ. ಇದರಿಂದ ಸಾರ್ವಜನಿಕರು ಆತಂಕದಲ್ಲಿ ಓಡಾಟ ನಡೆಸಿದ್ದಾರೆ. ಅಕ್ಕಪಕ್ಕದ ನಿವಾಸಿಗಳು ಆತಂಕದಲ್ಲಿದ್ದಾರೆ. ಸಣ್ಣ ಮಕ್ಕಳು ಜೀವ ಭಯದಲ್ಲಿ ಓಡಾಡುತ್ತಿದ್ದಾರೆ. ಅದಕ್ಕೆ ಶಾಶ್ವತವಾಗಿ ಪರಿಹಾರ ಕಂಡು ಕೊಡುವ ಕೆಲಸ ಆಗಬೇಕು. ಜತೆಗೆ ಹಳೇ ಪಟ್ಟಣದ ವಿವಿಧ ಭಾಗಗಳಲ್ಲಿ ರಸ್ತೆ ಕಾಮಗಾರಿ, ಕುಡಿಯುವ ನೀರಿನ ಸಮಸ್ಯೆ ಬಗೆ ಹರಿಸುವಂತೆ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ವಿಜಯಕುಮಾರ ಖಾಶೆಂಪೂರ, ತಾಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಮಲ್ಲಿಕಾರ್ಜುನ ಪ್ರಭಾ, ಪುರಸಭೆ ಮಾಜಿ ಸದಸ್ಯ ವೀರಶೆಟ್ಟಿ ಮೂಲಗೆ, ಯೋಗೇಶ ಉಮಾಜಿ ಸೇರಿದಂತೆ ಹಲವರು ಇದ್ದರು.

## ಸೋಲಿನ ಭೀತಿಯಿಂದ ಹಣಬಲ, ತೋಳ್ಬಲಕ್ಕೆ ಮುಂದಾದ ಸಂತೋಷ್ ಪಾಟೀಲ್ ಪೆನಾಲ್: ಶ್ರೀಧರ್ ಶಿರ್ಸೆ




ಮಲ್ಲಮ್ಮ ನುಡಿ ವಾರ್ತೆ

ಬೀದರ್: ಭಾಲ್ಕಿ ತಾಲೂಕಿನ ಜ್ಯಾಂತಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಹಾಲಿ ಅಧ್ಯಕ್ಷರಾಗಿರುವ ಸಂತೋಷ್ ಪಾಟೀಲ್ ಹಾಗೂ ಅವರ ಪೆನಲ್ ನವರು ಸೋಲಿನ ಭೀತಿಯಿಂದ ಕಂಗೆಟ್ಟು ಪ್ರಜಾಪ್ರಭುತ್ವವನ್ನು ಕಗ್ಗೊಲೆ ಮಾಡಿ ಚುನಾವಣೆಯನ್ನು ಎದುರಿಸಲಿಕ್ಕಾಗದೆ ಹಣಬಲ ತೋಳ್ಬಲದಿಂದ ಗೆಲ್ಲಲು ಹವಣಿಸುತ್ತಿದ್ದಾರೆ ಎಂದು ಅವರ ಪ್ರತಿಸ್ಪರ್ಧಿಯಾಗಿರುವ ನೇಳಗಿ ಗ್ರಾಮದ ಶ್ರೀಧರ್ ಶಿರ್ಸೆ ತಿಳಿಸಿದರು.ಶುಕ್ರವಾರ ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿರುವ ಅವರು, ಹಿಂದೆ ಸಂತೋಷ್ ಪಾಟೀಲ್ ಅವರು ಇದೇ ರೀತಿ ಹಣ ಹಾಗೂ ಹೆಂಡವನ್ನು ಕೊಟ್ಟು ಚುನಾವಣೆಯಲ್ಲಿ ಗೆದ್ದಿರುವರು. ಈಗ ರಾಜ್ಯದ ಅರಣ್ಯ, ಪರಿಸರ ಹಾಗೂ ಜೀವಶಾಸ್ತ್ರ ಹಾಗೂ ಬೀದರ್ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಅವರ ಹೆಸರು ಹೇಳಿಕೊಂಡು ಚುನಾವಣೆ ಎದುರಿಸುತ್ತಿರುವರು. ಪಿ.ಕೆಪಿ. ಎಸ್ ಸ್ಪರ್ಧಾಳುಗಳನ್ನು ಹೆದರಿಸಿ ಗದರಿಸಿ ಬೀದರ್ ಹಾಲಿ ಸಂಸದ ಸಾಗರ್ ಖಂಡ್ರೆ ಅವರ ಹೆಸರು ಹೇಳಿಕೊಂಡು ದಬ್ಬಾಳಿಕೆ ನಡೆಸಲು ಮುಂದಾಗಿದ್ದಾರೆ ಎಂದು ಆಪಾದಿಸಿದರು. ಇಂದು ಜ್ಯಾಂತಿ ಪಿ.ಕೆ.ಪಿ.ಎಸ್ ಚುನಾವಣೆ ನಿಗದಿಯಾಗಿದ್ದು, ಎದುರಾಳಿ ಸ್ಪರ್ಧಾಳುಗಳು ಸೋಲುವುದು ಕಟ್ಟಿಟ್ಟ ಬುತ್ತಿ. ಹಾಗಾಗಿ ಚುನಾವಣೆ ನಡೆಸದೇ ನೇರವಾಗಿ ಅಧಿಕಾರಕ್ಕೇರಬೇಕೆಂಬ ಅವರ ಹಗಲು ಕನಸ್ಸು ಸಾಕಾರ ಆಗಲು ಸಾಧ್ಯವಿಲ್ಲ. ಶುಕ್ರವಾರ ಈ ವಿಚಾರವಾಗಿ ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳಿಗೆ ದೂರು ನೀಡಿದಾಗ ಅಲ್ಲಿಯ ಪಿ.ಕೆ.ಪಿ.ಎಸ್ ಕಾರ್ಯದರ್ಶಿ ರವಿ ಅಂಬ್ರೆ ಎನ್ನುವವರು ಎದುರಾಳಿ ಸ್ಪರ್ಧಾಳುಗಳಿಂದ ಡಿಪಾಜಿಟ್ ಹಣ ಪಡೆದಿರುವರು.. ಒಳಗಿಂದೊಳಗೆ ಅವರಿಗೆ ಸಹಕಾರ ನೀಡುತ್ತಿರುವರು ನಮ್ಮ ಹತ್ತಿರ ಎರಡು ಸಾವಿರ ರೂಪಾಯಿ ಹಣ ಪಡೆದರೆ, ಅವರಿಂದ ಹಣ ಸ್ವೀಕರಿಸದೆ ಚುನಾವಣೆಗೆ ಅವಕಾಶ ನೀಡುತ್ತಿರುವುದು ದುರದೃಷ್ಟಕರ ಸಂಗತಿ ಎಂದರು.ನೀವು ಜ್ಯಾಂತಿಗೆ ಬಂದರೆ ನಿಮ್ಮ ಕೈಕಾಲು ಮುರಿಯುತ್ತೇವೆ ನಿಮಗೆ ಚುನಾವಣೆಗೆ ಅವಕಾಶ ನೀಡುವುದಿಲ್ಲ ಎಂದು ಸಂತೋಷ್ ಪಾಟೀಲ್ ಹಾಗೂ ಅವರ ತಂಡದವರು ನಮ್ಮನ್ನು ಹೆದರಿಸಿ ಬೆದರಿಸುತ್ತಿರುವ ಹಿನ್ನೆಲೆಯಲ್ಲಿ ಈಗಾಗಲೇ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಈ ವಿಷಯ ತಿಳಿಸಿದಾಗ ಕೂಡಲೇ ಅಲ್ಲಿಯ ಪಿಕೆಪಿಎಸ್ ಕಾರ್ಯದರ್ಶಿಗೆ ಫೋನ್ ಹಾಯಿಸಿ ಚುನಾವಣೆ ಪಾರದರ್ಶಕವಾಗಿ ನಡೆಯುವಂತೆ ವ್ಯವಸ್ಥೆ ಮಾಡಬೇಕು ಡಿಆರ್ ಹಣ ಕೂಡಲೇ ಕಟ್ಟಬೇಕೆಂದು ಆದೇಶ ಮಾಡಿದ ನಂತರ ಅವರು ಡಿಆರ್ ಹಣ ಕಟ್ಟಿರುವರು. ಪಾರದರ್ಶಕ ಚುನಾವಣೆಗೆ ಅವಕಾಶ ಮಾಡಿಕೊಟ್ಟ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಕೃತಜ್ಞತೆ ಸಲ್ಲಿಸುವದಾಗಿ ಶಿರ್ಸೆ ಹೇಳಿದರು.ಪಿಕೆಪಿಎಸ್ ಸ್ಪರ್ಧಾಳುಗಳಾದ ಚೆನ್ನಪ್ಪ ಹೊನ್ನಾ, ಶಿವಕುಮಾರ ಪಾಟೀಲ್, ಶ್ರೀಧರ್ ಶಿರ್ಸೆ ಬೆಂಬಲಿಗರಾದ ಓಂಕಾರ ಶಾರದಾ, ವಿಜಯಕುಮಾರ ಶಿರ್ಸೆ, ರಾಮ ಕಣಜಿ, ಜಯರಾಜ ಕಣಜಿ, ಹುಲೆಪ್ಪ ಮಾನಕರ್ ಹಾಗೂ ಇತರರು ಪತ್ರಿಕಾಗೋಷ್ಠಿಯಲ್ಲಿದ್ದರು.

ಬೀದರ್: ಭಾಲ್ಕಿ ತಾಲೂಕಿನ ಜ್ಯಾಂತಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಹಾಲಿ ಅಧ್ಯಕ್ಷರಾಗಿರುವ ಸಂತೋಷ್ ಪಾಟೀಲ್ ಹಾಗೂ ಅವರ ಪೆನಲ್ ನವರು ಸೋಲಿನ ಭೀತಿಯಿಂದ ಕಂಗೆಟ್ಟು ಪ್ರಜಾಪ್ರಭುತ್ವವನ್ನು ಕಗ್ಗೊಲೆ ಮಾಡಿ ಚುನಾವಣೆಯನ್ನು ಎದುರಿಸಲಿಕ್ಕಾಗದೆ ಹಣಬಲ ತೋಳ್ಬಲದಿಂದ ಗೆಲ್ಲಲು ಹವಣಿಸುತ್ತಿದ್ದಾರೆ ಎಂದು ಅವರ ಪ್ರತಿಸ್ಪರ್ಧಿಯಾಗಿರುವ ನೇಳಗಿ ಗ್ರಾಮದ ಶ್ರೀಧರ್ ಶಿರ್ಸೆ ತಿಳಿಸಿದರು.ಶುಕ್ರವಾರ ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿರುವ ಅವರು, ಹಿಂದೆ ಸಂತೋಷ್ ಪಾಟೀಲ್ ಅವರು ಇದೇ ರೀತಿ ಹಣ ಹಾಗೂ ಹೆಂಡವನ್ನು ಕೊಟ್ಟು ಚುನಾವಣೆಯಲ್ಲಿ ಗೆದ್ದಿರುವರು. ಈಗ ರಾಜ್ಯದ ಅರಣ್ಯ, ಪರಿಸರ ಹಾಗೂ ಜೀವಶಾಸ್ತ್ರ ಹಾಗೂ ಬೀದರ್ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಅವರ ಹೆಸರು ಹೇಳಿಕೊಂಡು ಚುನಾವಣೆ ಎದುರಿಸುತ್ತಿರುವರು. ಪಿ.ಕೆಪಿ. ಎಸ್ ಸ್ಪರ್ಧಾಳುಗಳನ್ನು ಹೆದರಿಸಿ ಗದರಿಸಿ ಬೀದರ್ ಹಾಲಿ ಸಂಸದ ಸಾಗರ್ ಖಂಡ್ರೆ ಅವರ ಹೆಸರು ಹೇಳಿಕೊಂಡು ದಬ್ಬಾಳಿಕೆ ನಡೆಸಲು ಮುಂದಾಗಿದ್ದಾರೆ ಎಂದು ಆಪಾದಿಸಿದರು. ಇಂದು ಜ್ಯಾಂತಿ ಪಿ.ಕೆ.ಪಿ.ಎಸ್ ಚುನಾವಣೆ ನಿಗದಿಯಾಗಿದ್ದು, ಎದುರಾಳಿ ಸ್ಪರ್ಧಾಳುಗಳು ಸೋಲುವುದು ಕಟ್ಟಿಟ್ಟ ಬುತ್ತಿ. ಹಾಗಾಗಿ ಚುನಾವಣೆ ನಡೆಸದೇ ನೇರವಾಗಿ ಅಧಿಕಾರಕ್ಕೇರಬೇಕೆಂಬ ಅವರ ಹಗಲು ಕನಸ್ಸು ಸಾಕಾರ ಆಗಲು ಸಾಧ್ಯವಿಲ್ಲ. ಶುಕ್ರವಾರ ಈ ವಿಚಾರವಾಗಿ ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳಿಗೆ ದೂರು ನೀಡಿದಾಗ ಅಲ್ಲಿಯ ಪಿ.ಕೆ.ಪಿ.ಎಸ್ ಕಾರ್ಯದರ್ಶಿ ರವಿ ಅಂಬ್ರೆ ಎನ್ನುವವರು ಎದುರಾಳಿ ಸ್ಪರ್ಧಾಳುಗಳಿಂದ ಡಿಪಾಜಿಟ್ ಹಣ ಪಡೆದಿರುವರು.. ಒಳಗಿಂದೊಳಗೆ ಅವರಿಗೆ ಸಹಕಾರ ನೀಡುತ್ತಿರುವರು ನಮ್ಮ ಹತ್ತಿರ ಎರಡು ಸಾವಿರ ರೂಪಾಯಿ ಹಣ ಪಡೆದರೆ, ಅವರಿಂದ ಹಣ ಸ್ವೀಕರಿಸದೆ ಚುನಾವಣೆಗೆ ಅವಕಾಶ ನೀಡುತ್ತಿರುವುದು ದುರದೃಷ್ಟಕರ ಸಂಗತಿ ಎಂದರು.ನೀವು ಜ್ಯಾಂತಿಗೆ ಬಂದರೆ ನಿಮ್ಮ ಕೈಕಾಲು ಮುರಿಯುತ್ತೇವೆ ನಿಮಗೆ ಚುನಾವಣೆಗೆ ಅವಕಾಶ ನೀಡುವುದಿಲ್ಲ ಎಂದು ಸಂತೋಷ್ ಪಾಟೀಲ್ ಹಾಗೂ ಅವರ ತಂಡದವರು ನಮ್ಮನ್ನು ಹೆದರಿಸಿ ಬೆದರಿಸುತ್ತಿರುವ ಹಿನ್ನೆಲೆಯಲ್ಲಿ ಈಗಾಗಲೇ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಈ ವಿಷಯ ತಿಳಿಸಿದಾಗ ಕೂಡಲೇ ಅಲ್ಲಿಯ ಪಿಕೆಪಿಎಸ್ ಕಾರ್ಯದರ್ಶಿಗೆ ಫೋನ್ ಹಾಯಿಸಿ ಚುನಾವಣೆ ಪಾರದರ್ಶಕವಾಗಿ ನಡೆಯುವಂತೆ ವ್ಯವಸ್ಥೆ ಮಾಡಬೇಕು ಡಿಆರ್ ಹಣ ಕೂಡಲೇ ಕಟ್ಟಬೇಕೆಂದು ಆದೇಶ ಮಾಡಿದ ನಂತರ ಅವರು ಡಿಆರ್ ಹಣ ಕಟ್ಟಿರುವರು. ಪಾರದರ್ಶಕ ಚುನಾವಣೆಗೆ ಅವಕಾಶ ಮಾಡಿಕೊಟ್ಟ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಕೃತಜ್ಞತೆ ಸಲ್ಲಿಸುವದಾಗಿ ಶಿರ್ಸೆ ಹೇಳಿದರು.ಪಿಕೆಪಿಎಸ್ ಸ್ಪರ್ಧಾಳುಗಳಾದ ಚೆನ್ನಪ್ಪ ಹೊನ್ನಾ, ಶಿವಕುಮಾರ ಪಾಟೀಲ್, ಶ್ರೀಧರ್ ಶಿರ್ಸೆ ಬೆಂಬಲಿಗರಾದ ಓಂಕಾರ ಶಾರದಾ, ವಿಜಯಕುಮಾರ ಶಿರ್ಸೆ, ರಾಮ ಕಣಜಿ, ಜಯರಾಜ ಕಣಜಿ, ಹುಲೆಪ್ಪ ಮಾನಕರ್ ಹಾಗೂ ಇತರರು ಪತ್ರಿಕಾಗೋಷ್ಠಿಯಲ್ಲಿದ್ದರು.

## ಇಂದು ಅನುಗ್ರಹ ಕಣ್ಣಿನ ಆಸ್ಪತ್ರೆಯ ನೂತನ ಶಾಖೆ ಉದ್ಘಾಟನೆ ನಾಳೆ




ಮಲ್ಲಮ್ಮ ನುಡಿ ವಾರ್ತೆ

ನಾಲತವಾಡ: ಡಾ.ಪ್ರಭುಗೌಡ ಲಿಂಗದಳ್ಳಿ ಅವರ ವಿಜಯಪುರದ ಅನುಗ್ರಹ ಕಣ್ಣಿನ ಆಸ್ಪತ್ರೆಯ ಎಸ್.ಬಿ.ಡೇರೇದ ಮೆಮೋರಿಯಲ್ ಅನುಗ್ರಹ ಪ್ರಾಥಮಿಕ ದೃಷ್ಟಿ ತಪಾಷಣಾ ಕೇಂದ್ರದ ಉದ್ಘಾಟನೆ ಡೇ-ರೇದ ವಾಣಿಜ್ಯ ಮಳಿಗೆಯಲ್ಲಿ ಜ.12 ಭಾನುವಾರ 10 ಗಂಟೆಗೆ ನೆರವೇರಲಿದೆ.

ಬಿಲ್‌ಕೆರೂರನ ಸಿದ್ದಲಿಂಗ ಶಿವಾಚಾರ್ಯ ಮಹಾಸ್ವಾಮೀಗಳ ದಿವ್ಯ ಸಾನಿದ್ಯದಲ್ಲಿ ಜಟ್ಟಿಂಗರಾಯ ದೇವಸ್ಥಾನದ ಆವರಣದಲ್ಲಿ ಕಾರ್ಯಕ್ರಮ ನಡೆಯಲಿದ್ದು, ಆಸ್ಪತ್ರೆಯ ಶಾಖೆಯನ್ನು ಸಾಬೂನ ಮತ್ತು ಮಾರ್ಜಕ ನಿಗಮದ ಅಧ್ಯಕ್ಷರು ಶಾಸಕ ಸಿ.ಎಸ್.ನಾಡಗೌಡ ಹಾಗೂ ಮಹಾರಾಷ್ಟ್ರದ ಮಾಜಿ ಶಾಸಕಿ ನಂದಿನಿ ದೇಶಮುಖ ಅವರು ಜಂಟಿಯಾಗಿ

ಉದ್ಘಾಟಿಸುವರು.

ಜಿ.ಪಂ ಮಾಜಿ ಸದಸ್ಯರಾದ ಪ್ರಭು ಡೇರೇದ ಅವರ ಅಧ್ಯಕ್ಷತೆಯಲ್ಲಿ ನಡೆಯುವ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಪ.ಪಂ ಅಧ್ಯಕ್ಷೆ ವಿಜಯಲಕ್ಷ್ಮಿ ಇಲಕಲ್ ಹಾಗೂ ಉಪಾಧ್ಯಕ್ಷ ಬಸವರಾಜ ಗಂಗನಗೌಡ್ರ ಆಗಮಿಸಲಿದ್ದಾರೆ.

ಉಚಿತ ತಪಾಷಣೆ: ಇದೇ ವೇಳೆ ಈಚೆಗೆ ನಿಧನರಾದ ಎಸ್.ಬಿ.ಡೇರೇದ ಅವರ ಸ್ಮರಣಾರ್ಥವಾಗಿ ಉಚಿತವಾಗಿ ಹಾಗೂ ರಿಯಾಯಿತಿ ದರದಲ್ಲಿ ಶಸ್ತ್ರಚಿಕಿತ್ಸೆಯನ್ನು ಹಮ್ಮಿಕೊಳ್ಳಲಾಗಿದೆ ಹಾಗೂ ಶಿಬಿರದಲ್ಲಿ ಡಾ.ಪ್ರಭುಗೌಡ ಲಿಂಗದಳ್ಳಿ ನೇತ್ರ ತಜ್ಞರು ಭಾಗವಹಿಸುತ್ತಾರೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

## ಮಾಜಿ ಸಚಿವ ಎಚ್.ಆಂಜನೇಯ ಅವರನ್ನು ಎಂಎಲ್‌ಸಿ ಮಾಡಿ: ಕಮಲಾಕರ ಹೆಗಡೆ




ಮಲ್ಲಮ್ಮ ನುಡಿ ವಾರ್ತೆ

ಬೀದರ:ಪರಿಶಿಷ್ಟಜಾತಿ ಪರಿಶಿಷ್ಟ ಪಂಗಡದ ಗುತ್ತಿಗೆದಾರರ ಮೀಸಲಾತಿ ಜಾರಿಗೆ ತಂದು ಗುತ್ತೆಗೆದಾರರ ಪಾಲಿನ ಅನ್ನದಾತರಾಗಿರುವ ಮಾಜಿ ಸಚಿವ ಎಚ್.ಆಂಜನೇಯ ಅವರನ್ನು ವಿಧಾನ ಪರಿಷತ್ ಸದಸ್ಯರನ್ನಾಗಿ ನೇಮಕ ಮಾಡಬೇಕೆಂದು ಮಾದಿಗ ದಂಡೋರ ಮಾದಿಗ ಮೀಸಲಾತಿ ಹೋರಾಟ ಸಮಿತಿಯ ಜಿಲ್ಲಾ ಉಪಾಧ್ಯಕ್ಷ ಕಮಲಾಕರ ಹೆಗಡೆ ತಿಳಿಸಿದರು. ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಶನಿವಾರ ಕರೆದ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು ಆಂಜನೇಯ ಅವರು ರಾಜ್ಯಾದ್ಯಂತ ಅಪಾರ ಅಭಿಮಾನಿ ಬಳಗವನ್ನು ಹೊಂದಿದ್ದಾರೆ. ಅವರು ಸುಮಾರು ನಾಲ್ಕು ದಶಕಗಳಿಂದ ಕಾಂಗ್ರೆಸ್ ಪಕ್ಷದಲ್ಲಿ ದುಡಿಯುತ್ತಿದ್ದಾರೆ. ನಗರಸಭೆ ಸದಸ್ಯ ಸ್ಥಾನದಿಂದ ಹಿಡಿದು ಸಮಾಜ ಕಲ್ಯಾಣ ಇಲಾಖೆ ಸಚಿವರಾಗುವವರೆಗೆ ನಿರಂತರವಾಗಿ ಪಕ್ಷನಿಷ್ಠೆಯಿಂದ ಸೇವೆ ಸಲ್ಲಿಸುತ್ತಿದ್ದಾರೆ. ಕಳೆದ ಬಾರಿ ಕೆಲವರ ಕುತಂತ್ರದಿಂದ ಅವರು ಕೆಲವೇ ಮತಗಳಿಂದ ಸೋಲು ಅನುಭವಿಸಬೇಕಾಯಿತು. ಇಂತಹ ಪಕ್ಷನಿಷ್ಠೆ ಹಾಗೂ ಸರ್ವ ಸಮುದಾಯವನ್ನು ಸಮಾನವಾಗಿ ತೆಗೆದುಕೊಂಡು ಹೋಗುವ ಎಚ್.ಆಂಜನೇಯ ಅವರನ್ನು ಎಂಎಲ್‌ಸಿ ಮಾಡುವಂತೆ ಹೆಗಡೆ ಕೋರಿದರು. ರಾಜ್ಯಾದ್ಯಂತ ಪರಿಶಿಷ್ಟಜಾತಿ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗಾಗಿ ವಸತಿ ನಿಲಯಗಳು, ಅಂಬೇಡ್ಕರ್ ಭವನ, ವಾಲ್ಮೀಕಿ ಭವನ ನಿರ್ಮಿಸಿದ್ದಲ್ಲದೆ, ಒಳಮೀಸಲಾತಿ ಜಾರಿಗೆ ನಿರಂತರವಾಗಿ ಶ್ರಮಿಸುತ್ತಿದ್ದಾರೆ. ಆಂಜನೇಯ ಅವರು ನಮ್ಮ ಸಮುದಾಯದ ಶಕ್ತಿ ಮತ್ತು ಉಸಿರಾಗಿದ್ದಾರೆ. ಆದ್ದರಿಂದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸಿಎಂ ಸಿದ್ಧರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ ಅವರು ಆಂಜನೇಯ ಅವರಿಗೆ ಎಂಎಲ್‌ಸಿ ಮಾಡಬೇಕೆಂದು ಕೋರಿದರು. ಇದೇ ವೇಳೆ ಅಖಿಲ ಕರ್ನಾಟಕ ಹೆಚ್.ಆಂಜನೇಯ ಅಭಿಮಾನಿಗಳ ಬಳಗದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸ್ವಿವನರಾಜ ನೀಲನೊರ, ತಾಲೂಕಾ ಅಧ್ಯಕ್ಷರಾದ ವಿನೋದ ನಾಗನಕೇರಾ, ಕಾಂಗ್ರೆಸ ಮುಖಂಡರಾದ ಹರೀಶ ಗಾಯಕವಾಡ, ಸಮಾಜದ ಮುಖಂಡರಾದ ರಾಜಕುಮಾರ ಶಾಪುರಕರ, ಸಾಲೋಮನ ಭಂಗೆ, ಸಾಗರ ಅಲೀಪುರ ಸೇರಿದಂತೆ ಸಮಾಜದ ಇತರರು ಉಪಸ್ಥಿತರಿದ್ದರು.

## ಶಿರಸಂಗಿ ಲಿಂಗರಾಜ ದೇಸಾಯಿಯವರು ಸದಾ ಸ್ಮರಣೀಯರು–ಅಂಗಡಿ



ಮಲ್ಲಮ್ಮ ನುಡಿ ವಾರ್ತೆ

ಸುರಪುರ: ತ್ಯಾಗವೀರ ಮಹಾದಾನಿ ಶಿರಸಂಗಿ ಶ್ರೀ ಲಿಂಗರಾಜ ದೇಸಾಯಿ ಅವರು ಸದಕಾಲ ಸ್ಮರಣೀಯರಾಗಿದ್ದಾರೆ ಎಂದು ಅಖಿಲ ಭಾರತ ವೀರಶೈವ ಮಹಾಸಭಾ ಸುರಪುರ ತಾಲೂಕ ಅಧ್ಯಕ್ಷ ಪ್ರಕಾಶ ಅಂಗಡಿ ಕನ್ನೆಳ್ಳಿ ಹೇಳಿದರು, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಸುರಪುರ ಹಾಗೂ ಅಖಿಲ ಭಾರತ ಲಿಂಗಾಯತ ಕುಡುವಕ್ಕಲಿಗ ಮಹಾಸಭಾ ಸುರಪುರ ಘಟಕ ಸಹಯೋಗದೊಂದಿಗೆ ಬಸವೇಶ್ವರ ಪತ್ತಿನ ಸಹಕಾರಿ ಬ್ಯಾಂಕ್ ಆವರಣದಲ್ಲಿ ಇಂದು ಆಯೋಜಿಸಿದ್ದ ಶ್ರೀ ಶಿರಸಂಗಿ ಲಿಂಗರಾಜ ದೇಸಾಯಿ ಅವರ 164 ನೇ ಜಯಂತಿ ಸಮಾರಂಭದಲ್ಲಿ ಮಾತನಾಡಿದ ಅವರು, ಹಾವೇರಿ ಜಿಲ್ಲೆಯ ವನಶಿಗ್ಲಿಯಲ್ಲಿ ಜನಿಸಿದ ರಾಮಪ್ಪ ಗೂಳಪ್ಪ ಮಡ್ಲಿ 11ನೇ ವಯಸ್ಸಿನಲ್ಲಿಯೇ ಶಿರಸಂಗಿ ರಾಜಮನೆತನದ ದತ್ತ ಪುತ್ರನಾಗಿ ಲಿಂಗರಾಜ ಸರದೇಸಾಯಿ ಹೆಸರು ಪಡೆದು ಅರಸನಾದ, 45 ನೇ ವಯಸ್ಸಿನಲ್ಲಿ ಲಿಂಗೈಕ್ಯರಾದರು. ಈ ಅಲ್ಪ ಅವಧಿಯಲ್ಲಿನ ಅವರ ಸಾಧನೆ ಅಪೂರ್ವ. ಕರ್ನಾಟಕ ಲಿಂಗಾಯತ ಶಿಕ್ಷಣ ಸಂಸ್ಥೆಯನ್ನು ( ಕೆಎಲ್‌ಇ) ಸ್ಥಾಪಿಸಿದರು. ಹಾನಗಲ್ ಕುಮಾರ ಸ್ವಾಮಿಗಳ ಆಶೀರ್ವಾದ ಪಡೆದು, ಅರಟಾಳ ರುದ್ರಗೌಡ, ವಾರದ ಮಲ್ಲಪ್ಪ, ಪುಟ್ಟಣ್ಣಶೆಟ್ಟಿ ಮುಂತಾದವರನ್ನು ಒಗ್ಗೂಡಿಸಿ ಅಖಿಲ ಭಾರತ ವೀರಶೈವ ಮಹಾಸಭೆಯನ್ನು ಹುಟ್ಟು ಹಾಕಿದರು. ಕಾಶಿಯ ಜಂಗಮವಾಡಿ ಮಠಕ್ಕೆ ಸಂಸ್ಥಾನದ 150 ಎಕರೆ ಭೂಮಿಯನ್ನು ನೀಡಿದರು. ಹಾವೇರಿ ಬಳಿ ದೇವೀಹೊಸೂರಿನಲ್ಲಿ 150 ಎಕರೆ ಖರೀದಿಸಿ ಕೃಷಿ ತರಬೇತಿ ಶಾಲೆ ತೆರೆದರು. ಸಿದ್ಧಗಿರಿಯಲ್ಲಿ ಕಾಡಸಿದ್ಧನ ಭವ್ಯ ಕೋಟೆ, ಧಾರವಾಡ ವಿಜಯಪುರಗಳಲ್ಲಿ ಟೌನ್ ಹಾಲ್, ಹಾಸ್ಟೆಲ್, ದಲ್ಲಾಳಿ ಮಂಡಳಿ ಕಟ್ಟಿದರು. ಅನೇಕ ಕೆರೆ ಕಟ್ಟೆ ಬಾವಿ ನೀರಾವರಿ ಯೋಜನೆ ಅನುಷ್ಠಾನಗೈದರು. ಪ್ರಗತಿಪರ ಚಿಂತಕರಾಗಿ ವಿಧವಾವಿವಾಹ ಬೆಂಬಲಿಸಿದರು. ಮಕ್ಕಳಾಗದ್ದರಿಂದ ಲೋಕದ ಮಕ್ಕಳೇ ತನ್ನ ಮಕ್ಕಳೆಂದು ಭಾವಿಸಿ ಆಸ್ತಿ ಸಮಾಜಕ್ಕೆ ದಕ್ಕಲೆಂದು ಮೃತ್ಯುಪತ್ರ ಬರೆದರು. ಇದರ ಪ್ರತಿಫಲವಾಗಿ ನವಲಗುಂದ ಶಿರಸಂಗಿ ಟ್ರಸ್ಟ್ ಫಂಡ್ ಅಸ್ತಿತ್ವಕ್ಕೆ ಬಂತು. ಡಿ ಸಿ ಪಾವಟೆ, ಎಸ್ ಸಿ ನಂದಿಮಠ, ಡಿ. ಸಿ. ಕರ್ಕಿ, ಬಿ. ಡಿ. ಜತ್ತಿ, ಎಸ್ ಆರ್ ಕಂಠಿ, ಹಳ್ಳಿಕೇರಿ ಗುದ್ಲೆಪ್ಪರಂಥವರು ಇದರ ನೆರವು ಪಡೆದು ನಾಡಿನ ಮಹಾನ್ ಚೇತನರಾದರು ಎಂದು ಹೇಳಿದರು. ಇ ಸಂದರ್ಭದಲ್ಲಿ ಸುರಪುರ ಪಿ ಎಲ್ ಡಿ ಬ್ಯಾಂಕ್ ಅಧ್ಯಕ್ಷರಾದ ಬಸನಗೌಡ ಪಾಟೀಲ್ ದೇವಾಪುರ, ಕುಡ ಒಕ್ಕಲಿಗ ಮಹಾಸಭಾ ಜಿಲ್ಲಾಧ್ಯಕ್ಷ ಸಿದ್ದನಗೌಡ ಹಂದ್ರಾಳ, ತಾಲೂಕ ಅಧ್ಯಕ್ಷ ಸಿದ್ದನಗೌಡ ಹೆಬ್ಬಾಳ, ಮುಖಂಡರಾದ ಶಿವಶರಣಪ್ಪ ಹೆಡಗಿನಾಳ, ಶರಣು ಮುಧೋಳ, ಪ್ರದೀಪ ಕದರಾಪುರ, ರವಿ ಹೇಮನೂರ, ಶೇಖರ ಕುಂಬಾರ, ಅನ್ನಪೂರ್ಣ ಜಕರೆಡ್ಡಿ ಸೇರಿದಂತೆ ಇತರರಿದ್ದರು,

## ಸಗರ ಎಲ್ಲಮ್ಮ ದೇವಸ್ಥಾನಕ್ಕೆ ಅನುದಾನ ಬಿಡುಗಡೆ ದರ್ಶನಪುರ



ಮಲ್ಲಮ್ಮ ನುಡಿ ವಾರ್ತೆ

ಶಾಹಪೂರ: ತಾಲೂಕಿನ ಸಗರ ಗ್ರಾಮದ ಸುಕ್ಷೇತ್ರ ಗುಡ್ಡದ ಯಲ್ಲಮ್ಮ ದೇವಸ್ಥಾನಕ್ಕೆ ತೆರಳುವ 38 ಲಕ್ಷ ರೂ. ವೆಚ್ಚದ ಮೆಟ್ಟಿಲುಗಳ ಉದ್ಘಾಟನೆ ಮತ್ತು 25 ಲಕ್ಷ ರೂ. ವೆಚ್ಚದ ಶೌಚಾಲಯ ಕಾಮಗಾರಿಗೆ ಜಿಲ್ಲಾ ಉಸ್ತುವಾರಿ ಸಚಿವ ಶರಣಬಸಪ್ಪಗೌಡ ದರ್ಶನಾಪುರ ಚಾಲನೆ ನೀಡಿದರು.

ಸಮಾರಂಭದಲ್ಲಿ ಮಾತನಾಡಿದ ಸಚಿವರು, ದೇವಸ್ಥಾನದಿಂದ ರತ್ನಾಳ ಗ್ರಾಮಕ್ಕೆ ಹೋಗುವ ರಸ್ತೆ ನಿರ್ಮಿಸಲಾಗುವುದು ಮತ್ತು ಭಕ್ತರಿಗೆ ಉಳಿದುಕೊಳ್ಳಲು 4 ಕೋಣೆಗಳನ್ನು ನಿರ್ಮಾಣಕ್ಕೆ ಆದ್ಯತೆ ನೀಡಲಾಗುವುದು. ಇದರಿಂದ ದೂರದ ಗ್ರಾಮಗಳಿಂದ ಬರುವ ಭಕ್ತಾಧಿಗಳಿಗೆ ಅನುಕೂಲವಾಗಲಿದೆ ಮತ್ತು ದೇವಸ್ಥಾನದ ಒಂದು

ಭಾಗದ ಗೋಡೆ ಕುಸಿದಿದ್ದು, ಅನುದಾನ ಒದಗಿಸಿ ದುರಸ್ತಿಗೊಳಿಸಲಾಗುವುದು ಎಂದು ಭರವಸೆ ನೀಡಿದರು. ಅಲ್ಲದೆ, ಶೌಚಾಲಯ ನಿರ್ಮಾಣಕ್ಕೆ ಚಾಲನೆ ನೀಡಿದ್ದು, ಭಕ್ತಾಧಿಗಳಿಗೆ ಅನುಕೂಲವಾಗಲಿದೆ ಎಂದರು.

ಕಾರ್ಯಕ್ರಮದಲ್ಲಿ ಚೆಂದಪ್ಪ ಸೇರಿ, ಲಿಂಗಣ್ಣ ಪಡಶೆಟ್ಟಿ, ನಾಗಣಗೌಡ ಸುಬೇದಾರ, ಪರಶುರಾಮ್ ಮಹಲ್ ರೋಜಾ, ಶಶಾಂಕ, ಎಇ ರಫೀಕ್ ಬಸಣಗೌಡ ಸುಬೇದಾರ, ಬಸವರಾಜ ಕನಗೊಂಡ, ಅಮೀನರೆಡ್ಡಿ ಮಲ್ಲೇದ, ಪ್ರಕಾಶ ಪಡಶೆಟ್ಟಿ, ಮಲ್ಲು ಕೊಬರಿ, ಮಹಾಂತೇಶ ಕೂಡೊರು, ಮಾನಪ್ಪ ಪೂಜಾರಿ, ಭಾಗಪ್ಪ ಗೂಡಾಳಿ, ಲಕ್ಷ್ಮಣ ಉರಕಾಯಿ, ಬೀಮಣ್ಣಕಾಶಿ, ಶಿವುಮಾಹಂತ ಚಂದಾಪುರ, ನಾನಾಗೌಡ ಸೈದಾಪುರ ಸೇರಿದಂತೆ ಗಾಮಸರು ಇದರು.

## ಇಂದು ಜೈ ಗಜಾನನ ಸೌಹರ್ದ ಸಹಕಾರಿ ಬ್ಯಾಂಕ್ ನ ಹೊಸ ಶಾಖೆ ಉದ್ಘಾಟನೆ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಜ. 12 :- ಜೈ ಗಜಾನನ ಸೌಹರ್ದ ಸಹಕಾರಿ ಬ್ಯಾಂಕ್ ಉದ್ಘಾಟನೆ ಜ. 12 ರಂದು ಬೆ. 11 ಗಂ-ಟೆಗೆ ಶಿವನಗರ ಸಿಗ್ನಲ್ ಹತ್ತಿರ ಜರುಗಲಿದೆ. ಉದ್ಘಾಟನೆಯನ್ನು ಸೌಹರ್ದ ಸಹಕಾರಿ ಬ್ಯಾಂಕ್ ಗಳ ಸಂಘದ ಅಧ್ಯಕ್ಷರಾದ ಗುರುನಾಥ ಜ್ಯಾಂತಿ-ಕರ್ ನೆರವೇರಿಸಲಿದ್ದಾರೆ ಎಂದು ಜೈ ಗಜಾನನ ಸೌಹರ್ದ ಸಹಕಾರಿ ಬ್ಯಾಂಕ್ ಸಂಸ್ಥಾಪಕ ಅಧ್ಯಕ್ಷ ವಿಜಯಕುಮಾರ ಶಿಂಧೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉದ್ಘಾಟನೆಗೆ ಮುಖ್ಯ ಅತಿಥಿಗಳಾಗಿ ನಗರಸಭೆ ಸದಸ್ಯ ರಾಜು ಚಿಂತಾಮಣಿ, ಸತ್ಯಂ ಸಂಸ್ಥೆಯ ಧಿವಾಜಿರಾವ ಭೋಸ್ಲೆ, ವಕೀಲರಾದ ವಾಡೇಕರ್ ದಸವಂತರಾವ, ಪಿಎಸ್ ಐ ಪ್ರಭಾಕರ ಪಾಟೀಲ, ಪ್ರಮುಖರಾದ ವೈಜಿನಾಥ ಉಪ್ಪಿನ್, ಜಗನಾಥ ಕರಂಜೆ, ಸಂಜುಕುಮಾರ ಪಾಟೀಲ, ವೀರಶೆಟ್ಟಿ ಸೇರಿದಂತೆ ಆಗಮಿಸಲಿದ್ದಾರೆ.

ಕಾರ್ಯಕ್ರಮದಲ್ಲಿ ಜೈ ಗಜಾನನ ಸಹಕಾರಿ ಬ್ಯಾಂಕಿನ ಸಿಇಓ ಸಂಜೀವಕುಮಾರ ಕಣ-ಕೇರಿ, ವ್ಯವಸ್ಥಾಪಕ ವಿಜಯ್ ಬಿರಾದಾರ ಉಪಸ್ಥಿತರಿರಲಿದ್ದಾರೆ. ನಮ್ಮ ಅಧ್ಯಕ್ಷತೆಯಲ್ಲಿ ಕರ್ಯಕ್ರಮ ಜರುಗಲಿದೆ ಎಂದು ವಿಜಯಕುಮಾರ ಶಿಂಧೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನಗರದಲ್ಲಿ ಜನೇವರಿ 17ರಿಂದ 21ರವರೆಗೆ ಕಲ್ಯಾಣ ಕರ್ನಾಟಕ ವಿಭಾಗದ ದ್ವಿತೀಯ ಜಾಂಬೋರೇಟ್ ಅವಶ್ಯಕ ಸಹಕಾರ ನೀಡುವಂತೆ ಅಧಿಕಾರಿಗಳಿಗೆ ಸೂಚನೆ



ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ:ಜ:10-ಇದೇ ಜನವರಿ 17 ರಿಂದ 21 ರವರೆಗೆ ನಗರದಲ್ಲಿ ನಡೆಯಲಿರುವ ಕಲ್ಯಾಣ ಕರ್ನಾಟಕ ವಿಭಾಗದ ದ್ವಿತೀಯ ಸ್ಕೌಟ್ಸ್ ಮತ್ತು ಗೈಡ್ಸ್ ಜಾಂಬೋರೇಟ್ ಗೆ ಅಧಿಕಾರಿಗಳು ಎಲ್ಲ ರೀತಿಯಿಂದ ಸಹಕಾರ ನೀಡುವಂತೆ ಜಿಲ್ಲಾಧಿಕಾರಿ ಡಾ. ಸುಶೀಲಾ. ಬಿ. ಅವರು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿಂದು "ಕಲ್ಯಾಣ ಕರ್ನಾಟಕ ವಿಭಾಗದ ದ್ವಿತೀಯ ಸ್ಕೌಟ್ಸ್ ಮತ್ತು ಗೈಡ್ಸ್ ಜಾಂಬೋರೇಟ್" ಸಿದ್ಧತೆಗಳ ಕುರಿತು ಪರಿಶೀಲನಾ ಸಭೆ ನಡೆಸಿದ ಅವರು, ಜನವರಿ 17 ರಿಂದ 21 ರವರೆಗೆ ಐದು ದಿನಗಳ ಕಾಲ ನಡೆಯುವ ಈ ಜಾಂಬೋರೇಟ್ ದಲ್ಲಿ ಸುಮಾರು 3000 ದಿಂದ 4000 ಮಕ್ಕಳು ಭಾಗವಹಿಸಲಿದ್ದು, ಜಿಲ್ಲಾ ಕ್ರೀಡಾಂಗಣವನ್ನು ಸರ್ವ ರೀತಿಯಿಂದ ಸಿದ್ಧಗೊಳಿಸಲು ಸಂಬಂಧಿಸಿದ ಅಧಿಕಾರಿಗಳು ಸ್ಕೌಟ್ಸ್ ಮತ್ತು ಗೈಡ್ಸ್ ತಂಡಕ್ಕೆ ಸಹಕಾರ ನೀಡುವಂತೆ ಸೂಚನೆ ನೀಡಿದರು.

ಜನವರಿ 16ರಂದು ಸಂಜೆ ಮಕ್ಕಳು ನಗರಕ್ಕೆ ಆಗಮಿಸಲು ಆರಂಭವಾಗುವ ಹಿನ್ನೆಲೆಯಲ್ಲಿ ಜನವರಿ 19 ರವರೆಗೆ ನಗರದ ಡಾನ್ ಬಾಸ್ಕೋ ಶಾಲೆಯಲ್ಲಿ ವಾಸ್ತವ್ಯಕ್ಕೆ ಅನುಕೂಲ ಮಾಡಿಕೊಡಬೇಕು. ನಂತರ ಪರೀಕ್ಷೆ ಇರುವ ಹಿನ್ನೆಲೆಯಲ್ಲಿ ಇತರೆ ದಿನಗಳಂದು ಬೇರೆಡೆಗೆ ವಾಸ್ತವ್ಯಕ್ಕೆ ವ್ಯವಸ್ಥೆ ಮಾಡಿಕೊಳ್ಳುವಂತೆ ತಿಳಿಸಿದ ಅವರು ವಿದ್ಯಾರ್ಥಿಗಳ ಅನುಕೂಲಕ್ಕಾಗಿ ವಾಸ್ತವ್ಯ ಸ್ಥಳಗಳ ಸ್ವಚ್ಛತೆ, ಕುಡಿಯುವ ನೀರು, ಶೌಚಾಲಯಗಳ ವ್ಯವಸ್ಥೆ ಸಮರ್ಪಕವಾಗಿ ಇರುವಂತೆ ನೋಡಿಕೊಳ್ಳಲು ಸೂಚಿಸಿದರು.

ಅದರಂತೆ ನಗರದ ಜಿಲ್ಲಾ ಕ್ರೀಡಾಂಗಣವನ್ನು ಸರ್ವ ರೀತಿಯಿಂದ ಸಿದ್ಧಗೊಳಿಸಬೇಕು. ಇನ್ನೊಂದು ಮೈದಾನವನ್ನು ಸಹ ಸಿದ್ಧಗೊಳಿಸುವಂತೆ ತಿಳಿಸಿದ ಅವರು ಸ್ವಚ್ಛತೆ, ನಿರಂತರ ವಿದ್ಯುತ್ ಸೌಲಭ್ಯ, ಸ್ವಿಮ್ಮಿಂಗ್ ಪೂಲ್ ನಲ್ಲಿ ಸ್ವಚ್ಛ ನೀರಿನ ವ್ಯವಸ್ಥೆ, ಶೌಚಾಲಗಳ ವ್ಯವಸ್ಥೆ ಇನ್ನಿತರ ವ್ಯವಸ್ಥೆಯ ಬಗ್ಗೆ ಅಧಿಕಾರಿಗಳು ಸಮನ್ವಯ ಸಾಧಿಸಿ ನೆರವಾಗುವಂತೆ ಸೂಚಿಸಿದರು.


ಶುದ್ಧ ಕುಡಿಯುವ ನೀರು ದೊರೆಯುವಂತೆ ನೋಡಿಕೊಳ್ಳಬೇಕು. ಜನವರಿ 17 ರಂದು ಬೆಳಿಗ್ಗೆ ಮೈಲಾಪುರ-ಅಗಸಿಯಿಂದ, ಜಾಂಬೋರೇಟ್ ರ್ಯಾಲಿಯ ಉದ್ಘಾಟನೆ ನಡೆಯಲಿದ್ದು, ಟ್ರಾಫಿಕ್ ಪೊಲೀಸ್, ನಗರಸಭೆ , ಪೋಲಿಸ್ ಇಲಾಖೆಯಿಂದ ಅವಶ್ಯಕ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಬೇಕು.

ಜಾಂಬೋರೇಟ್‌ಗ, ಆಗಮಿಸುವ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಶಾಲಾ ಬಸ್ ಗಳ ವ್ಯವಸ್ಥೆ, ಆರೋಗ್ಯ ಸಂಬಂಧಿತ ಕ್ರಮಗಳನ್ನು ಅಚ್ಚುಕಟ್ಟಾಗಿ ಮಾಡುವಂತೆ ಸೂಚನೆ ನೀಡಿದ ಅವರು ಐದು ದಿನಗಳ ಕಾಲ 24/7 ನಿರಂತರ ವಿದ್ಯುತ್ ಸೌಲಭ್ಯ ಕಲ್ಪಿಸಲು ವಿದ್ಯುತ್ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

ಈ ಐದು ದಿನಗಳ ಕಾಲ ಮಕ್ಕಳ ಉತ್ಸುಕತೆ ಹೆಚ್ಚಾಗಿರುವುದರಿಂದ ಜಿಲ್ಲಾ ಕ್ರೀಡಾಂಗಣದಲ್ಲಿ,ಹೊರಗೆ, ಡಾನ್ ಬಾಸ್ಕೋ ಶಾಲೆ ವ್ಯಾಪ್ತಿಯಲ್ಲಿ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕು. ಅಗ್ನಿಶಾಮಕ ಇಲಾಖೆ , ಆರೋಗ್ಯ ಅಂಬ್ಯುಲೆನ್ಸ್ ನುರಿತ ವೈದ್ಯರೊಂದಿಗೆ ಇರುವಂತೆ ನೋಡಿಕೊಳ್ಳಲು ಸೂಚಿಸಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಶರಣಬಸಪ್ಪ ಕೋಟೆಪ್ಪಗೋಳ, ಹೆಚ್ಚುವರಿ ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಧರಣೇಶ್, ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಅಧ್ಯಕ್ಷ ಸುರೇಶ್ ಸಜ್ಜನ್, ಕಲ್ಯಾಣ ಕರ್ನಾಟಕ ಉಸ್ತುವಾರಿ ಮಲ್ಲೇಶ್ವರಿ ಜೂಜಾರೆ, ಜಿಲ್ಲಾ ಕಾರ್ಯದರ್ಶಿ ರಾಘವೇಂದ್ರ ಅಳ್ಳಳ್ಳಿ, ಅನಿಲ್ ಕುಮಾರ್ ಉಪಸ್ಥಿತರಿದ್ದರು.

# ಗ್ರಾಂ.ಪಂ.ಉಪಾಧ್ಯಕ್ಷ ಚುನಾವಣೆ: ಖಂಡೆರಾವ ಕುಲಕರ್ಣಿ ಅವಿರೋಧ ಆಯ್ಕೆ.



**ಮಲ್ಲಮ್ಮ ನುಡಿ ವಾರ್ತೆ**

ಬಸವಕಲ್ಯಾಣ :–ತಾಲೂಕಿನ ಪ್ರತಾಪೂರ ಗ್ರಾಮದಲ್ಲಿ ಗ್ರಾ.ಪಂ. ಉಪಾಧ್ಯಕ್ಷ ಸ್ಥಾನಕ್ಕೆ ಚುನಾವಣೆ ಜರುಗಿತು. ಸಾಮಾನ್ಯ ವರ್ಗಕ್ಕೆ ಮಿಸಲಾಗಿದ್ದ ಉಪಾಧ್ಯಕ್ಷ ಸ್ಥಾನಕ್ಕೆ ಈ ಹಿಂದಿನ ಉಪಾಧ್ಯಕ್ಷ ಸಂತೋಷ ಬಿರಾದಾರ ರವರು ರಾಜಿನಾಮೆ ಸಲ್ಲಿಸಿದ್ದರಿಂದ ತೆರವಾಗಿದ್ದ ಉಪಾಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಸಲಾಯಿತು.

21 ಸದಸ್ಯರನ್ನು ಒಳಗೊಂಡ ಇಲ್ಲಿನ ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ಸ್ಥಾನಕ್ಕೆ ಖಂಡೆರಾವ ಕುಲಕರ್ಣಿ ಅವಿರೋಧವಾಗಿ ಆಯ್ಕೆಯಾದರು. ಚುನಾವಣೆಯಲ್ಲಿ ಗ್ರಾ.ಪಂ.ಅಧ್ಯಕ್ಷರು ಸೇರಿದಂತೆ 21 ಸದಸ್ಯರಲ್ಲಿ 15 ಸದಸ್ಯರು ಹಾಜರಿದ್ದರು. ಚುನಾವಣೆ ಪ್ರಕ್ರಿಯೆ ಪ್ರಾರಂಭವಾಗುತ್ತಿದ್ದಂತೆ ಸದಸ್ಯ ಖಂಡೆರಾವ ಕುಲಕರ್ಣಿ ಉಪಾಧ್ಯಕ್ಷ ಸ್ಥಾನಕ್ಕೆ ಆಯ್ಕೆ ನಾಮಪತ್ರ ಸಲ್ಲಿಸಿದರು. ಕುಲಕರ್ಣಿ ಹೊರತುಪಡಿಸಿ ಬೇರೆ ಯಾರು ನಾಮಪತ್ರ ಸಲ್ಲಿಸದ ಕಾರಣ ಚುನಾವಣಾಧಿಕಾರಿಯಾಗಿ ಆಗಮಿಸಿದ್ದ ತಾ.ಪಂ.ಇಒ ರಮೇಶ್ ಸುಲ್ಫಿ ಅವರು ಖಂಡೆರಾವ ಕುಲಕರ್ಣಿ ರವರು ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆಂದು ಘೋಷಣೆ ಮಾಡಿದರು.

ಈ ವೇಳೆ ಗ್ರಾ.ಪಂ.ಅಧ್ಯಕ್ಷೆ ಶೋಭಾ ಮೇತ್ರೆ, ಗ್ರಾಮ

### ಸಿಂಧನೂರ, ರಾಯಚೂರು ತಾಲೂಕಿನಲ್ಲಿ ಲಿಂಗತ್ವ

# ಅಲ್ಪಸಂಖ್ಯಾತರಿಗೆ ಭೂಮಿ ಗುರುತಿಸಿ ನಿವೇಶನ ಒದಗಿಸಲು ಸೂಚನೆ

ಮಲ್ಲಮ್ಮ ನುಡಿ ವಾರ್ತೆ

ರಾಯಚೂರುಜ.11–ರಾಯಚೂರು ಜಿಲ್ಲೆಯಲ್ಲಿ ರಾಯಚೂರು ಮತ್ತು ಸಿಂಧನೂರ ತಾಲೂಕುಗಳಲ್ಲಿನ ಅರ್ಹ ಲಿಂಗತ್ವ ಅಲ್ಪಸಂಖ್ಯಾತರಿಗೆ ಭೂಮಿಯನ್ನು ಗುರುತಿಸಿ ಅವರಿಗೆ ನಿವೇಶನ ಮಂಜೂರಿ ಮಾಡಲು ಸೂಕ್ತ ಕ್ರಮ ವಹಿಸಬೇಕು ಎಂದು ಜಿಲ್ಲಾಧಿಕಾರಿಗಳಾದ ನಿತೀಶ್ ಕೆ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜನವರಿ 9ರಂದು ನಡೆದ ಜಿಲ್ಲಾಮಟ್ಟದ ಲಿಂಗತ್ವ ಅಲ್ಪಸಂಖ್ಯಾತರ ಮನೆಗಳ ನಿರ್ಮಾಣ ನಿವೇಶನ ಮಂಜೂರು ಮಾಡಲು ಕಾಯ್ದಿರಿಸುವ ಬಗ್ಗೆ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ರಾಯಚೂರು ಜಿಲ್ಲೆಯ ಎಲ್ಲ ತಾಲೂಕಿನಲ್ಲಿ ಸಮೀಕ್ಷೆ ನಡೆಸಿ ಅರ್ಹ ಲಿಂಗತ್ವ ಅಲ್ಪಸಂಖ್ಯಾತರ ಪಟ್ಟಿಯನ್ನು ತಯಾರಿಸಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿನ ಸಮಿತಿಯಲ್ಲಿ ಮಂಡಿಸಿ ಅನುಮೋದನೆ ಪಡೆದು ಆಯ್ಕೆ ಸಮಿತಿಯ ಆಯ್ಕೆಪಟ್ಟಿಗೆ ಅನುಗುಣವಾಗಿ ಬೇಕಾಗಬಹುದಾದ ಜಮೀನಿನ ವಿಸ್ತೀರ್ಣದನ್ವಯ ಸರ್ಕಾರಿ ಜಮೀನನ್ನು ಗುರುತಿಸುವ ಕಾರ್ಯವು ಈಗಾಗಲೇ ಲಿಂಗಸೂರ, ದೇವದುರ್ಗ ಮತ್ತು ಮಾನವಿ ತಾಲೂಕುಗಳಲ್ಲಿ ಪೂರ್ಣವಾಗಿದೆ. ಜಮೀನು ಗುರುತಿಸುವ ಪ್ರಕ್ರಿಯೆಯನ್ನು ಬಾಕಿ ಇರಿಸಿಕೊಂಡ ರಾಯಚೂರು ತಾಲೂಕು ಮತ್ತು ಸಿಂಧನೂರು ತಾಲೂಕಿನ ಅಧಿಕಾರಿಗಳು ಈ ಬಗ್ಗೆ ಕೂಡಲೇ ಗಮನ ಹರಿಸಬೇಕು ಎಂದು ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು.

ಜಮೀನು ಗುರುತಿಸುವ ಪ್ರಕ್ರಿಯೆಯನ್ನು ಈಗಾಗಲೇ ಪೂರ್ಣಗೊಳಿಸಿದ ಲಿಂಗಸೂರ, ದೇವದುರ್ಗ ಮತ್ತು ಮಾನವಿ ತಾಲೂಕುಗಳಲ್ಲಿ ಲಿಂಗತ್ವ ಅಲ್ಪಸಂಖ್ಯಾತರಿಗೆ ನಿವೇಶನ ಹಂಚಿಕೆ ಪ್ರಕ್ರಿಯೆಯನ್ನು ತ್ವರಿತಗತಿಯಲ್ಲಿ ನಡೆಸಲು ಕ್ರಮ ವಹಿಸಬೇಕು ಎಂದು ಇದೆ ವೇಳೆ ಜಿಲ್ಲಾಧಿಕಾರಿಗಳು ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಗೃಹಲಕ್ಷ್ಮೀ ಯೋಜನೆಯಡಿ, ಅರ್ಹ ಲಿಂಗತ್ವ ಅಲ್ಪಸಂಖ್ಯಾತರಿಗೆ ಮಾಸಿಕ 2000 ರೂ.ಗಳು ಸಮರ್ಪಕವಾಗಿ ಸಿಗುವಂತೆ ನೋಡಿಕೊಳ್ಳಬೇಕು ಎಂದು ಇದೆ ವೇಳೆ ಜಿಲ್ಲಾಧಿಕಾರಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರಿಗೆ ಸೂಚನೆ ನೀಡಿದರು.

ಲಿಂಗತ್ವ ಅಲ್ಪಸಂಖ್ಯಾತರ ಮನವಿಯಂತೆ, ಅರ್ಹ ಲಿಂಗತ್ವ ಅಲ್ಪಸಂಖ್ಯಾತರನ್ನು ಒಗ್ಗೂಡಿಸಿ ಅವರಿಗೆ ಸ್ವಯಂ ಉದ್ಯೋಗ ಕೌಶಲ ತರಬೇತಿಗೆ ಏರ್ಪಾಡು, ಉದ್ಯೋಗ ಮಾಡಲು ಬೇಕಾದ ಮೂಲಭೂತ ಸೌಕರ್ಯದ ಜೊತೆಗೆ ಸಿದ್ದಪಡಿಸಿದ ವಸ್ತುಗಳಿಗೆ ಉತ್ತಮ ಬೆಲೆ ಸಿಗುವಂತೆ ಪೂರಕವಾದ ಮಾರುಕಟ್ಟೆ ವ್ಯವಸ್ಥೆಗೆ ಇಲಾಖೆಗಳಿಂದ ಅಗತ್ಯ ಕ್ರಮ ವಹಿಸಲಾಗುವುದು ಎಂದು ಇದೆ ವೇಳೆ ಜಿಲ್ಲಾಧಿಕಾರಿಗಳು ತಿಳಿಸಿದರು.

ರಾಯಚೂರು ಜಿಲ್ಲೆಯಲ್ಲಿನ ಲಿಂಗತ್ವ ಅಲ್ಪಸಂಖ್ಯಾತರು ಬೀದಿ ಬದಿಯಲ್ಲಿ, ಬಸ್ ನಿಲ್ದಾಣಗಳಲ್ಲಿ, ದೇವಸ್ಥಾನಗಳಲ್ಲಿ ಸಾರ್ವಜನಿಕರು ಓಡಾಡುವ ಸ್ಥಳಗಳಲ್ಲಿ ವಾಸಿಸುತ್ತಿದ್ದು, ಕೂಡಲೇ ಇವರನ್ನು ನಿಗದಿಪಡಿಸಿದ ಸ್ಥಳಕ್ಕೆ ಸ್ಥಳಾಂತರಗೊಳಿಸಲು ಅನುಮತಿ ನೀಡಬೇಕು. ಜೊತೆಗೆ ವಾಸ ಮಾಡಲು ಬೇಕಾದ ಮೂಲಭೂತ ಸೌಕರ್ಯವನ್ನು ಕೂಡಲೇ ಕಲ್ಪಿಸಬೇಕು. ರಾಯಚೂರು ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಲಿಂಗತ್ವ ಅಲ್ಪಸಂಖ್ಯಾತರಿಗೆ ನಿವೇಶನಕ್ಕಾಗಿ ವಾಸ ಯೋಗ್ಯವಾದ ಜಮೀನು ಗುರುತಿಸಬೇಕು ಎಂದು ನಾಲ್ಕಾರು ವರ್ಷಗಳಿಂದ ಒತ್ತಾಯಿಸುತ್ತಿದ್ದೇವೆ. ಮಾನವಿ, ದೇವದುರ್ಗ ಮತ್ತು ಲಿಂಗಸೂರ ತಾಲೂಕುಗಳಲ್ಲಿ ಈಗಾಗಲೇ ಜಮೀನು ಗುರುತಿಸಿದಂತೆ ಸಿಂಧನೂರ ಮತ್ತು ರಾಯಚೂರು ತಾಲೂಕುಗಳಲ್ಲಿ ಸಹ ಬೇಗನೇ ವಾಸಯೋಗ್ಯ ಜಮೀನು ಗುರುತಿಸಬೇಕು ಎಂದು ಇದೆ ವೇಳೆ ಸಭೆಯಲ್ಲಿದ್ದ ಲಿಂಗತ್ವ ಅಲ್ಪಸಂಖ್ಯಾತರು ಮನವಿ ಮಾಡಿದರು.

ತಾತ್ಕಾಲಿಕ ವಾಸಕ್ಕೆ ಅವಕಾಶ ನೀಡಲು ಮನವಿ: ದೇವದುರ್ಗ, ಲಿಂಗಸೂರ ಮತ್ತು ಮಾನವಿ ತಾಲೂಕುಗಳಲ್ಲಿ ಈಗಾಗಲೇ ಲಿಂಗತ್ವ ಅಲ್ಪಸಂಖ್ಯಾತರಿಗಾಗಿ ಸರ್ಕಾರಿ ಜಮೀನಿನ ಗಡಿ ಗುರುತಿಸಿದ್ದು ಪಂಚನಾಮ ಮಾಡಿ ಭೂಮಿಗೆ ಸಂಬಂಧಿಸಿದ ದಾಖಲಾತಿಗಳನ್ನು ಆಯಾ ತಹಸೀಲ್ದಾರರು ಜಿಲ್ಲಾಧಿಕಾರಿಗಳ ಕಚೇರಿಗೆ ಸಲ್ಲಿಸಿದ್ದಾರೆ. ಇದನ್ನು ಪರಿಗಣಿಸಿ ತುರ್ತಾಗಿ ನಿಗದಿಪಡಿಸಿದ ಸ್ಥಳಕ್ಕೆ ಸ್ಥಳಾಂತರ ಮಾಡಲು ಅನುಮತಿ ನೀಡಿ ತಾತ್ಕಾಲಿಕ ವಾಸಕ್ಕೆ ನಮಗೆ ಅವಕಾಶ ನೀಡಬೇಕು ಎಂದು ಇದೆ ವೇಳೆ ದೇವದುರ್ಗ, ಮಾನವಿ ಮತ್ತು ಲಿಂಗಸೂರ ತಾಲೂಕಿನ ಲಿಂಗತ್ವ ಅಲ್ಪಸಂಖ್ಯಾತರು ಜಿಲ್ಲಾಧಿಕಾರಿಗಳಲ್ಲಿ ಮನವಿ ಮಾಡಿದರು.

ಜಿಲ್ಲಾಧಿಕಾರಿಗಳಲ್ಲಿ ಮನವಿ: ರಾಯಚೂರು ಜಿಲ್ಲೆಯ ವಿವಿಧ ತಾಲೂಕೂಗಳಲ್ಲಿ ವಾಸಿಸುತ್ತಿರುವ ವಿಶೇಷ ವರ್ಗಕ್ಕೆ ಸೇರಿದ ಅನೇಕ ಅಸಂಘಟಿತ ಸಮುದಾಯಗಳಾದ ಲಿಂಗತ್ವ ಅಲ್ಪಸಂಖ್ಯಾತರು, ವಿಕಲಚೇತನರು, ರಾತ್ರಿ ವೇಳೆ ಜಗುಲಿಯಲ್ಲಿ ಮಲಗುವ ನಿರ್ಗತಿಕರು, ವಿಧವೆಯರು, ದೇವದಾಸಿಯರು, ದೌರ್ಜನ್ಯಕ್ಕೆ ಒಳಗಾದವರು, ವಿಶೇಷ ವೃತ್ತಿಪರ ಗುಂಪುಗಳು ಹಾಗೂ ಹೆಚ್‌ಐವಿ ಸೋಂಕಿತರು ಈ ವಿಶೇಷ ವೃತಿಪರ ಕುಟುಂಬಗಳಿಗೆ ವಿಶೇಷ ವರ್ಗದಡಿಯಲ್ಲಿ ನಿವೇಶನ ಹಂಚಿಕೆ ಮಾಡಿ ಪುನರ್ವಸತಿ ಕಲ್ಪಿಸಲು ಅರ್ಹ ನಿವೇಶನ ರಹಿತ ಹಾಗೂ ವಸತಿ ಹೀನ ಕುಟುಂಬಗಳಿಗೆ ನಿವೇಶನ ಹಂಚಿಕೆ ಮಾಡಲು ಸರ್ಕಾರವು ಸರ್ಕಾರಿ ಜಮೀನು ಗುರುತಿಸಲು ಪ್ರಥಮ ಆದ್ಯತೆ ನೀಡಿದ್ದು, ಸ್ಥಳೀಯವಾಗಿ ಲಭ್ಯವಿರುವ ಸರ್ಕಾರಿ ಜಮೀನನ್ನು ಮಂಜೂರಿ ಮಾಡಿ ನಿವೇಶನಕ್ಕೆ ಬಳಸಿಕೊಳ್ಳಬಹುದಾಗಿದೆ. ಸರ್ಕಾರಿ ಜಮೀನು ಲಭ್ಯವಿಲ್ಲದಿದ್ದಲ್ಲಿ ಜಿಲ್ಲಾ ಜಮೀನು ಖರೀದಿ ಸಮಿತಿಯ ಮೂಲಕ ವಸತಿಗೆ ಸೂಕ್ತ ಖಾಸಗಿ ಜಮೀನು ಖರೀದಿಸಲು ಅವಕಾಶವಿದೆ ಎಂದು ರಾಜ್ಯ ಸರ್ಕಾರವು ಆದೇಶಿಸಿದ್ದು ಅದರಂತೆ ಈ ವಿಶೇಷ ವರ್ಗದ ಗುಂಪುಗಳಿಗೆ ತುರ್ತಾಗಿ ಭೂಮಿ ಮಂಜೂರಿ ಮಾಡಿ ಪುನರ್ವಸತಿ ಕಲ್ಪಿಸಿಕೊಡಬೇಕು ಮತ್ತು ಮೂಲಭೂತ ಸೌಕರ್ಯಗಳನ್ನು ನೀಡಲು ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕು ಎಂದು ಇದೆ ವೇಳೆ ಲಿಂಗತ್ವ ಅಲ್ಪಸಂಖ್ಯಾತರ ಸಂಘಟನೆಯ ಮುಖಂಡರು ಸಭೆಯಲ್ಲಿ ಜಿಲ್ಲಾಧಿಕಾರಿಗಳಲ್ಲಿ ಮನವಿ ಮಾಡಿದರು.

ಮಾನವಿ ನಿವಾಸಿಗಳ ಮನವಿ: ಮಾನವಿ ತಾಲೂಕಿನ ವಾರ್ಡ ನಂಬರ್ 9 ಅಂಬೇಡ್ಕರ ನಗರ ಘೋಷಿತ ಕೊಳಚೆ ಪ್ರದೇಶದಲ್ಲಿ 237 ಕುಟುಂಬಗಳಿದ್ದು, ಇಲ್ಲಿನ ನಿವಾಸಿಗಳಿಗೆ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯಿಂದ 163 ಕುಟುಂಬಗಳಿಗೆ ಹಕ್ಕು ಪತ್ರ ವಿತರಣೆಯಾಗಿದ್ದು, ಇನ್ನುಳಿದ ಕುಟುಂಬಗಳಿಗೆ 2 ಎಕರೆ ಭೂಮಿಯನ್ನು ಮಾನವಿ ತಾಲೂಕಿನ ಸೀಕಲ್ ಸೀಮಾದ ಸರ್ವೆ ನಂ.12ರಲ್ಲಿ ಭೂಮಿ ಗುರುತಿಸಿದ್ದು ಗುರುತಿಸಿದ ಭೂಮಿಯಲ್ಲಿ ಸ್ಥಳಾಂತರಕ್ಕೆ ಅನುಮತಿ ನೀಡಿ ಮೂಲಭೂತ ಸೌಕರ್ಯ ಕಲ್ಪಿಸಬೇಕು ಎಂದು ಅಲ್ಲಿನ ನಿವಾಸಿಗಳು ಜಿಲ್ಲಾಧಿಕಾರಿಗಳಲ್ಲಿ ಇದೆ ವೇಳೆ ಮನವಿ ಮಾಡಿದರು.

ಸಭೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರು, ವಿವಿಧ ತಾಲೂಕಗಳ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಮತ್ತು ಇನ್ನಿತರ ಇಲಾಖೆಯ ಅಧಿಕಾರಿಗಳು ಮತ್ತು ವಿವಿಧ ತಾಲೂಕಿನ ಲಿಂಗತ್ವ ಅಲ್ಪಸಂಖ್ಯಾತರು ಇದ್ದರು.

ಜಾಹೀರಾತಿಗಾಗಿ ಇಂದೇ
ಸಂಪರ್ಕಿಸಿ:9964206170

## ನಮ್ಮ ತೆರಿಗೆ ನಮ್ಮ ಹಕ್ಕಿಗಾಗಿ ಹೋರಾಟ ಮಾಡಲೇ ಬೇಕು: ಡಿಸಿಎಂ ಡಿ.ಕೆ ಶಿವಕುಮಾರ್



**ಮಲ್ಲಮ್ಮ ನುಡಿ ವಾರ್ತೆ**

ಬೆಂಗಳೂರು: "ಕೇಂದ್ರದ ಬಳಿ ನಮ್ಮ ತೆರಿಗೆ ನಮ್ಮ ಹಕ್ಕಿಗಾಗಿ ನಾವು ಹೋರಾಟ ಮಾಡಲೇ ಬೇಕು. ನಮ್ಮ ರಾಜ್ಯದ ಹಿತವನ್ನು ಕಾಪಾಡಲೇಬೇಕು" ಎಂದು ಡಿಸಿಎಂ ಡಿ. ಕೆ. ಶಿವಕುಮಾರ್ ಹೇಳಿದರು.

ಸದಾಶಿವನಗರ ನಿವಾಸದ ಬಳಿ ಮಾಧ್ಯಮಗಳ ಪ್ರಶ್ನೆಗಳಿಗೆ ಶಿವಕುಮಾರ್ ಅವರು ಶನಿವಾರ ಪ್ರತಿಕ್ರಿಯೆ ನೀಡಿದರು.

ನಮ್ಮ ತೆರಿಗೆ ನಮ್ಮ ಹಕ್ಕು ಹೋರಾಟ ಮುಂದುವರೆಯಲಿದೆಯೇ ಎನ್ನುವ ಪ್ರಶ್ನೆಗೆ ಉತ್ತರಿಸಿದ ಅವರು, "ಬಿಜೆಪಿಯ ಇಷ್ಟೊಂದು ಜನ ಸಂಸದರು ಏಕೆ ಮೌನವಾಗಿ ಇದ್ದಾರೆ ಎಂಬುದು ನನಗೆ ಅರ್ಥವಾಗುತ್ತಿಲ್ಲ" ಎಂದು ವಿಷಾದ ವ್ಯಕ್ತಪಡಿಸಿದರು.

"ನೀರಾವರಿ ಮತ್ತು ನಗರಾಭಿವೃದ್ಧಿಗೆ ನೀಡುವ ಅನುದಾನದ ವಿಚಾರದಲ್ಲಿ ಕೇಂದ್ರ ಸರ್ಕಾರ ಕೊಟ್ಟ ಮಾತನ್ನು ಉಳಿಸಿಕೊಂಡಿಲ್ಲ. ರಾಜ್ಯದ ಪಾಲಿನ ತೆರಿಗೆ ಅನ್ಯಾಯವನ್ನು ಕಾನೂನಾತ್ಮಕವಾಗಿ ಹೇಗೆ ಎದುರಿಸಬೇಕು ಎಂಬುದನ್ನು ನಮ್ಮ ಮುಖ್ಯಮಂತ್ರಿಗಳು ಅಧ್ಯಯನ ಮಾಡುತ್ತಿದ್ದಾರೆ. ರಾಜ್ಯ ಬಜೆಟ್ ಮಂಡನೆ ವೇಳೆಗೆ ಈ ಅಸಮಾನ ಹಂಚಿಕೆಗೆ ನಾವು ಉತ್ತರ ಕೊಡುತ್ತೇವೆ" ಎಂದು ಹೇಳಿದರು.

ಜ.10 ರಂದು ಕೇಂದ್ರ ಸರ್ಕಾರ ರಾಜ್ಯಗಳಿಗೆ ಒಟ್ಟು 1 ಲಕ್ಷ 70 ಸಾವಿರ ಕೋಟಿ ರೂಪಾಯಿ ಜಿಎಸ್ ಟಿ ಪರಿಹಾರ ಹಣವನ್ನು ಬಿಡುಗಡೆ ಮಾಡಿದ್ದನ್ನು ಇಲ್ಲಿ ಗಮನಿಸಬಹುದಾಗಿದೆ. ಉತ್ತರ ಪ್ರದೇಶಕ್ಕೆ ಅತಿ ಹೆಚ್ಚು ಹಣ ಲಭ್ಯವಾಗಿದ್ದರೆ ಕರ್ನಾಟಕಕ್ಕೆ 6 ಸಾವಿರ ಕೋಟಿ ರೂಪಾಯಿ ಬಿಡುಗಡೆ ಮಾಡಲಾಗಿದೆ.

## ದೆಹಲಿಗೆ ಕೇಜ್ರಿವಾಲ್ 'ಆಪ್' ನಾಯಕನಲ್ಲ, ಆಪತ್ತಿನ ನಾಯಕ – ಅಮಿತ್ ಶಾ ಟೀಕೆ



ಮಲ್ಲಮ್ಮ ನುಡಿ ವಾರ್ತೆ

ನವದೆಹಲಿ: ದೆಹಲಿಯ ಮಾಜಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರು ಅವರ ಕೇವಲ ಆಮ್ ಆದ್ಮಿ ಪಾರ್ಟಿಯ (ಆಪ್) ನಾಯಕನಲ್ಲ, ಅವರು ದೆಹಲಿ ಪಾಲಿಗೆ ಆಪತ್ತು ಕೂಡ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಆರೋಪಿಸಿದ್ದಾರೆ. ಶನಿವಾರದಂದು, ದೆಹಲಿಯ ಜೆಎಲ್ಎನ್ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದ್ದ ಜುಗ್ಗಿ ಬಸ್ತಿ ಪ್ರಧಾನ್ ಸಮ್ಮೇಳನ್ ನಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಇದೇ ತಿಂಗಳ ಅಂತ್ಯದ ಹೊತ್ತಿಗೆ ದೆಹಲಿ ವಿಧಾನಸಭಾ ಚುನಾವಣೆಗಳು ನಡೆಯುವುದರಿಂದ ಬಿಜೆಪಿಯು ಅಲ್ಲಿ ಭರ್ಜರಿ ಪ್ರಚಾರದಲ್ಲಿ ತೊಡಗಿಸಿಕೊಂಡಿದೆ. ಆಡಳಿತಾರೂಢ ಆಮ್ ಆದ್ಮಿ ಪಾರ್ಟಿ (ಆಪ್) ಸರ್ಕಾರವನ್ನು ಕಟುವಾಗಿ ಟೀಕಿಸಲಾರಂಭಿಸಿದೆ. ಇದೇ ಕಾರಣಕ್ಕಾಗಿ, ದೆಹಲಿಯ ಚುನಾವಣೆಯಲ್ಲಿ ನಿರ್ಣಾಯಕ ಪಾತ್ರ ವಹಿಸಲಿರುವ ದೆಹಲಿಯ ಕೊಳೆಗೇರಿ ನಿವಾಸಿಗಳಿಗಾಗಿಯೇ ಪ್ರತ್ಯೇಕ ರ್‍ಯಾಲಿಯನ್ನು ಶನಿವಾರ ಆಯೋಜಿಸಲಾಗಿತ್ತು. ಅದರಲ್ಲಿ ಕೇಂದ್ರ ಗೃಹ ಸಚಿವರು ಮಾತನಾಡಿದರು.

## ಅರ್ಥಪೂರ್ಣವಾಗಿ ಮಹಾಯೋಗಿ ವೇಮನರ ಜಯಂತಿ ಆಚರಣೆಗೆ ನಿರ್ಧಾರ

**ಮಲ್ಲಮ್ಮ ನುಡಿ ವಾರ್ತೆ**

ಯಾದಗಿರಿ:ಜ,11–ಮಹಾಯೋಗಿ ವೇಮನರ ಜಯಂತಿಯನ್ನು ಇದೇ ಜನವರಿ 19 ರಂದು ಜಿಲ್ಲಾಡಳಿತದವತಿಯಿಂದ ಅರ್ಥಪೂರ್ಣವಾಗಿ ಆಚರಿಸಲು ನಿರ್ಧರಿಸಲಾಗಿದೆ.

ಚುನಾವಣಾ ತಹಸೀಲದಾರ್ ಶ್ರೀಮತಿ ಸಂತೋಷಿರಾಣಿ ಅವರ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಇಂದು ನಡೆದ ಮಹಾಯೋಗಿ ವೇಮನರ ಜಯಂತಿ ಆಚರಣೆ ಕುರಿತ ಪೂರ್ವಭಾವಿ ಸಿದ್ಧತಾ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಗಿದೆ.

ಸಭೆಯ ಅಧ್ಯಕ್ಷತೆ ವಹಿಸಿದ್ದ ಸಂತೋಷಿರಾಣಿ ಅವರು, ಅಂದು ಬೆಳಿಗ್ಗೆ 11 ಗಂಟೆಗೆ ನಗರದ ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣದಲ್ಲಿ ಈ ಕಾರ್ಯಕ್ರಮ ನಡೆಯಲಿದ್ದು, ಶಿಷ್ಠಾಚಾರದಂತೆ ಅತಿಥಿಗಣ್ಯರನ್ನು ಆಹ್ವಾನಿಸಲು, ವೇದಿಕೆ, ಆಹ್ವಾನ ಪತ್ರಿಕೆ ಸೇರಿದಂತೆ ಇನ್ನಿತರ ಸಿದ್ಧತೆಗಳನ್ನು ಮಾಡಿಕೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ಅದರಂತೆ ಜಿಲ್ಲೆಯ ಎಲ್ಲ ಶಾಲಾ, ಕಾಲೇಜುಗಳಲ್ಲಿ, ಕಚೇರಿಗಳಲ್ಲಿ ಈ ಜಯಂತಿ ಆಚರಿಸಲು ಹಾಗೂ ತಾಲೂಕು ಮಟ್ಟದಲ್ಲಿ, ಈ ಜಯಂತಿಯನ್ನು ಆಚರಣೆಗೆ ಸಕಲ ಕ್ರಮಗಳನ್ನು ಕೈಗೊಳ್ಳಬೇಕು, ಯಾವುದೇ ರೀತಿಯ ಅಹಿತಕರ ಘಟನೆ ನಡೆಯದಂತೆ ಸೂಕ್ತ ಪೊಲೀಸ್ ಬಂದೋಬಸ್ತ ಮಾಡಲು ಹಾಗೂ ನುರಿತ ಉಪನ್ಯಾಸಕರನ್ನು ಜಿಲ್ಲಾಮಟ್ಟದಲ್ಲಿ ಕಾರ್ಯಕ್ರಮಕ್ಕೆ ಆಹ್ವಾನಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸೇರಿದಂತೆ ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಕಾರ್ಯಕ್ರಮ ಅಚ್ಚುಕಟ್ಟಾಗಿ ಆಯೋಜಿಸಬೇಕು, ಜಿಲ್ಲೆಯ ಅಧಿಕಾರಿಗಳು, ಸಿಬ್ಬಂದಿಗಳು, ಆಯಾ ಸಮಾಜದ ಮುಖಂಡರು, ಸಂಘ ಸಂಸ್ಥೆಗಳವರು ತಪ್ಪದೇ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಯಶಸ್ವಿಗೊಳಿಸುವಂತೆ ಅವರು ಸಲಹೆ ನೀಡಿದರು.

ಈ ಸಭೆಯಲ್ಲಿ , ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕಿ ಉತ್ತರದೇವಿ ಮಠಪತಿ, ಶಾಲಾ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪನಿರ್ದೇಶಕ ವೀರನಗೌಡ, ಆರ್. ವಿಶ್ವನಾಥ್ ರೆಡ್ಡಿ ಅಬ್ಬೆ ತುಮಕೂರ, ಮಲ್ಲನಗೌಡ, ಡಾ. ಸಿದ್ದರಾಜರೆಡ್ಡಿ, ಸಮಾಜದ ಮುಖಂಡರು ಸೇರಿದಂತೆ ಇತರರು ಉಪಸ್ಥಿತರಿದ್ದರು.

# ರೆಡ್ಡಿ ಬರ್ತ್ ಡೇ – ಹುಂಡೇಕರ್ ರಮೇಶ್ ಅವರಿಂದ ಅನ್ನದಾಸೋಹ



**ಮಲ್ಲಮ್ಮ ನುಡಿ ವಾರ್ತೆ**

ಬಳ್ಳಾರಿ: ಕರ್ನಾಟಕ ಸರ್ಕಾರದ ಮಾಜಿ ಸಚಿವರು, ಗಂಗಾವತಿ ವಿಧಾನಸಭಾ ಕ್ಷೇತ್ರದ ಶಾಸಕರು ಹಾಗೂ ಜಿಲ್ಲೆಯ ಬಿಜೆಪಿ ಹಿರಿಯ ಧುರೀಣರಾದ ಜಿ.ಜನಾರ್ದನರೆಡ್ಡಿ ಅವರ 58ನೇ ಹುಟ್ಟು ಹಬ್ಬದ ಆಚರಣೆ ನಿಮಿತ್ತ ಇಂದು ಯುವ ನಾಯಕರಾದ ಹುಂಡೇಕರ್ ರಾಜೇಶ್ ಅವರು ಅನ್ನದಾಸೋಹ ಏರ್ಪಡಿಸಿ ತಮ್ಮ ನೆಚ್ಚಿನ ನಾಯಕನಿಗೆ ಶುಭಾಶಯ ಕೋರಿದರು.

ಇಲ್ಲಿನ ಡಾ.ರಾಜಕುಮಾರ್ ರಸ್ತೆಯಲ್ಲಿರುವ ಜಿಲ್ಲಾ ಆಸ್ಪತ್ರೆಯ ಆವರಣದಲ್ಲಿ ಗರ್ಭಿಣಿ ಹೆಣ್ಣು ಮಕ್ಕಳಿಗೆ ಮತ್ತು ಬಾಣಂತಿಯರಿಗೆ ಬ್ರೆಡ್ ಮತ್ತು ಹಣ್ಣು ವಿತರಣೆ ಮಾಡಿದರು. ಜೊತೆಗೆ ಆಸ್ಪತ್ರೆಗೆ ಆಗಮಿಸುವ ರೋಗಿಗಳ, ಬಾಣಂತಿಯರ ಪೋಷಕರು ಹಾಗೂ ಹಿತೈಷಿಗಳಿಗೆ ಅನ್ನದಾಸೋಹ ಏರ್ಪಡಿಸಿದ್ದರು.

ಈ ವೇಳೆ ಮುಖಂಡರಾಗಳಾದ ಹುಂಡೇಕರ್ ರಾಕೇಶ್, ಸ್ವಾಮಿ ನಾಯಕ್, ಲಕ್ಷ್ಮಣ ನಾಯಕ್, ಗಾದಿಲಿಂಗ, ಚಂದ್ರ, ಧನಂಜಯ್, ದುರ್ಗಾ, ನಾಗರಾಜ, ಮಿಥುನ್ ಕುಮಾರ್, ಫೈಜಾನ್, ತುಕೇಶ್ ಜೈನ್, ಮಾಬಾಷಾ ಸೇರಿದಂತೆ ಜನಾರ್ದನ ರೆಡ್ಡಿ ಅವರ ಅಭಿಮಾನಿಗಳು ನೂರಾರು ಸಂಖ್ಯೆಯಲ್ಲಿ ಇದ್ದರು.

# ಕ್ರೀಡೆಯಿಂದ ಮನಸ್ಸು ಉಲ್ಲಾಸವಾಗುತ್ತದೆ ಸಿದ್ದನಗೌಡ ಪಾಟೀಲ್



ಮಲ್ಲಮ್ಮ ನುಡಿ ವಾರ್ತೆ

ಕೆಂಭಾವಿ ಪಟ್ಟಣದ ಹಿಲ್ಟಾಪ್ ಕಾಲೋನಿಯಲ್ಲಿ ಇಂದು ನಡೆದ ಕ್ರಿಕೆಟ್ ಪಂದ್ಯಾವಳಿಗೆ, ಮಾಜಿ ಜಿಪಂ ಅಧ್ಯಕ್ಷ ಸಿದ್ದನಗೌಡ ಪಾಟೀಲ ಭಾಗವಹಿಸಿ ಕ್ರಿಕೆಟ್ ಕ್ರೀಡಾಕೂಟವನ್ನು ಉದ್ಘಾಟನೆ ನೆರವೇರಿಸಿ ಮಾತನಾಡುತ್ತಾ ಇವತ್ತಿನ ದಿನಮಾನಗಳಲ್ಲಿ ಯುವಕರು ಹೆಚ್ಚು ಹೆಚ್ಚು ಕ್ರೀಡೆಯಲ್ಲಿ ಆಸಕ್ತಿಯಿಂದ ಭಾಗವಹಿಸಲು ಮುಂದಾಗಬೇಕು ಆಟದ ಜೊತೆಗೆ ಪಾಠದ ಕ್ರೀಡೆ, ಕಲೆ, ಸಾಹಿತ್ಯ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಯುವಕರಿಗೆ ಕರೆ ನೀಡಿದರು.

ಕ್ರಿಕೆಟ್ ಪಂದ್ಯಕ್ಕೆ ಮಹಿಪಾಲರೆಡ್ಡಿ ಡಿಗ್ಗಾವಿ ಅವರು ಚಾಲನೆ ನೀಡಿ ನಂತರ ಮಾತನಾಡಿ, ಕ್ರೀಡಾಕೂಟದಲ್ಲಿ ಪಾಲ್ಗೊಳ್ಳುವುದರಿಂದ ಆರೋಗ್ಯ ವೃದ್ಧಿಯಾಗಲಿದೆ. ಇಂತಹ ಕ್ರೀಡಾಕೂಟ ಹಮ್ಮಿಕೊಳ್ಳುವುದು ಒಳ್ಳೆಯ ಬೆಳವಣಿಗೆ. ಸೋಲು ಗೆಲುವು ಎನ್ನದೇ ಕ್ರೀಡಾ ಮನೋಭಾವನೆಯಿಂದ ಆಟವಾಡಬೇಕು ಸರ್ವಧರ್ಮ ಸಹಬಾಳ್ವೆಯಗೆ ಪೂರಕವಾಗಿದೆ. ನಾವೆಲ್ಲರೂ ಒಗ್ಗಟ್ಟಾಗಿ ಕ್ರೀಡಾಕೂಟವನ್ನು ಯಶಸ್ವಿಗೆ ಶ್ರಮಿಸೋಣ ಎಂದ ಹೇಳಿದರು

ಈ ಸಂದರ್ಭದಲ್ಲಿ ಪುರಸಭೆ ಸದಸ್ಯರಾದ ರಹೀಮಾನ ಪಟೇಲ್ ಯಲಗೋಡ, ರಾಘವೇಂದ್ರ ಕವಲ್ದಾರ, ಪತ್ರಕರ್ತ ಬಸನಗೌಡ ಪಾಟೀಲ ಪತ್ತೇಪೂರ, ರಂಗಪ್ಪ ವಡ್ಡರ, ಸಚಿನ್ ದೊರೆ, ಹನೀಫ್ ಸಾಸನೂರ, ಶಶಿಕುಮಾರ್ ಮ್ಯಾಗೇರಿ, ಶಿವು ಮಲ್ಲಿಬಾವಿ, ಸೋಹೆಲ್ ಸಾಸನೂರ ಕ್ರೀಡಾಪಟುಗಳು ಸೇರಿದಂತೆ ಇತರರು ಉಪಸ್ಥಿತರಿದ್ದರು..!!

# ಸಾರಿಗೆ ದರ ಹೆಚ್ಚಳ – ಬಳ್ಳಾರಿಯಲ್ಲಿ ಪ್ರತಿಭಟನೆ




**ಮಲ್ಲಮ್ಮ ನುಡಿ ವಾರ್ತೆ**

ಬಳ್ಳಾರಿ: ಕರ್ನಾಟಕ ಸರ್ಕಾರ ಸಾರಿಗೆ ಇಲಾಖೆ ದರವನ್ನು ಏರಿಕೆ ಮಾಡಿರುವ ಕ್ರಮವನ್ನು ವಿರೋಧಿಸಿ ಸಿಪಿಎಂ ಪಕ್ಷ ಬಳ್ಳಾರಿ ತಾಲೂಕಾ ಸಮಿತಿಯಿಂದ ಪ್ರತಿಭಟನೆ ನಡೆಸಲಾಯಿತು.


ರಾಜ್ಯದ ನಾಲ್ಕು ಸಾರಿಗೆ ನಿಯಮಗಳ ವ್ಯಾಪ್ತಿಯಲ್ಲಿ ಪ್ರಯಾಣಿಕರ ಸಾರಿಗೆ ದರಗಳು ಶೇಕಡ 15 ರಷ್ಟು ಹೆಚ್ಚಿಸಿರುವ ರಾಜ್ಯ ಸರ್ಕಾರದ ಕ್ರಮವನ್ನು ಸಿಪಿಎಂ ಖಂಡಿಸುತ್ತದೆ ಎಂದು ಮುಖಂಡರು ತಿಳಿಸಿದ್ದಾರೆ. ರಾಜ್ಯಾದ್ಯಂತ ಪ್ರತಿಭಟನೆ ನಡೆಸಲು ಕರೆ ನೀಡಿದ್ದ ಹಿನ್ನೆಲೆಯಲ್ಲಿ ಇಂದು ಬೀದಿಗಿಳಿದ ಸಿಪಿಎಂ, ಡೀಸೆಲ್ ದರಗಳು ಹೆಚ್ಚಲು ಮತ್ತು ಸಿಬ್ಬಂದಿ ವೆಚ್ಚ ಹೆಚ್ಚಳದ ನೆಪದಲ್ಲಿ ದರ ಏರಿಕೆ ಮಾಡಿರುವುದು ಪ್ರಜಾಸತ್ತಾತ್ಮಕ ಮತ್ತು ಅವೈಜ್ಞಾನಿಕವಾಗದೆ. ಇದು ಸಾಮಾನ್ಯ ಜನರ ವಿರೋಧಿಯಾಗಿದೆ. ಡೀಸೆಲ್ ಹೆಚ್ಚಳವಾಗಿದೆ ಎನ್ನುವ ಸರ್ಕಾರ ಡೀಸೆಲ್ ದರ ಇಳಿದಾಗ ದರಗಳನ್ನು ಎಂದಾದರೂ ಕಡಮೆ ಮಾಡಿದೆಯೇ? ಎಂದು ಪ್ರಶ್ನಿಸಿ ಸರ್ಕಾರದ ಕ್ರಮವನ್ನು ಖಂಡಿಸಿ ಪ್ರತಿಭಟನೆ ನಡೆಸಿದರು.

ಅದಕ್ಕಿಂತ ಮುಖ್ಯ ವಾಗಿ ಸಾರ್ವಜನಿಕ ಸಾರಿಗೆಯ ಡೀಸೆಲ್ ದರಗಳುನ್ನು ಕಡಿಮೆ ಇಡಬೇಕಾದ್ದು ಸರ್ಕಾರದ ಜವಾಬ್ದಾರಿ. ಸಾರಿಗೆ ನಿಗಮಗಳಿಗೆ ಪೂರೈಸುವ ಡೀಸೆಲ್ ದರವೂ ಮುಕ್ತ ಮಾರುಕಟ್ಟೆ ದರಗಳಿಗಿಂತ ದುಬಾರಿಯಾಗಿದೆ. ಸರ್ಕಾರಕ್ಕೆ ನಿಜಕ್ಕೂ ವೆಚ್ಚವನ್ನು ಕಡಿಮೆ ಮಾಡಬೇಕೆಂದಿದ್ದರೆ ಸಾರಿಗೆ ನಿಗಮಗಳಿಗೆ ಪೂರೈಸುವ ಡೀಸೆಲ್ ದರವನ್ನು ಸಬ್ಸಿಡಿ ದರದಲ್ಲಿ ಪೂರೈಸಬೇಕು. ಮುಕ್ತ ಮಾರುಕಟ್ಟೆ ದರಗಳಲ್ಲಾದರೂ ಪೂರೈಸಬೆಕು. ಆದ್ದರಿಂದ ಶೇಕಡಾ 15 ರ ದರ ಹೆಚ್ಚಳಕ್ಕೆ ಡೀಸೆಲ್ ದರ ಹೆಚ್ಚಳ ಕಾರಣ ಎನ್ನುವುದು ಸುಳ್ಳು ನೆಪವಾಗಿದೆ ಎಂದು ಸಿಪಿಎಂ ನಾಯಕ ಜೆ.ಸತ್ಯಬಾಬು ಹೇಳಿದ್ದಾರೆ.

ಸಿಬ್ಬಂದಿ ವೆಚ್ಚ ಹೆಚ್ಚಳ ವಾಗಿರು ವುದು ಮತ್ತೊಂದು ಕಾರಣವೆನ್ನಲಾಗಿದೆ. ನಾಲ್ಕು ನಿಗಮಗಳಲ್ಲಿ ಸಿಬ್ಬಂದಿಗೆ 3 ವರ್ಷಗಳ ವೇತನ ಬಾಕಿ ಮೊತ್ತ ನೀಡಿ ಹೊಸ ವೇತನ ಒಪ್ಪಂದ ಜಾರಿ ಮಾಡಬೇಕಿದೆ. 1950 ರ ಕಾಯ್ದೆ ಪ್ರಕಾರ ಸಾರ್ವಜನಿಕ ಸಾರಿಗೆ ವ್ಯವಸ್ಥೆಗೆ ಸರ್ಕಾರ ಬಜೆಟ್ ಬೆಂಬಲ ನಿಡುವುದು ಅಗತ್ಯ. ಸಾರ್ವಜನಿಕರ ಹಿತ ದೃಷ್ಟಿಯಿಂದ ಒದಗಿಸುವ ಸಾರಿಗೆಯನ್ನು ಲಾಭ ನಷ್ಟದ ಲೆಕ್ಕ ದಲ್ಲಿ ನೋಡಬಾರದು. ನಷ್ಟ ಉಂಟಾದಲ್ಲಿ ಸರ್ಕಾರ ಅದನ್ನು ಭರಿಸಬೇಕು. ಸಾರ್ವಜನಿಕ ಸಾರಿಗೆಗಳು ಎಲ್ಲಾ ಸಂದರ್ಭದಲ್ಲಿ ಲಾಭವನ್ನು ತರಲು ಆಗುವುದಿಲ್ಲ. ಸಾರಿಗೆ ನಿಗಮಗಳು ಅರ್ಧದಷ್ಟು ಮಾರ್ಗ ಕಾರ್ಯಾಚರಣೆಗಳು ಗ್ರಾಮಾಂತರದಲ್ಲಿ ಇರುವುದಿರಂದ ಸಹಜವಾಗಿಯೇ ನಷ್ಟಹೊಂದಿತ್ತದೆ. ಜನರ ಹಿತದೃಷ್ಟಿಯಿಂದ ಸರ್ಕಾರ ಅದನ್ನು ಭರಿಸಬೇಕು. ಅದರ ಬದಲಿಗೆ ಬೆಳೆ ಹೆಚ್ಚಳ ಮಾಡುವುದು ಜನ ವಿರೋಧಿ ಕ್ರಮವಾಗಿದೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಪ್ರತಿಭಟನೆಯಲ್ಲಿ ಸಿಪಿಎಂ ಕಾರ್ಯದರ್ಶಿ ಜೆ ಚಂದ್ರಕುಮಾರಿ, ಎಂ ತಿಪ್ಪೇಸ್ವಾಮಿ ಜಿಲ್ಲಾಸಮಿತಿ ಸಾಟಧಸ್ವಾರು, ತಿಪ್ಪೇರುದ್ರ ಎ, ಜಿ ಎನ್ ಯರಿಸ್ವಾಮಿ, ಜಿ ಎಸ್ ಮೂರ್ತಿ, ಈರಮ್ಮ, ಶಿಲ್ಪಾ, ಬೈಲ ಹನುಮಂತ, ಹೇಮಾವತಿ, ಗಂಗಣ್ಣ ಪತ್ತಾರ್, ರಾಮು, ವಿಜ್ಜೇಶ್ ಮುಂತಾದವರು ಇದ್ದರು.

# ಅಡುಗೆ ಸಿದ್ಧತೆ; ಸ್ವಚ್ಛತೆಗೆ ಒತ್ತು ನೀಡಿ:- ರಾಜಪ್ಪ ಜಮಾದರ್



ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ:-ಬಿಸಿಯೂಟ ಯೋಜನೆ ಅಡುಗೆ ಸಿಬ್ಬಂದಿಯು ಊಟ ಸಿದ್ಧಪಡಿಸುವ ಹಂತದಲ್ಲಿ ಮತ್ತು ಮಕ್ಕಳಿಗೆ ಊಟ ಬಡಿಸುವಾಗ ಸ್ವಚ್ಛತೆಗೆ ಒತ್ತು ನೀಡಬೇಕು ಎಂದು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲೂಕಾಧ್ಯಕ್ಷ ರಾಜಪ್ಪ ಜಮಾದರ್ ಕಿವಿಮಾತು ಹೇಳಿದರು. ತಾಲ್ಲೂಕಿನ ಬಿಸಿಯೂಟ ಯೋಜನೆ ಸಿಬ್ಬಂದಿಗೆ ಇಲ್ಲಿ ಶನಿವಾರ ಹಮ್ಮಿಕೊಂಡಿದ್ದ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿ ಅವರು, ಬಿಸಿಯೂಟ ನೌಕರರು ಅಡುಗೆ ಮಾಡುವುದರ ಜತೆಗೆ ಅಡುಗೆ ಕೋಣೆಯನ್ನು ಹೆಚ್ಚು ಸುರಕ್ಷಿತವಾಗಿ ಹಾಗೂ ಸ್ವಚ್ಛವಾಗಿ ಇಟ್ಟುಕೊಳ್ಳುವುದು ಅತಿ ಮುಖ್ಯ. ಪಾತ್ರೆಗಳನ್ನು ತೊಳೆದು ಒಣಗಿಸಿಡಬೇಕು. ಮಕ್ಕಳು ಅಡುಗೆ ಕೊಠಡಿ ಪ್ರವೇಶಿಸದಂತೆ ಎಚ್ಚರಿಕೆ ವಹಿಸಬೇಕು. ಮಕ್ಕಳಿಗೆ ಸಾಲಿನಲ್ಲಿ ಕುಡಿಸಿ ಊಟ ಬಡಿಸಬೇಕು, ಜತೆಗೆ ಅಡುಗೆ ಅನಿಲದ ಸಿಲಿಂಡರ್ ಅನ್ನು ಜಾಗೂರಕತೆಯಿಂದ ಬಳಕೆ ಮಾಡಬೇಕು' ಎಂದು ಸಲಹೆ ನೀಡಿದರು. ಸಾವಿತ್ರಿಬಾಯಿ ಫುಲೆ ಶಿಕ್ಷಕಿಯರ ಸಂಘದ ತಾಲೂಕಾಧ್ಯಕ್ಷೆ ಪ್ರೇಮಿಳಾ ರೆಡ್ಡಿ ಮಾತನಾಡಿ, ಇಲ್ಲಿ ತರಬೇತಿ ಪಡೆದು ಕಲಿತ ವಿಷಯಗಳ ನಿಮ್ಮ ಕೆಲಸದಲ್ಲಿ ಅಳವಡಿಸಿಕೊಳ್ಳಿ, ಬಿಸಿಯೂಟ ಕಾರ್ಯಕರ್ತೆಯರು ಪ್ರಥಮವಾಗಿ ಸ್ವಚ್ಛತೆಗೆ ಆದ್ಯತೆ ನೀಡುವ ಮೂಲಕ ತಾವು ತಯಾರಿಸುವ ಅಡುಗೆ ಪಾತ್ರೆಗಳು, ಕೊಠಡಿಯನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು. ಜತೆಗೆ ತಾವು ಧರಿಸುವ ಬಟ್ಟೆಗಳ ಬಗ್ಗೆ ಕಾಳಜಿ ವಹಿಸಬೇಕು ಎಂದು ಸಲಹೆ ನೀಡಿದರು. ಬಿಸಿಯೂಟ ಯೋಜನೆ ಸಹಾಯಕ ನಿರ್ದೇಶಕ ಮಹಾವೀರ ಜಮಖಂಡಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಬಿಸಿಯೂಟ ಯೋಜನೆ ನೌಕರರಿಗೆ ಹೆಚ್ಚಿನ ಜವಾಬ್ದಾರಿಯಿದೆ. ಸರ್ಕಾರಿ ಶಾಲೆಗಳಿಗೆ ಬರುವ ಮಕ್ಕಳ ಅಪೌಷ್ಟಿತೆ ನಿವಾರಿಸುವ ಹೊಣೆ ಹೊಂದಿದ್ದೀರಿ. ಇಲಾಖೆ ಸೂಚಿಸಿರುವಂತೆ ಮಕ್ಕಳಿಗೆ ಆಯಾ ದಿನದ ಪಟ್ಟಿಯಂತೆ ಅಡುಗೆ ಸಿದ್ಧ ಮಾಡಿ. ಹೆಚ್ಚು ಸೊಪ್ಪು, ತರಕಾರಿ ಬಳಸಿ. ಮಕ್ಕಳನ್ನು ನಿಮ್ಮ ಮಕ್ಕಳೆಂದು ಭಾವಿಸಿ ಊಟ ಬಡಿಸಿ, ಅಗ್ನಿ ಅನಾಹುತದ ಸಾಧ್ಯತೆ ಇರುವುದರಿಂದ ಅಡುಗೆ ಅನಿಲ ಬಳಸುವಾಗ ಎಚ್ಚರ ವಹಿಸಿ. ಅಡುಗೆ ಅನಿಲ ಸೋರಿಕೆ ತಡೆಗಟ್ಟಿ. ಅಡುಗೆ ಸಿದ್ಧತಾ ಕಾರ್ಯ ಆರಂಭಿಸುವ ಮುನ್ನ ಕೊಠಡಿಯ ಕಿಟಕಿ ಬಾಗಿಲು ತೆರೆಯಿರಿ. ಮಕ್ಕಳಿಗೆ ಶುದ್ಧ ಕುಡಿಯುವ ನೀರು ಒದಗಿಸಿ' ಎಂದರು. ಬಿಸಿಯೂಟ ಯೋಜನೆ ಸಿಬ್ಬಂದಿಯ ಬೇಡಿಕೆಗಳು ನ್ಯಾಯಸಮ್ಮತವಾಗಿವೆ. ಈ ಬೇಡಿಕೆಗಳನ್ನು ಸರ್ಕಾರದ ಗಮನಕ್ಕೆ ತಂದು ಸಮರ್ಪಕ ಸೌಲಭ್ಯ ಒದಗಿಸುವುದು ನಮ್ಮ ಜವಾಬ್ದಾರಿ' ಎಂದು ಭರವಸೆ ನೀಡಿದರು. ಬೆಂಕಿನಂದಕ ಸಲಕರಣೆಗಳ ಬಳಕೆ ಬಗ್ಗೆ ಪ್ರಾತ್ಯಕ್ಷಿಕೆ ಮೂಲಕ ಮಾಹಿತಿ ನೀಡಿದ ಅಗ್ನಿಶಾಮಕ ದಳದ ಸಿಬ್ಬಂದಿ ಅರುಣಕುಮಾರ್, ಬೆಂಕಿ ಅನಾಹುತ ತಡೆಗಟ್ಟಿ. ಅಡುಗೆ ಅನಿಲದ ಒಲೆಗಳನ್ನು ಕಾಲಕಾಲಕ್ಕೆ ಸ್ವಚ್ಛಗೊಳಿಸಿ ದುರಸ್ತಿ ಮಾಡಿಸಿ. ಸುರಕ್ಷತೆಗೆ ಹೆಚ್ಚು ಒತ್ತು ಕೊಡಿ' ಎಂದು ಹೇಳಿದರು. ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲೂಕ ಉಪಾಧ್ಯಕ್ಷ ಮಹೇಶ್ ಮಾತನಾಡಿದರು. ಈ ಸಂದರ್ಭದಲ್ಲಿ ಸರ್ದಾರ್ ಅಲಿ ಐಆರ್ ಟಿ, ಬಿಸಿಯೂಟ ಸಂಘಟನೆ ಜಿಲ್ಲಾಧ್ಯಕ್ಷೆ ರೇಖಾ, ಸಿಂಧುಮತಿ, ಭಾಗವತ್, ಪ್ರಕಾಶ, ಹಸನ್ ಸೇರಿದಂತೆ ಬಿಸಿಯೂಟ ಅಡುಗೆ ಸಹಾಯಕಿಯರು ಉಪಸ್ಥಿತರಿದ್ದರು.

# ಆಶಾ ಕಾರ್ಯಕರ್ತರ ಬೀದಿಗೆ ತಂದ ಸರ್ಕಾರ : ಅಶೋಕ್ ಆಕ್ರೋಶ..



ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು,ಜ.11-ಚುನಾವಣೆಗೂ ಮುನ್ನ ಆಶಾ, ಅಂಗನವಾಡಿ ಕಾರ್ಯಕರ್ತೆಯರು, ಬಿಸಿಯೂಟ ಕಾರ್ಯಕರ್ತೆಯರ ಉದ್ಧಾರ ಮಾಡುವುದಾಗಿ ಸುಳ್ಳು ಆಶ್ವಾಸನೆ ಕೊಟ್ಟಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇದೀಗ ಅವರನ್ನು ಬೀದಿಗೆ ತಂದು ನಿಲ್ಲಿಸಿದ್ದಾರೆ ಎಂದು ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್.ಆಶೋಕ್ ರಾಜ್ಯ ಸರ್ಕಾರದ ವಿರುದ್ಧ ಕಿಡಿಕಾರಿದ್ದಾರೆ. ಈ ಕುರಿತು ತಮ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ವಿವಿಧ ಬೇಡಿಕೆಗಳಿಗೆ ಒತ್ತಾಯಿಸಿ ಕಳೆದ ಮೂರು ದಿನಗಳಿಂದ ಕೊರೆಯುವ ಚಳಿಯಲ್ಲೂ ಫ್ರೀಡಂಪಾರ್ಕ್‌ನಲ್ಲಿ ಆಶಾ ಕಾರ್ಯಕರ್ತೆಯರು ಪ್ರತಿಭಟನೆ ಮಾಡುತ್ತಿದ್ದರೆ, ಹೃದಯಹೀನ ಸರ್ಕಾರ ಕಂಡೂ ಕಾಣದಂತೆ ಕುರುಡಾಗಿದೆ, ಕೇಳಿದರೂ ಕೇಳಿಸದಂತೆ ಕಿವುಡಾಗಿದೆ.

ಕಾಂಗ್ರೆಸ್ ಸರ್ಕಾರ ಎಲ್ಲರನ್ನೂ ವಂಚಿಸಿ ಬೀದಿಗೆ ತಂದು ನಿಲ್ಲಿಸಿ ಮಜಾ ನೋಡುತ್ತಿದೆ ಎಂದು ವಾಗ್ದಾಳಿ ನಡೆಸಿದ್ದಾರೆ. ಇದೇ ವಿಷಯದ ಕುರಿತು ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ .ವಿಜಯೇಂದ್ರ ಅವರು, ಗೌರವಧನ ಹೆಚ್ಚಳ ಸೇರಿದಂತೆ ವಿವಿಧ ನ್ಯಾಯಯುತ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಬೀದಿಗಿಳಿದಿರುವ 25 ಸಾವಿರಕ್ಕೂ ಅಧಿಕ ಆಶಾ ಕಾರ್ಯಕರ್ತೆಯರು ಬೆಂಗಳೂರಿನ ಫ್ರಿಡಂ ಪಾರ್ಕ್‌ನಲ್ಲಿ ಎರಡನೇ ದಿನವೂ ಕೊರೆವ ಚಳಿಯಲ್ಲಿಯೇ ರಾತ್ರಿ ಕಳೆದು ಮುಷ್ಕರ ನಡೆಸುತ್ತಿದ್ದರೂ ದಪ್ಪ ಚರ್ಮದ ಕಾಂಗ್ರೆಸ್ ಸರ್ಕಾರ ಕಿವಿ ಕೊಡದಿರುವುದು ಶ್ರಮಿಕ ವರ್ಗಗಳ ಮೇಲೆ ಈ ಸರ್ಕಾರಕ್ಕಿರುವ ಅಸಡ್ಡೆ ತನವನ್ನು ಸಾಕ್ಷೀಕರಿಸುತ್ತಿದೆ ಎಂದು ಟೀಕಾಪ್ರಹಾರ ನಡೆಸಿದ್ದಾರೆ.

ಅಧಿಕಾರಕ್ಕೆ ಬರುವ ಮುನ್ನ ಆಶಾ ಕಾರ್ಯಕರ್ತೆಯರ ಮತ ಪಡೆಯಲು ಬೆಟ್ಟದಷ್ಟು ಪೊಳ್ಳು ಆಶ್ವಾಸನೆಗಳನ್ನು ನೀಡಿ ಅಧಿಕಾರಕ್ಕೆ ಬಂದು ವರ್ಷ ಕಳೆದರೂ ಬೇಡಿಕೆ ಈಡೇರಿಸದೇ ಆಶಾ ಕಾರ್ಯಕರ್ತೆಯರ ಹೋರಾಟಕ್ಕೆ ಬೆಲೆ ಕೊಡದ ಈ ಸರ್ಕಾರಕ್ಕೆ ನಾಡಿನ ಜನ ಹಿಡಿಶಾಪ ಹಾಕುತ್ತಿದ್ದಾರೆ. ಈ ಕೂಡಲೇ ರಾಜ್ಯ ಸರ್ಕಾರ ಆಶಾ ಕಾರ್ಯಕರ್ತೆಯರ ನ್ಯಾಯಸಮತ ಬೇಡಿಕೆಗಳನ್ನು ಈಡೇರಿಸಲಿ ಎಂದು ರಾಜ್ಯ ಸರ್ಕಾರವನ್ನು ವಿಜಯೇಂದ್ರ ಒತ್ತಾಯಿಸಿದ್ದಾರೆ.

# ಆಧ್ಯಾತ್ಮದ ತಳಹದಿಯಲ್ಲಿ ಜೀವನ ಸಾಗಿಸಿ-ಪ್ರಭುಸ್ವಾಮೀಜಿ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಜ11-ಜೀವನದಲ್ಲಿ ಅಧಿಕಾರ, ಹಣ, ಅಂತಸ್ತು ಎಷ್ಟೇ ಇದ್ದರೂ ಸಹ ಆಧ್ಯಾತ್ಮ ತಳಹದಿಯಲ್ಲಿ ಜೀವನ ಸಾಗಿಸಬೇಕು. ಅದರಿಂದ ವಿಮುಖರಾದ ಪರಿಣಾಮವಾಗಿ ಮನುಷ್ಯ ಇಂದು ನೆಮ್ಮದಿ ಕಳೆದುಕೊಂಡಿದ್ದಾನೆ ಎಂದು ಚರಂತಿಮಠದ ಪ್ರಭು ಸ್ವಾಮೀಜಿ ಹೇಳಿದರು.

ನಗರದ ಟೆಂಗಿನಮಠದಲ್ಲಿ ಈಚೆಗೆ ಹಮ್ಮಿಕೊಂಡಿದ್ದ ಲಿಂ. ಮಲ್ಲಿಕಾರ್ಜುನಸ್ವಾಮೀಜಿ ಹಾಗೂ ಲಿಂ. ರೇವಣಸಿದ್ದೇಶ್ವರ ಸ್ವಾಮೀಜಿಯವರ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದ ಅವರು, ನಮಗೆ ನಾವೇ ತಿದ್ದಿಕೊಳ್ಳುವ ಶಕ್ತಿ ಆಧ್ಯಾತ್ಮದಲ್ಲಿ ಇದೆ. ಅರಿವೇ ಗುರು ಅಂತ ಬಸವಣ್ಣನವರು ಸಾರಿ ಸಾರಿ ಹೇಳಿದ್ದಾರೆ. ಈ ಕ್ಷಣ ನಮ್ಮದು ಅಂತ ಬದುಕುಬೇಕು. ಸಂತೋಷ, ನೆಮ್ಮದಿಯಿಂದ ಬದುಕಬೇಕು ಎಂದರು.

ಗವಿಸಿದ್ದೇಶ್ವರ ಶಾಸ್ತ್ರಿಗಳು 11 ದಿನಗಳ ಕಾಲ ಶರಣ ಬಸವೇಶ್ವರ ಜೀವನ ಕುರಿತು ಪ್ರವಚನ ನೀಡಿದರು. ಕಮತಗಿ ಹೊಳೆ ಹುಚ್ಚೇಶ್ವರ ಸ್ವಾಮೀಜಿ, ಮಲ್ಲಿಕಾರ್ಜುನ ದೇವರು ಇದ್ದರು. ಬಸವರಾಜ ಮುಕ್ಕುಪ್ಪಿ ಸ್ವಾಗತಿಸಿದರು. ಜಯಾ ಭದ್ರಶೆಟ್ಟಿ ಪ್ರಾರ್ಥಿಸಿದರು. ಪ್ರಭುಗೋಳ ನಿರೂಪಿಸಿದರು.

# ಮುಧೋಳದಲ್ಲಿ ಪೂರ್ವ ಸಿದ್ಧತಾ ಸಭೆ ರನ್ನ ಉತ್ಸವ ಯಶಸ್ಸಿಗೆ ಸಚಿವ ತಿಮ್ಮಾಪೂರ ಕರೆ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಜ.11-ಬರುವ ತಿಂಗಳು ಫೆ.22ರಿಂದ ಮೂರು ದಿನಗಳ ಕಾಲ ಮುಧೋಳದಲ್ಲಿ ಜರುಗಲಿರುವ ರನ್ನ ಉತ್ಸವದ ಹಿನ್ನೆಲೆಯಲ್ಲಿ ಶನಿವಾರ ಮುಧೋಳ ನಗರದ ಡಾ.ಬಿ.ಆರ್.ಅಂಬೇಡ್ಕರ್ ಹಾಗೂ ಡಾ.ಬಾಬು ಜಗಜೀವನರಾಂ ಸಮುದಾಯ ಭವನದಲ್ಲಿ ಪೂರ್ವಸಿದ್ದತಾ ಸಭೆ ಜರುಗಿತು.

ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪುರ, ರನ್ನ ರಥವನ್ನು ಬೆಂಗಳೂರಿನಿಂದ ಆರಂಭಿಸಿ ರಾಜ್ಯದ ವಿವಿಧ ಭಾಗಗಳಲ್ಲಿ ಸಂಚರಿಸಿ ಮುಧೋಳಕ್ಕೆ ತಲುಪಿಸುವ ಯೋಜನೆಯಿದೆ. ಸಮಯಾವಧಿ ಕಡಿಮೆ ಇರುವುದರಿಂದ ಆಗುವ ಕೆಲಸಗಳು ಬೆಟ್ಟದಷ್ಟಿವೆ. ಪ್ರತಿಯೊಬ್ಬರೂ ಕೈಜೋಡಿಸಿ ಉತ್ಸವ ಯಶಸ್ವಿಗೊಳಿಸೋಣ ಎಂದು ತಿಳಿಸಿದರು.

ಅಧಿಕಾರಿಗಳು ತಮ್ಮ ತಮ್ಮ ವ್ಯಾಪ್ತಿಯಲ್ಲಿ ಸಭೆ ನಡೆಸಿ ಅಧಿಕಾರಿ ವರ್ಗದ ಪಾಲ್ಗೊಳ್ಳುವಿಕೆ ಬಗ್ಗೆ ಗಮನಹರಿಸಬೇಕು. ಪ್ರಚಾರ ಕಾರ್ಯವೂ ಹೆಚ್ಚು ಪರಿಣಾಮಕಾರಿಯಾಗಿ ನಡೆಯಬೇಕು. ಇದರೊಟ್ಟಿಗೆ ಚಾಲುಕ್ಯ ಉತ್ಸವ ಹಮ್ಮಿಕೊಂಡರೆ ಕಲಾವಿದರಿಗೆ ಹೆಚ್ಚು ಅನುಕೂಲವಾಗಲಿದೆ ಎಂಬುದರ ಬಗ್ಗೆ ಚಿಂತನೆ ನಡೆಸಲಾಗಿದೆ ಎಂದು ಸಚಿವ ತಿಮ್ಮಾಪೂರ ಹೇಳಿದರು.

ಜಿಲ್ಲಾಧಿಕಾರಿ ಜಾನಕಿ ಕೆ.ಎಂ ಮಾತನಾಡಿ, ಉತ್ಸವ ಯಶಸ್ಸಿಗಾಗಿ ಒಟ್ಟು 15 ಸಮಿತಿಗಳನ್ನು ರಚಿಸಲಾಗಿದೆ. ರನ್ನ ರಥ ಮೆರವಣಿಗೆಗಾಗಿ ತಾತ್ಕಾಲಿಕವಾಗಿ ಯೋಜನೆ ಹಾಕಿಕೊಳ್ಳಲಾಗಿದೆ. ಧಾರವಾಡದ ರಂಗಾಯಣದಿಂದ ರನ್ನನ ಕಾವ್ಯವನ್ನು ಆಧರಿಸಿ ನಾಟಕ ಪ್ರದರ್ಶನಗೊಳ್ಳಲಿದೆ. ಸಂಗೀತ ಮತ್ತು ನಾಟಕ ಅಕಾಡೆಮಿ ವತಿಯಿಂದ ಸಂಗೀತ ಪ್ರದರ್ಶನ ನೀಡಲು ಕೋರಲಾಗಿದೆ ಎಂದು ತಿಳಿಸಿದರು.

2018ರ ವೈಭವದ ಆಧಾರದ ಮೇಲೆ ಕೆಲವು ಯೋಜನೆ ಹಾಕಿಕೊಳ್ಳಲಾಗಿದೆ. ರನ್ನನ ಜೀವನ ಹಾಗೂ ಅವರ ಕೃತಿಗೆ ಸ್ತಬ್ದ ಚಿತ್ರ ಆಯೋಜನೆ ಮಾಡುವ ಕುರಿತು ಜಿಲ್ಲಾಧಿಕಾರಿ ಮಾಹಿತಿ ನೀಡಿದರು. ರನ್ನ ಪ್ರತಿಷ್ಠಾನದ ಸದಸ್ಯೆ ಸುಲೋಚನಾ ಜವಳಗಿ ಮಾತನಾಡಿ, ರನ್ನ ಉತ್ಸವ ಮಾದರಿ ರೀತಿಯಲ್ಲಿ ಆಯೋಜನೆ ಮಾಡಬೇಕು. ಕಲಾವಿದರ, ಕವಿಗಳ, ಸಾಹಿತಿಗಳ, ವಿದ್ವಾಂಸರ ಆಯ್ಕೆ ಪಾರದರ್ಶಕವಾಗಿ ನಡೆಯಬೇಕು. ಇರುವ ಕಡಿಮೆ ಅವಧಿಯಲ್ಲಿ ಹೆಚ್ಚಿನ ಕೆಲಸಗಳು ಸಾಗರೋಪಾದಿಯಲ್ಲಿ ನಡೆಯಬೇಕು ಎಂದು ಸಲಹೆ ನೀಡಿದರು. ಸಾಹಿತಿ ಚಂದ್ರಶೇಖರ ದೇಸಾಯಿ ಮಾತನಾಡಿ, ಮೈಸೂರು ಹಾಗೂ ಹಂಪಿ ಉತ್ಸವಕ್ಕಿಂತ ಅದ್ದೂರಿಯಾಗಿ ಕಳೆದ ರನ್ನ ಉತ್ಸವ ತಮ್ಮ ಆಡಳಿತಾವಧಿಯಲ್ಲಿ ನಡೆದಿದೆ. ಈ ಬಾರಿಯೂ ಅದೇ ಮಾದರಿಯಲ್ಲಿ ಉತ್ಸವ ಜರುಗಬೇಕು. ಸಾಹಿತ್ಯಿಕ ದೃಷ್ಟಿಯಿಂದ ಹಲವಾರು ಕಾರ್ಯಕ್ರಮಗಳನ್ನು ಯುದ್ದೋಪಾದಿಯಲ್ಲಿ ಜರುಗಿಸಬೇಕು. ಸಂಪನ್ಮೂಲ ಕ್ರೂಢೀಕರಣವು ಅದೇ ಮಾದರಿಯಲ್ಲಿ ಸಾಗಬೇಕು. ರನ್ನ ಹಳಗನ್ನಡ ಪ್ರಶಸ್ತಿಯನ್ನು ಹಳಗನ್ನಡದಲ್ಲಿ ಪಾಂಡಿತ್ಯ ಸಾಧಿಸಿದವರಿಗೆ 7 ಪ್ರಶಸ್ತಿಗಳನ್ನು ನೀಡುವಂತೆ ಸಲಹೆ ನೀಡಿದರು.

ತುಕಾರಾಮ ಹಂಚಾಟೆ ಮಾತನಾಡಿ, ಸ್ಮರಣ ಸಂಚಿಕೆಯಲ್ಲಿ ಜಾಹೀರಾತಿಗೆ ಅವಕಾಶ ನೀಡಬಾರದು. ಆ ಗ್ರಂಥದಲ್ಲಿ ರನ್ನನ ಪದ್ಯ ಹಾಗೂ ಗದ್ಯಕ್ಕೆ ಹೆಚ್ಚಿನ ಒತ್ತು ನೀಡಬೇಕು ಎಂದು ಸಲಹೆ ನೀಡಿದರು. ಜಾನಪದ ಆಶುಕವಿ ಸಿದ್ದಪ್ಪ ಬಿದರಿ ಮಾತನಾಡಿ, ರನ್ನನ ಕೃತಿಗಳನ್ನು ಆನೆ0ಯ ಮೇಲೆ ಮೆರವಣಿಗೆ ಮಾಡಿ ಅಂಬಾರಿ ಮೆರವಣಿಗೆ0ಯಾಗಬೇಕು ಎಂದು ತಿಳಿಸಿದರು. ಸಾಹಿತಿ ಡಾ.ಶಿವಾನಂದ ಕುಬುಸದ ನಾಳೆಯಿಂದಲೇ ಉತ್ಸವದ ಕಾರ್ಯಕಲಾಪಗಳನ್ನು ಆರಂಭಿಸಬೇಕು ಎಂದು ಸಲಹೆ ನೀಡಿದರು.

ಡಾ.ಸತೀಶ ಮಲಘಾಣ, ಕುಸ್ತಿ ಪಂದ್ಯಾವಳಿ ಆಯೋಜಿಸಿ ಮೈಸೂರು ಕೇಸರಿ ಮಾದರಿಯಲ್ಲಿ ರನ್ನ ಕೇಸರಿ ಬಿರುದು ನೀಡುವ ಕಾರ್ಯವಾಗಬೇಕು. ಸ್ಥಳೀಯ ಕಲಾವಿದರಿಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದರು. ಪ್ರತಿಷ್ಠಾನದ ಸದಸ್ಯ ಡಾ.ಕೆ.ಎಲ್.ಉದುಪುಡಿ, ಕಸಾಪ ಜಿಲ್ಲಾಧ್ಯಕ್ಷ ಶಿವಾನಂದ ಶೆಲ್ಲಿಕೇರಿ, ಕಸಾಪ ತಾಲೂಕು ಅಧ್ಯಕ್ಷ ಆನಂದ ಪೂಜಾರಿ, ಸಂಶೋಧಕ ಸಂಗಮೇಶ ಕಲ್ಯಾಣಿ, ಎಪಿಎಂಸಿ ಅಧ್ಯಕ್ಷ ಸಂಗಪ್ಪ ಇಮ್ಮನ್ನವರ ಮಾತನಾಡಿದರು.

ಸಭೆಯಲ್ಲಿ ನಗರಸಭೆ ಅಧ್ಯಕ್ಷೆ ಸುನಂದಾ ತೇಲಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಶೋಕ ಕಿವಡಿ, ಸಿಇಒ ಶಶಿಧರ ಕುರೇರ, ಹೆಚ್ಚುವರಿ ಎಸ್ಪಿ, ಉಪವಿಭಾಗಾಧಿಕಾರಿ ಶ್ವೇತಾ ಬೀಡಿ-ಕರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಿಲ್ಲಾ ಮಟ್ಟದ ಅಧಿಕಾರಿ ಕರ್ಣಕುಮಾರ ಜೈನ್, ತಹಸೀಲ್ದಾರ್ ಮಹಾದೇವ ಸಣಮುರಿ, ತಾಪಂ ಇಒ ಉಮೇಶ ಸಿದ್ನಾಳ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಇದ್ದರು.

# ಗುರುವಂದನ ಕಾರ್ಯಕ್ರಮ ಹಾಗೂ ವಿದ್ಯಾರ್ಥಿಗಳ ಸ್ನೇಹ ಸಮ್ಮಿಲನ ಸಮಾರಂಭ ಕಾರ್ಯಕ್ರಮ





(ಶಿವು ರಾಠೋಡ)

ಮಲ್ಲಮ್ಮ ನುಡಿ ವಾರ್ತೆ

ನಾರಾಯಣಪುರ : ಯಾದಗಿರಿ ಜಿಲ್ಲೆಯ ಹುಣಸಗಿ ತಾಲೂಕಿನ ನಾರಾಯಣಪುರ ಗ್ರಾಮದಲ್ಲಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಹಾಗೂ ಸರಕಾರಿ ಪ್ರೌಢ ಶಾಲೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ಹಾಗೂ ವರ್ಗಾವಣೆ ಗೊಂಡ ಶಿಕ್ಷಕರಿಗೆ ಹಳೆಯ ವಿದ್ಯಾರ್ಥಿಗಳ ವತಿಯಿಂದ ಗುರುವಂದನಾ ಕಾರ್ಯಕ್ರಮ ನಡೆಯಿತು.

ಈ ಕಾರ್ಯಕ್ರಮವು ಸರ್ಕಾರಿ ಕಬ್ಬು ಪೂರ್ವ ಕಾಲೇಜ್ ನಾರಾಯಣಪುರ ಆವರಣದಲ್ಲಿ ಈ ಕಾರ್ಯಕ್ರಮ ಜರಗಿತು. ಈ ಕಾರ್ಯಕ್ರಮ 1980-87 ಮಾದರಿಯ ಪ್ರಾಥಮಿಕ ವಿದ್ಯಾರ್ಥಿಗಳಿಗೆ ಪಾಠವನ್ನು ಮಾಡಿದಂತಹ ಶಿಕ್ಷಕರು ಹಾಗೂ 1987-90ರ ವರೆಗೂ ಪ್ರೌಢಶಾಲೆಯ ಶಾಲೆಯ ವರ್ಗಾವಣೆ ಮತ್ತು ನಿವೃತ್ತಿ ಪಡೆದ ಶಿಕ್ಷಕರಿಗೆ ಗುರು ವಂದನ ಕಾರ್ಯಕ್ರಮ ಹಾಗೂ ವಿದ್ಯಾರ್ಥಿಗಳ ಸ್ನೇಹಾ ಸಮ್ಮಿಲನ ಕಾರ್ಯಕ್ರಮದಲ್ಲಿ 15 ಕ್ಕೂ ಹೆಚ್ಚು ಶಿಕ್ಷಕರು ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು. ಗುರುಗಳನ್ನು ಕಾರ್ಯಕ್ರಮಕ್ಕೆ ಆಹ್ವಾನ ಮಾಡುವಾಗ ಶಾಲೆಯ ವಿದ್ಯಾರ್ಥಿನಿಯರು ವಿದ್ಯಾರ್ಥಿಗಳು ಹೂವಿನ ಮಳೆಗೆರೆದು ಬರಮಾಡಿಕೊಂಡರು.

ಸನ್ಮಾನ ಸ್ವೀಕರಿಸಿದ ಗುರುಗಳು ಅವರ ಅನಿಸಿಕೆಗಳನ್ನು ಹಂಚಿಕೊಂಡರು. ನಂತರ ವಿದ್ಯಾರ್ಥಿಗಳು ಕೂಡಾ ತಮ್ಮ ಅನಿಸಿಕೆಗಳನ್ನು ಮುಂದಿಟ್ಟರು. ಹಳೆಯ ವಿದ್ಯಾರ್ಥಿಗಳ ಸ್ನೇಹ ಸಮ್ಮಿಲನವೂ ನಡೆದು, ಹಾಗೆ ಕುಟುಂಬ ಸಮೇತರಾಗಿ ಬಂದಿರೋದಂದು ಸಂತೋಷ ತರುವ ವಿಷಯವೆಂದು ಅನಿಸ್ತಿತ್ತು ಎಂದು ಹಳೆ ವಿದ್ಯಾರ್ಥಿ ತಿಳಿಸಿದರು.

ಇದೆ ಸಂದರ್ಭದಲ್ಲಿ ಬಸವರಾಜ್ ನಡುವಿನಮನಿ, ಎಸ್.ಡಿ.ಎಂ.ಸಿ ಅಧ್ಯಕ್ಷರು ಅಧ್ಯಕ್ಷೀಯ ಸ್ಥಾನವನ್ನು ವಹಿಸಿಕೊಂಡಿದ್ದರು, ಶಂಕ್ರಪ್ಪ ಡಿ ಲಂಬಾಣಿ ಉಪ ಪ್ರಾಂಶುಪಾಲರು ಸರ್ಕಾರಿ ಪದವಿ ಪೂರ್ವ ಕಾಲೇಜ್ ನಾರಾಯಣಪುರ, ಬಸಮ್ಮ ಎಸ್ ಬಿರಾದರ್ ಮಾಜಿ ಗುರುಮಾತೆಯರು ಮಾದರಿಯ ಪ್ರಾಥಮಿಕ ಶಾಲೆ ನಾರಾಯಣಪುರ, ಎಸ್ .ಐ ಇನಾಮ್ದಾರ್ , ಪಿ.ಎಂ. ದೇಸಾಯಿ, ಜೆ. ಜಿ. ಗಾರಂಪಳ್ಳಿ, ಜಿ.ಜಿ ಪಂಚಾಳ್ , ಎ.ಜಿ ಬೆತ್, ವಿ.ಎನ್. ಕೊಡೆಕಲ್ ಮಠ , ಶಫ್ರುದ್ದೀನ್ , ಶಂಕ್ರಪ್ಪ ದಂಡಿ, ಶಿವಾನಂದ್ ಲಂಬಾಣಿ, ಮನೋಹರ್, ಹಾಗೂ ಇನ್ನಿತರ ಗುರುಗಳು ಗುರುಮಾತೆಯರು .

ಪ್ರಾರ್ಥನೆ ಗೀತೆಯನ್ನು 9ನೇ ತರಗತಿ ವಿದ್ಯಾರ್ಥಿಗಳಾದ ಕಾವೇರಿ ಲಕ್ಷ್ಮಿ ಹಾಗೂ ಸಂಗಡಿಗರು ಹಾಡಿದರು ನಿರೂಪಕರು ಅನಿಲ್ ಸ್ವಾಗತ ಕೋರಿದವರು. ದ್ಯಾಮಣ್ಣ ಕೊಡೇಕಲ್ ನೆರವೇರಿಸಿದರು. ಹಳೆಯ ಸ್ನೇಹಿತರು ಹಳೆಯ ನೆನಪುಗಳೊಂದಿಗೆ ಉಪಸ್ಥಿತರಿದ್ದರು.

# ಸಂಕ್ರಾಂತಿ ಹಬ್ಬ ಪ್ರಯುಕ್ತ ಆದರ್ಶ ದಂಪತಿಗಳಿಗೆ ಗೌರವ ಸನ್ಮಾನ



ಮಲ್ಲಮ್ಮ ನುಡಿ ವಾರ್ತೆ

ಕಮಲನಗರ: ತಾಲೂಕಿನ ಗುರುಕಾರುಣ್ಯ ಪಬ್ಲಿಕ್ ಸ್ಕೂಲ್‌ನಲ್ಲಿ ಸಂಕ್ರಾಂತಿ ಹಬ್ಬ ಆಚರಣೆ ಹಮ್ಮಿಕೊಳಲಾಯಿತು ಕ್ರಾಯಕ್ರಮದಲ್ಲಿ ಐದು ದಂಪತಿಗಳಿಗೆ ವಿಶೇಷ ಸನ್ಮಾನ ಮಾಡಲಾಯಿತು. ಹಾಗೂ ಮಕ್ಕಳ ಸಾಂಕೃತಿಕ ಕಾರ್ಯಕ್ರಮದೊಂದಿಗೆ ವಿಜ್ರಂಬಣೆಯಿಂದ ಆಚರಿಸಲಾಯಿತು.

ಕಾರ್ಯಕ್ರಮದ ಅತಿಥಿಗಳಾದ ಶಿವಕುಮಾರ ಶಿವಣಕರ ಮಕ್ಕಳನ್ನು ಉದ್ದೇಶಿಸಿ ಈ ಭಾಗದಲ್ಲಿ ಮಕರ ಸಂಕ್ರಾಂತಿಯನ್ನು ಈ ರೀತಿ ಆಚರಿಸುವುದು ಡಾ॥ ಚನ್ನಬಸವ ಪಟ್ಟದೇವರ ಗುರುಯನ್ನು ಕಾರ್ಯಗತಗೊಳಿಸುವಂತ ಬುನಾದಿಯನ್ನು ಚನ್ನಬಸವ ಘಾಳೆರವರು ಮಾಡುತ್ತಿದ್ದಾರೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷಿಯ ಸ್ಥಾನವಹಿಸಿದ ಶಾಲೆಯ ಆಡಳಿತಾಧಿಕಾರಿಗಳಾದ ಶ್ರೀ ಚನ್ನಬಸವ ಘಾಳೆ ಭಾರತದ ಸಂಕೃತಿಯನ್ನು ಉಳಿಸಿ ಬೇಳೆಸುವುದು ನಮ್ಮೆಲ್ಲರ ಕರ್ತವ್ಯವಾಗಿದ್ದು ಪರಮ ಪೂಜ್ಯರ ಆಶಯದಂತೆ ಮಕ್ಕಳಲ್ಲಿ ಸಂಸ್ಕಾರ ಹಾಗೂ ಸಂಕೃತಿ ನೆಡೆಯುವುದು ನಮ್ಮಲೆರ ಗುರಿಯಾಗಿರುತ್ತದೆ.

ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀಮತಿ ಮೀರಾ ಮಹಾಜನ ಮತ್ತು ಶ್ರೀ ಲಿಂಗಾನಂದ ಮಹಾಜನರವರು ನೆರವೇರಿಸಿದರು,

ಕಾರ್ಯಕ್ರಮದಲ್ಲಿ ಶ್ರೀಮತಿ ನೀಲಮಾ ವಡ್ಡೆ ಮತ್ತು ಶ್ರೀ ಶಿವಾನಂದ ವಡ್ಡೆ ರವರು ಬಸವ ಪೂಜೆಯನ್ನು ಮಾಡಿದರು ಅದೇ ರೀತಿ ಬೋಗಿ ಪ್ರಜ್ವಲಿಸುವುದನ್ನು ಶ್ರೀಮತಿ ಉಮಾದೇವಿ ಶಿವಣಕರ ಮತ್ತು ಶ್ರೀ ಶಿವಕುಮಾರ ಶಿವಣಕರ ನೆರವೆರಿಸಿದರು

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಶ್ರೀಮತಿ ಜೈಶ್ರೀ ತೆಲಂಗೆ ಮತ್ತು ಶ್ರೀ ಬಾಲಾಜಿ ತೆಲಂಗೆ ಹಾಗೂ ಶ್ರೀಮತಿ ಡಾ॥ ಆರತಿ ಟೊಣ್ಣೆ ಮತ್ತು ಶ್ರೀ ಡಾ॥ ಕೈಲಾಸ ಟೊಣ್ಣೆರವರು ಸ್ಥಾನ ಅಲಂಕರಿಸಿದರು.

ಸ್ವಾಗತ ನುಡಿಯನ್ನು ಶಾಲೆಯ ಪ್ರಾಂಶುಪಾಲರಾದ ಶ್ರೀಧರ ರಡ್ಡಿರವರು ನೆರವೆರಿಸಿದರು

ಮಕ್ಕಳಾದ ಮೇಘನಾ ಸುತಾರ ಮತ್ತು ವಿಗ್ನೇಶ ನಿರೂಪಣೆ ಮಾಡಿದರು.

ಶಾಲೆಯ ಶಿಕ್ಷಕಿಯಾದ ಚಂದ್ರಕಲಾ, ಕಾಮಾಕ್ಷಿ ಸುತಾರ, ಸುಗುಣಸುಂದರಿ, ರೇಖಾ ಕೊಡ್ಡಿಕರ, ಸೃಷ್ಟಿ, ದೀಪಿಕಾ, ಸಂದ್ಯಾರಾಣಿ, ಯಸ್ತರ್‌ರಾಣಿ, ಸೌಂದರ್ಯ, ಶೇಖರ, ನಾಮದೇವ, ಶರಣಬಸಪ, ಗ್ರೆಸ್, ಜೈಶ್ರೀ ಇದ್ದರು.



ಚಿಟಗುಪ್ಪ:- ಕಲ್ಬುರ್ಗಿ ಉಪ ವಿಭಾಗದ ಸಹಾಯಕ ಆಯುಕ್ತರಾದ ಸಾಹಿತ್ಯ ಅವರನ್ನು ಸಾಮಾಜಿಕ ಕಾರ್ಯಕರ್ತ ಮಹಮ್ಮದ್ ಅಸ್ಲಾಂಮಿಯಾ ಅವರು ಸಸಿ ನೀಡಿ ಸನ್ಮಾನಿಸಿದರು. ಈ ಸಂದರ್ಭದಲ್ಲಿ ವಕೀಲರ ಸಂಘದ ಕಾರ್ಯದರ್ಶಿ ಸಂತೋಷ ಮೋತಕಪ್ಪಳ್ಳಿ, ಸಂಜೂಕುಮಾರ್ ಉಪಸ್ಥಿತರಿದ್ದರು. (ಮಲ್ಲಮ್ಮ ನುಡಿ ಚಿತ್ರ).

# ರೆಡ್ಡಿ ಬರ್ತ್ ಡೇ - ಹುಂಡೇಕರ್ ರಮೇಶ್ ಅವರಿಂದ ಅನ್ನದಾಸೋಹ



ಮಲ್ಲಮ ನುಡಿ ವಾರ್ತೆ

ಬಳ್ಳಾರಿ: ಜ. 11 ಕರ್ನಾಟಕ ಸರ್ಕಾರದ ಮಾಜಿ ಸಚಿವರು, ಗಂಗಾವತಿ ವಿಧಾನಸಭಾ ಕ್ಷೇತ್ರದ ಶಾಸಕರು ಹಾಗೂ ಜಿಲ್ಲೆಯ ಬಿಜೆಪಿ ಹಿರಿಯ ಧುರೀಣರಾದ ಜಿ.ಜನಾರ್ದನರೆಡ್ಡಿ ಅವರ 58ನೇ ಹುಟ್ಟುಹಬ್ಬದ ಆಚರಣೆ ನಿಮಿತ್ತ ಇಂದು ಯುವ ನಾಯಕರಾದ ಹುಂಡೇಕರ್ ರಾಜೇಶ್ ಅವರು ಅನ್ನದಾಸೋಹ ಏರ್ಪಡಿಸಿ ತಮ್ಮ ನೆಚ್ಚಿನ ನಾಯಕನಿಗೆ ಶುಭಾಶಯ ಕೋರಿದರು.

ಇಲ್ಲಿನ ಡಾ.ರಾಜಕುಮಾರ್ ರಸ್ತೆಯಲ್ಲಿರುವ ಜಿಲ್ಲಾ ಆಸ್ಪತ್ರೆಯ ಆವರಣದಲ್ಲಿ ಗರ್ಭಿಣಿ ಹೆಣ್ಣು ಮಕ್ಕಳಿಗೆ ಮತ್ತು ಬಾಣಂತಿಯರಿಗೆ ಬ್ರೆಡ್ ಮತ್ತು ಹಣ್ಣು ವಿತರಣೆ ಮಾಡಿದರು. ಜೊತೆಗೆ ಆಸ್ಪತ್ರೆಗೆ ಆಗಮಿಸುವ ರೋಗಿಗಳ, ಬಾಣಂತಿಯರ ಪೋಷಕರು ಹಾಗೂ ಹಿತೈಷಿಗಳಿಗೆ ಅನ್ನದಾಸೋಹ ಏರ್ಪಡಿಸಿದ್ದರು.

ಈ ವೇಳೆ ಮುಖಂಡರಾಗಳಾದ ಹುಂಡೇಕರ್ ರಾಕೇಶ್, ಸ್ವಾಮಿ ನಾಯಕ್, ಲಕ್ಷ್ಮಣ ನಾಯಕ್, ಗಾದಿಲಿಂಗ, ಚಂದ್ರ, ಧನಂಜಯ್, ದುರ್ಗಾ, ನಾಗರಾಜ, ಮಿಥುನ್ ಕುಮಾರ್, ಫೈಜಾನ್, ತುಕೇಶ್ ಜೈನ್, ಮಾಬಾಷಾ ಸೇರಿದಂತೆ ಜನಾರ್ದನ ರೆಡ್ಡಿ ಅವರ ಅಭಿಮಾನಿಗಳು ನೂರಾರು ಸಂಖ್ಯೆಯಲ್ಲಿ ಇದ್ದರು.

# ಶಿಕ್ಷಣ ಸಂಪುಟ ಕೃತಿಗಳು ಶೈಕ್ಷಣಿಕ ಕ್ಷೇತ್ರದ ದಾಖಲೆ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಜ.11:ಬಾಗಲಕೋಟೆ ಜಿಲ್ಲೆಯ ಹಿಂದಿನ ಶೈಕ್ಷಣಿಕ ಪ್ರಗತಿ ಕುರಿತು ಸಂಶೋಧಿತ ಕೃತಿಗಳಾದ ಬಾಗಲಕೋಟೆ ಜಿಲ್ಲಾ ಶಿಕ್ಷಣ ಸಂಪುಟ ಕೃತಿಗಳು ಜಿಲ್ಲೆಯ ಶೈಕ್ಷಣಿಕ ಕ್ಷೇತ್ರದ ದಾಖಲೆ ಎಂದು ಮಾಜಿ ಶಾಸಕ ಡಾ.ವೀರಣ್ಣ ಚರಂತಿಮಠ ಹೇಳಿದರು. ನಗರದ ಬಿ.ವಿ.ವಿ.ಸಂಘದ ಮಿನಿ ಸಭಾಭವನದಲ್ಲಿ ಶನಿವಾರ ಬಿ.ವಿ.ವಿ.ಸಂಘದ ವೈರಾಗ್ಯ ಮಲ್ಲಣಾರ್ಯ ಪ್ರಕಾಶನ-ಪ್ರಸಾರಾಂಗ, ಮಾನವಸಂಪನ್ಮೂಲ ಅಭಿವೃದ್ಧಿ ಸಂಸ್ಥೆ ಬಾಗಲಕೋಟೆ ಇವರ ಸಹಯೋಗದಲ್ಲಿ ಶಿಕ್ಷಣ ಇಲಾಖೆಯ ವಿಶ್ರಾಂತ ಉಪನಿರ್ದೇಶಕ ಸಿದ್ದರಾಮ ಮನಹಳ್ಳಿ ಸಂಪಾದಿತ ಬಾಗಲಕೊಟೆ ಜಿಲ್ಲೆ ; ಶಿಕ್ಷಣ ಸಂಪುಟ 1 ಮತ್ತು 2 ಕೃತಿಗಳ ಬಿಡುಗಡೆ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಅವರು ಮಾತನಾಡಿದರು. ಹಿಂದೆ ದೇವಸ್ಥಾನ, ಮಠಗಳು ಸೇರಿದಂತೆ ಸುಮಾರು 200ಕ್ಕೂ ಹೆಚ್ಚು ಶಾಲೆಗಳನ್ನು ಸಂಘದಿಂದ ನಡೆಸುತ್ತಿದ್ದರು, ಆ ಶಾಲೆಯ ಶಿಕ್ಷಕರಿಗೆ ಇಲ್ಲಿ ತರಬೇತಿ ನೀಡುವುದಕ್ಕಾಗಿಯೇ ಟಿಸಿಎಚ್ ಪ್ರಾರಂಭಿಸಿದರು ಎಂಬುದು ಇತಿಹಾಸದ ದಾಖಲೆಗಳಿಂದ ತಿಳಿದುಬರುತ್ತದೆ. ಜಿಲ್ಲೆಯಲ್ಲಿನ ಐತಿಹಾಸಿಕ ಶೈಕ್ಷಣಿಕ ಪ್ರಗತಿಯನ್ನು ಕುರಿತು ಈ ಬಾಗಲಕೋಟೆ ಜಿಲ್ಲೆ ಶಿಕ್ಷಣ ಸಂಪುಟಗಳು ಮಾಹಿತಿಯನ್ನು ಒದಗಿಸುತ್ತವೆ, ಅಲ್ಲದೆ ಈ ಜಿಲ್ಲೆಯ ಶೈಕ್ಷಣಿಕ ಕ್ಷೇತ್ರಕ್ಕೆ ಇವು ದಾಖಲೆಯಾಗಿ ಉಳಿಯುತ್ತವೆ ಎಂದು ಚರಂತಿಮಠ ಹೇಳಿದರು.

ಧಾರವಾಡದ ಶಿಕ್ಷಣ ತಜ್ಞ ಶಿವಶಂಕರ ಹಿರೇಮಠ ಕೃತಿಗಳ ಬಿಡುಗಡೆ ಮಾಡಿ ಮಾತನಾಡಿ, ಬದಲಾಗುತ್ತಿರುವ ಶೈಕ್ಷಣಿಕ ವ್ಯವಸ್ಥೆಯಲ್ಲಿ ಶಿಕ್ಷಕರು ಅತಿ ಹೆಚ್ಚು ಕ್ರಿಯಾಶೀಲರಾಗಿಬೇಕು. ವೃತ್ತಿ ನಿವೃತ್ತಿನಂತರವೂ ಚಿಂತಕರಾಗಿ ಮಾರ್ಗದರ್ಶನ ಮಾಡಬೇಕು ಎಂದರಲ್ಲದೇ, ಹಿಂದಿನ ಶೈಕ್ಷಣಿಕ ಬೆಳವಣಿಗೆಯನ್ನು ಮೆಲುಕು ಹಾಕಿದ ಅವರು ಆಯಾ ಕಾಲ ಘಟ್ಟದಲ್ಲಿ ಶಿಕ್ಷಣಕ್ಕೆ ಮಠ ಮಾನ್ಯಗಳು ನೀಡಿದ ಕೊಡುಗೆಯನ್ನು ವಿವರಿಸಿದರು. ಬಸವೇಶ್ವರ ಶಿಕ್ಷಣ ಮಹಾವಿದ್ಯಾಲಯದ ವಿಶ್ರಾಂತ ಉಪನಿರ್ದೇಶಕ ಡಾ.ವಿ.ಎ.ಬೆಕನಾಳ ಹಾಗೂ ಎಂ.ಜಿ.ದಾಸರ ಕೃತಿ ಪರಿಚಯ ಮಾಡಿದರು. ಸಂಸ್ಕೃತ ವಿದ್ವಾಂಸರಾದ ಪಂ.ಬಿಂದುಮಾಧವಾಚಾರ್ಯ ನಾಗಸಂಪಿಗೆ ಅಭಿನಂದನಾ ನುಡಿ ಸಲ್ಲಿಸಿದರು. ಪ್ರೊ. ಎನ್.ಜಿ.ಕರೂರ ಮಾತನಾಡಿದರು. ಇದೇ ಸಂದರ್ಭದಲ್ಲಿ ರಾಷ್ಟ್ರ, ರಾಜ್ಯ ಪಶಸ್ತಿ ಪುರಸ್ಕೃತ ಶಿಕ್ಷಕರಿಗೆ ಪುಸ್ತಕ ಸಮರ್ಪಣೆ ಮಾಡಲಾಯಿತು. ಬಿಎಚ್ಆರ್‌ಡಿ ನಿರ್ದೇಶಕ ಎಸ್.ಆರ್. ಮನಹಳ್ಳಿ ಸ್ವಾಗತಿಸಿ ಪ್ರಸ್ತಾವಿಕ ಮಾತನಾಡಿದರು, ಬಸವೇಶ್ವರ ಕಲಾ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಪ್ರಾರ್ಥನೆ ಸಲ್ಲಿಸಿದರು. ಸಂಘದ ಆಡಳಿತಾಧಿಕಾರಿ ಡಾ.ವಿ.ಎಸ್.ಕಟಗಿಹಳ್ಳಿಮಠ ವಂದಿಸಿದರು. ಶಿವಾನಂದ ಪೂಜಾರ ನಿರೂಪಿಸಿದರು. ವಿ.ಆರ್.ಶಿರೋಳ, ಪ್ರಸಾರಂಗ ನಿರ್ದೇಶಕ ಪಿ.ಎನ್.ಸಿಂಪಿ ಹಾಗೂ ಸಂಘದ ಸದಸ್ಯರು ಭಾಗವಹಿಸಿದ್ದರು.

# ಪೋಲಿಸ್‌ಗೆ ಚಾಕು ಇರಿದು ಪರಾರಿಯಾಗಲು ವಿಫಲಯತ್ನ
## ಗುಂಡಿಕ್ಕಿ ಅಂತರ್‌ರಾಜ್ಯ ಮಾದಕ ವಸ್ತುಗಳ ಸಾಗಾಟ ಆರೋಪಿ ಸೆರೆ





ಮಲ್ಲಮ ನುಡಿ ವಾರ್ತೆ

ಕಲಬುರಗಿ: ಜ.11: ಕಾರಿನಲ್ಲಿ ಮಾದಕವಸ್ತುಗಳನ್ನು ಸಾಗಿಸುತ್ತಿದ್ದ ಖಚಿತ ಭಾತ್ಮಿ ಮೇರೆಗೆ ಪೋಲಿಸರು ಕಾರ್ಯಾಚರಣೆ ಕೈಗೊಂಡಾಗ ಪೋಲಿಸರಿಗೆ ಚಾಕು ಇರಿದು ಪರಾರಿಯಾಗಲು ಯತ್ನಿಸುತ್ತಿದ್ದ ಅಂತರ್ ರಾಜ್ಯ ಮಾದಕ ವಸ್ತುಗಳ ಸಾಗಾಟದ ಆರೋಪಿಯ ಎಡ ಕಾಲಿಗೆ ಗುಂಡಿಕ್ಕಿ ಪೋಲಿಸರು ಸೆರೆ ಹಿಡಿದ ಘಟನೆ ನಗರದ ಹೊರವಲಯದ ತಾವರಗೇರಾ ಕ್ರಾಸ್ ಹದ್ದಾರಿಯಲ್ಲಿ ಶನಿವಾರ ಬೆಳಗಿನ ಜಾವ ನಡೆದಿದೆ.

ಬಂಧಿತ ಆರೋಪಿಯನ್ನು ನಗರದ ಮಕ್ತಂಪುರ ಬಡಾವಣೆಯ ನಿವಾಸಿ ಸುಪ್ರೀತ್ ಶೀತಲಕುಮಾರ್ ನವಲೆ (32) ಎಂದು ಗುರುತಿಸಲಾಗಿದೆ. ಘಟನೆಯಲ್ಲಿ ಪೇದೆ ಗುರುಮೂರ್ತಿ ಎಡಗೈಗೆ ಗಾಯವಾಗಿದೆ. ಇಬ್ಬರನ್ನೂ ಆಸ್ಪತ್ರೆಗೆ ಸೇರಿಸಲಾಗಿದೆ.

ಆರೋಪಿ ಅಕ್ರಮವಾಗಿ ಕಾರಿನಲ್ಲಿ ಡ್ರಗ್ಸ್ ಸಾಗಿಸುತ್ತಿದ್ದ ಎಂಬ ಖಚಿತ ಮಾಹಿತಿ ಮೇರೆಗೆ ಪೋಲಿಸರು ತಾವರಗೇರಾ ಕ್ರಾಸ್ ಬಳಿ ಕಾರು ನಿಲ್ಲಿಸಿ ತಪಾಸಣೆ ಮಾಡುವಾಗ ಆರೋಪಿ ಸುಪ್ರೀತ್ ಪೇದೆ ಗುರುಮೂರ್ತಿಯ ಮೇಲೆ ಚಾಕುವಿನಿಂದ ಹಲ್ಲೆ ಮಾಡಿದ್ದು, ಕೈಗೆ ರಕ್ತದ ಗಾಯಗಳಾಗಿವೆ. ಈ ವೇಳೆ ತಮ್ಮ ರಕ್ಷಣೆಗಾಗಿ ಚೌಕ್ ಪೋಲಿಸ್ ಠಾಣೆ-ಯ ಪಿಐ ರಾಘವೇಂದ್ರ ಅವರು ಆರೋಪಿ ಮೇಲೆ ಗುಂಡಿನ ದಾಳಿ ಮಾಡಿದ್ದಾರೆ. ದಾಳಿಯಿಂದಾಗಿ ಆರೋಪಿಯ ಕಾಲಿಗೆ ಗಾಯಗಳಾಗಿದ್ದು, ಆತನಿಗೆ ತಮ್ಮ ವಶಕ್ಕೆ ತೆ-ಗೆದುಕೊಂಡಿದ್ದಾರೆ.

ಫೈರಿಂಗ್ ಮಾಡಿದ ಪರಿಣಾಮ ಆರೋಪಿ ಗಾಯಗೊಂಡಿದ್ದು, ಜಿಮ್ಸ್ ಆಸ್ಪತ್ರೆಯ ಟ್ರಾಮಾ ಕೇರ್ ಸೆಂಟರ್ಗೆ ದಾಖಲು ಮಾಡಲಾಗಿದೆ. ಇನ್ನೂ ಪ್ರಕರಣ ಸಂಬಂಧ ಅಸ್ಪತ್ರೆಗೆ ಪೊಲೀಸ್ ಆಯುಕ್ತ ಡಾ. ಶರಣಪ್ಪ ಎಸ್.ಡಿ., ಅವರು ಭೇಟಿ ನೀಡಿ ಪರಿಶೀಲನೆ ಮಾಡಿದರು.

ಈ ಸಂದರ್ಭದಲ್ಲಿ ನಗರ ಪೋಲಿಸ್ ಆಯುಕ್ತ ಡಾ. ಶರಣಪ್ಪ ಎಸ್.ಡಿ., ಅವರು ಮಾಧ್ಯಮಗಳೊಂದಿಗೆ ಮಾತನಾಡಿ, ಖಚಿತ ಭಾತ್ಮಿ ಮೇರೆಗೆ ನಮ್ಮ ಪೋಲಿಸರು ತಾವರಗೇರಾ ಕ್ರಾಸ್ ಬಳಿ ಶಂಕಿತ ಕಾರನ್ನು ಪರಿಶೀಲಿಸಲು ತಡೆದಾಗ ಕಾರಿನಲ್ಲಿದ್ದ ಆರೋಪಿಯು ತನಿಖೆಗೆ ಸಹಕರಿಸದೇ ಪೋಲಿಸ್ ಮೇಲೆ ಚಾಕುವಿನಿಂದ ಹಲ್ಲೆ ಮಾಡಿದ್ದು, ಆಗ ರಕ್ಷಣೆಗಾಗಿ ಪಿಐ ಅವರು ಆರೋಪಿಯ ಕಾಲಿಗೆ ಗುಂಡಿಕ್ಕಿ ಆತನಿಗೆ ಸೆರೆ ಹಿಡಿಯಲಾಗಿದೆ ಎಂದರು.

ಆರೋಪಿಯ ಹಿನ್ನೆಲೆಯನ್ನು ಗಮನಿಸಿದಾಗ ಆತನ ಮೇಲೆ ಕಳೆದ 2016ರಿಂದ ಅಕ್ರಮ ಮಾದಕ ವಸ್ತುಗಳ ಸಾಗಣೆ ಮಾಡುತ್ತಿರುವ ನಾರ್ಕೋಟಿಕ್ ಡ್ರಗ್ಸ್ ಮತ್ತು ಸೈಕೋಟ್ರೋಪಿಕ್ ಸಬ್ಸ್ಟೆನ್ಸ್ ಆಕ್ಟ್ 1958 (ಎನ್‌ಡಿಪಿಎಸ್) ಒಟ್ಟು ಮೂರು ಪ್ರಕರಣಗಳು ದಾಖಲಾಗಿವೆ. ಜೊತೆಗೆ ತೆಲಂಗಾಣದ ಹೈದ್ರಾಬಾದ್‌ನಲ್ಲಿನಲ್ಲಿಯೂ ಸಹ ಅಕ್ರಮ ಮಾದಕ ವಸ್ತುಗಳ ಸಾಗಣೆ ಪ್ರಕರಣವೂ ಸಹ ದಾಖಲಾಗಿದೆ. ಹೀಗಾಗಿ ಆತನ ಕುರಿತು ಹೆಚ್ಚಿನ ತನಿಖೆ ಕೈಗೊಳ್ಳಬೇಕಾಗಿದೆ ಎಂದು ತಿಳಿಸಿದರು.

ಮಾದಕವಸ್ತುಗಳನ್ನು ಎಲ್ಲಿಂದ ತರುತ್ತಿದ್ದ ಹಾಗೂ ಎಲ್ಲಿಗೆ ಪೂರೈಸುತ್ತಿದ್ದ ಎಂಬುದರ ಕುರಿತು ಸಮಗ್ರ ತನಿಖೆಯನ್ನು ಕೈಗೊಳ್ಳುವುದಾಗಿ ಹೇಳಿದ ಅವರು, ಸದ್ಯಕ್ಕೆ ಆರೋಪಿಯ ಕಾರು ಹಾಗೂ ಅಕ್ರಮ ಮಾದಕ ವಸ್ತುಗಳನ್ನು ವಶಕ್ಕೆ ತೆಗೆದುಕೊಳ್ಳಲಾಗಿದ್ದು, ಕೈಗೊಳ್ಳಬೇಕಾದ ವೈಜ್ಞಾನಿಕ ಕಾನೂನು ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದರು.

# ಈಡಿಸ್ ಸೊಳ್ಳೆಗಳು ಮೊಟ್ಟೆ ಇಡದಂತೆ ಜಾಗ್ರತೆ ವಹಿಸಿ: ಡಾ.ಅಬ್ದುಲ್ಲಾ



ಮಲ್ಲಮ ನುಡಿ ವಾರ್ತೆ

ಬಳ್ಳಾರಿ,ಜ.11:ಸಾರ್ವಜನಿಕರು ತಮ್ಮ ಮನೆಯ ಹೊರಗಿನ ನೀರು ಸಂಗ್ರಹಕಗಳಿಗೆ ಸರಿಯಾಗಿ ಮುಚ್ಚಳ ಮುಚ್ಚುವ ಮೂಲಕ ಈಡಿಸ್ ಸೊಳ್ಳೆಗಳು ಮೊಟ್ಟೆ ಇಡದಂತೆ ಜಾಗ್ರತೆ ವಹಿಸಬೇಕು ಎಂದು ಜಿಲ್ಲಾ ರೋಗವಾಹಕ ಆಶ್ರೀತ ರೋಗಗಳ ನಿಯಂತ್ರಣಾಧಿಕಾರಿ ಡಾ.ಅಬ್ದುಲ್ಲಾ ಅವರು ತಿಳಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಅರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ರೋಗವಾಹಕ ಆಶ್ರೀತ ರೋಗಗಳ ನಿಯಂತ್ರಣ ವಿಭಾಗದ ಸಹಕಾರದಲ್ಲಿ ಲಾರ್ವಾ ಸಮೀಕ್ಷಾ ಕಾರ್ಯದ ವಿಶೇಷ ಅಭಿಯಾನದ ಹಿನ್ನೆಲೆಯಲ್ಲಿ ನಗರದ ಕಾಟಿಗುಡ್ಡ ವ್ಯಾಪ್ತಿಯಲ್ಲಿ ಶುಕ್ರವಾರ ಮನೆ ಭೇಟಿಯ ಸಮಿಕ್ಷಾ ಕಾರ್ಯ ಪರಿಶೀಲಿಸಿ ಅವರು ಮಾತನಾಡಿದರು.

ಡೆಂಗ್ಯು ರೋಗ ಹರಡುವ ಈಡಿಸ್ ಸೊಳ್ಳೆಗಳ ಸಂತತಿ ನಿರ್ಮೂಲನೆ ಮಾಡಲು ಪ್ರತಿಯೊಬ್ಬರೂ ಮನೆಯ ಸುತ್ತಲೂ ನೀರು ನಿಲ್ಲದಂತೆ ಸ್ವಚ್ಚವಾಗಿಟ್ಟುಕೊಳ್ಳಬೇಕು. ಈ ಮೂಲಕ ಡೆಂಗ್ಯು ರೋಗ ಹರಡುವ ಈಡಿಸ್ ಇಜಿಪ್ಟೈ ಸೊಳ್ಳೆಗಳ ಉತ್ಪತ್ತಿಯನ್ನು ತಡೆಯಲು ಸಾರ್ವಜನಿಕರು ಸಹಕರಿಸಬೇಕು ಎಂದು ಮನವಿ ಮಾಡಿದರು.

ಡೆಂಗ್ಯು ಪ್ರಕರಣಗಳು ಗಣನೀಯ ನಿಯಂತ್ರಣವಾಗಿದ್ದು, ವಿಶೇಷವಾಗಿ ನೀರು ಸಂಗ್ರಹಕಗಳಾದ ಡ್ರಮ್ ಬ್ಯಾರಲ್, ಕಲ್ಲಿನ ಡೋಣಿ, ಸಿಮೆಂಟ್ ತೆ-ಊಟ್ಟಿ ಮುಂತಾದವುಗಳನ್ನು ವಾರದಲ್ಲಿ ಒಮ್ಮೆ ಚೆನ್ನಾಗಿ ತಿಕ್ಕಿ ತೊಳೆದು ನೀರು ತುಂಬುವುದಕ್ಕೆ ಆದ್ಯತೆ ನೀಡಬೇಕು ಎಂದರು. ಸ್ವಚ್ಚಗೊಳಿಸಲು ಸಾಧ್ಯವಿಲ್ಲದ ಪರಿಕರಗಳಿಗೆ ಟೆಮಿಫಾಸ್ ದ್ರಾವಣವನ್ನು ಹಾಕಲು ಸಹಕರಿಸಬೇಕು. ಅಲ್ಲದೆ ಈ ಖಾಯಿಲೆಗೆ ನಿರ್ದಿಷ್ಟ ಚಿಕಿತ್ಸೆ ಇಲ್ಲದಿರುವುದರಿಂದ ಜ್ವರ, ತಲೆನೋವು, ಕಣ್ಣಿನ ಹಿಂಭಾಗದಲ್ಲಿ ನೋವು, ಮುಂತಾದವು ಕಂಡು ಬಂದರೆ ತಡ ಮಾಡದೆ ಹತ್ತಿರದ ಆಸ್ಪತ್ರೆಗೆ ಭೇಟಿ ನೀಡಬೇಕು ಎಂದು ಕೋರಿದರು.

ಈ ಸಂದರ್ಭದಲ್ಲಿ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಎನ್ ವಿಬಿಡಿಸಿಪಿ ಜಿಲ್ಲಾ ಸಲಹೆಗಾರರು ಪ್ರತಾಪ್, ಆರೋಗ್ಯ ನಿರೀಕ್ಷಣಾಧಿಕಾರಿ ಶರತ್, ಚೇತನ್, ಪ್ರಾಥಮಿಕ ಅರೋಗ್ಯ ಸಂರಕ್ಷಣಾಧಿಕಾರಿ ಶ್ರೀಲಕ್ಷ್ಮೀ, ಮಲೇರಿಯಾ ಲಿಂಕ್ ವರ್ಕರ್ ಸೋಮಶೇಖರ ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

# 13 ರಂದು ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಬೃಹತ ಪ್ರತಿಭಟನಾ ಮೆರವಣಿಗೆ

ಮಲ್ಲಮ ನುಡಿ ವಾರ್ತೆ

ಬೀದರ:ಜ.11: ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಬೀದರ ಜಿಲ್ಲಾ ಘಟಕ ವತಿಯಿಂದ. ದಿನಾಂಕ 13/01/25 ಸೋಮವಾರ ದಂದು ಬೆಳಗ್ಗೆ 11.30 ಕ್ಕೆ ಶಾಸನಬದ್ಧ ಒಋಕ ಬೆಲೆಗಾಗಿ ಹಾಗೂ ಸ್ವಾಮಿನಾಥನ್ (ಅ2 +50) ವರದಿಯಂತೆ ಜಾರಿಗಾಗಿ ದೇಹಲಿಯಲ್ಲಿ ಅಮರಣ ಉಪವಾಸ ಸತ್ಯಾಗ್ರಹ ಕೈಗೊಂಡಿರುವ ರೈತ ಮುಖಂಡರಾದ ಶ್ರಿ ಜಗಜೀತ ಸಿಂಗ ದಲ್ಲೇವಾಲರನ್ನು ಬೆಂಬಲಿಸಲು & ಜಿಲ್ಲೆಯ ಸೋಯಾಬೀನ್ ಮಾರಟಕ್ಕಾಗಿ ನೊಂದಣಿ ಮಾಡಿಸಿದ ಎಲ್ಲಾ ರೈತರಿಂದ ಖರಿದಿಸಿಲ್ಲ. ತಕ್ಷಣ ಖರೀದಿಗೆ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಲು, ಬೀದರ ಜಿಲ್ಲಾ ಅಧಿಕಾರಿಗಳ ಕಚೇರಿ ಮುಂದೆ ಬೃಹತ ಪ್ರತಿಭಟನಾ ಮೆರವಣಿಗೆ ಹಮ್ಮಿಕೊಳ್ಳಬೇಕೆಂಬ ನಿರ್ಣಯ ಇಂದಿನ ತುರ್ತು ಸಭೆಯಲ್ಲಿ ನಿರಣಯಿಸಿದಂತೆ ಜಿಲ್ಲೆಯ ಎಲ್ಲಾ ಪದಾಧಿಕಾರಿಗಳು ಹಾಗೂ ಪ್ರತಿ ತಾಲೂಕ ಅಧ್ಯಕ್ಷರು ಹಾಗೂ ಎಲ್ಲಾ ಪದಾಧಿಕಾರಿಗಳು & ಹೆಚ್ಚಿನ ಸಂಖ್ಯೆಯಲ್ಲಿ ರೈತರು ಆಗಮಿಸಲು ಜಿಲ್ಲಾ ಕ.ರಾ. ರೈತ ಸಂಘದ ಜಿಲ್ಲಾಧ್ಯಕ್ಷರಾದ ಸಿದ್ದರಾಮಪ್ಪ ಅಣದೂರೆ ಅವರು ಪತ್ರಿಕಾ ಪ್ರಕಟಣೆ ಮೂಲಕ ಮನವಿ ಮಾಡಿದ್ದಾರೆ.

# ಅಭಿಮಾನಿಗಳಿಂದ ಜನಾರ್ದನರೆಡ್ಡಿ ಅವರ ಹುಟ್ಟು ಹಬ್ಬ ಆಚರಣೆ



ಮಲ್ಲಮ ನುಡಿ ವಾರ್ತೆ

ಬಳ್ಳಾರಿ: ಜ.11: ಜಿಲ್ಲೆಯ ಬಿಜೆಪಿ ಹಿರಿಯ ಧುರೀಣ, ಮಾಜಿ ಸಚಿವರು ಹಾಗೂ ಗಂಗಾವತಿ ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಜನಾರ್ದನರೆಡ್ಡಿ ಅವರ ಹುಟ್ಟು ಹಬ್ಬದ ಆಚರಣೆಯನ್ನು ಅದ್ಧೂ-ರಿಯಾಗಿ ಆಚರಿಸಲಾಯಿತು.

ರೆಡ್ಡಿ ಅವರ ಧರ್ಮಪತ್ನಿ ಲಕ್ಷ್ಮೀ ಅರುಣಾ ರೆಡ್ಡಿ, ಪುತ್ರಿ ಬ್ರಹ್ಮಿಣಿ ಹಾಗೂ ಮೊಮ್ಮಗಳು ಹಿರಿಯರ, ದೇವರ ಹಾಗೂ ಗೋಪೂಜೆ ನೆರವೇರಿಸಿ ಜನಾರ್ದನರೆಡ್ಡಿ ಅವರ ಹುಟ್ಟು ಹಬ್ಬದ ಶುಭಾಶಯ ಕೋರಿದರು. ಬಳಿಕ ಕನಕ ದುರ್ಗಮ್ಮ ದೇವಸ್ಥಾನಕ್ಕೆ ತೆರಳಿ ಅಮ್ಮನ ದರ್ಶನ ಮಾಡಿ ಪೂಜೆ ಸಲ್ಲಿಸಲಾಯಿತು. ಇದೇ ವೇಳೆ ಅಭಿಮಾನಿಗಳು ಮತ್ತು ಬಿಜೆಪಿ ಕಾರ್ಯಕರ್ತರು 5001 ತೆಂಗಿನ ಕಾಯಿ ಹೊಡೆಯುವ ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ನಂತರ ಕನಕದುರ್ಗಮ್ಮ ದೇವಿಯ ಅನ್ನಛತ್ರದಲ್ಲಿ ಭಕ್ತರಿಗೆ ಪ್ರಸಾದ ವಿತರಣೆ ಮಾಡಲಾಯಿತು.

ಮನೆಯಿಂದ ದೇವಸ್ಥಾನಕ್ಕೆ ಬರುವ ಮುನ್ನ ಜನಾರ್ದನ್ ರೆಡ್ಡಿ ಅವರ ನಿವಾಸದ ಹತ್ತಿರ 58 ಕೇಕ್ ಕತ್ತರಿಸುವ ಮೂಲಕ ಹುಟ್ಟುಹಬ್ಬದ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಕಾರ್ಯಕರ್ತರು ತಮ್ಮ ನಾಯಕನ ಹುಟ್ಟು ಹಬ್ಬದ ನಿಮಿತ್ತ ರೆಡ್ಡಿ ನಿವಾಸದ ಬಳಿ ರಕ್ತದಾನ ಶಿಬಿರ ನಡೆಸಿದರು. ವೇದಿಕೆ ಕಾರ್ಯಕ್ರಮದಲ್ಲಿ ರೆಡ್ಡಿ ಅವರು ತಮ್ಮ ಅಭಿಮಾನಿಗಳನ್ನುದ್ದೇಶಿಸಿ ಮಾತನಾಡಿ ನಗರದ ಅಭಿವೃದ್ಧಿ ಹಾಗೂ ಕಾರ್ಯಕರ್ತರ ಹಿತಾಸಕ್ತಿ ಕಾಪಾಡಿಕೊಂಡು ಹೋಗುವುದಾಗಿ ವಾಗ್ದಾನ ನೀಡಿದರು.

ನಗರದ ಅನಾಥಾಶ್ರಮ, ವೃದ್ಧಾಶ್ರಮ ಮತ್ತು ವಿಶೇಷ ಚೇತನರ ಸ್ಥಳಗಳಿಗೆ ತೆರಳಿ ಅವರೊಂದಿಗೆ ಸಮಯ ಕಳೆದು ಕುಶಲೋಪರಿ ವಿಚಾರಿಸಿದರು. ಭೋಜನದ ವ್ಯವಸ್ಥೆಯನ್ನೂ ಮಾಡಿದ್ದ ಅವರು ಮಧ್ಯಾಹ್ನ ಜಿಲ್ಲಾಸ್ಪತ್ರೆಯ ರೋಗಿಗಳಿಗೆ ಹಣ್ಣು ಮತ್ತು ಬ್ರೆಡ್ ವಿತರಣೆ ಮಾಡಿದರು. ಆಸ್ಪತ್ರೆಯ ಹೊರಾಂಗಣದಲ್ಲಿ ರೋಗಿಗಳ ಸಂಬಂಧಿಕರಿಗೆ ಊಟ ವಿತರಿಸಿದರು.

ಈ ವೇಳೆ ಬಿಜೆಪಿಯ ಮುಖಂಡರಾದ ವೀರಶೇಖರ ರೆಡ್ಡಿ, ಶಂಕರಪ್ಪ, ಕೆ.ಪರಮೇಶ್ವರ, ಶ್ರೀನಿವಾಸ್ ಮೋತ್ಕರ್, ಕೆ.ಹನುಮಂತು, ಕೆ.ಎಸ್.ದಿವಾಕರ್, ಕೆ.ಎಸ್. ಅಶೋಕ್, ಮಲ್ಲಿಕಾರ್ಜುನ ಆಚಾರ್, ಶರಣ್ ಕುಮಾರ್ ಎಸ್.ಆರ್., ಸೇರಿದಂತೆ ಅನೇಕ ಮುಖಂಡರು, ಕಾರ್ಯಕರ್ತರು, ಹಿತೈಷಿಗಳು, ಬಂಧುಗಳು ಇದ್ದರು.




Printed, Published and Owned by : Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad - 585330.
Editor: Ramesh Reddy, Office Ph. No: +91 9449732000.